ಕರ್ನಾಟಕ ಸರ್ಕಾರ

# ತಿಳಿ ಕನ್ನಡ

## ದ್ವಿತೀಯ ಭಾಷಾ ಕನ್ನಡ ಪಠ್ಯಪುಸ್ತಕ

(ಪರಿಷ್ಕೃತ)

೯

## ಒಂಬತ್ತನೆಯ ತರಗತಿ

©KTBS
Not to be republished

**ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)**
ನಂ.೪, ೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ,
ಮೂರನೆಯ ಹಂತ, ಬೆಂಗಳೂರು – ೫೬೦ ೦೮೫

# ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು :**

**ಪ್ರೊ. ಕೆ. ಎಸ್. ಮಧುಸೂದನ**

ನಿವೃತ್ತ ಪ್ರಾಂಶುಪಾಲರು, ಎ.ಪಿ.ಎಸ್. ಕಲಾ ಮತ್ತು ವಿಜ್ಞಾನ ಪದವಿ ಕಾಲೇಜು, ಬೆಂಗಳೂರು – ೧೯

**ಸದಸ್ಯರು :**

**ಶ್ರೀ ಎಂ. ಆರ್. ಸುರೇಶ,** ಬಿ.ಆರ್.ಪಿ., ಬಿ.ಆರ್.ಸಿ., ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ.

**ಶ್ರೀ ಸಿ. ಬಿ. ವೀರಭದ್ರಾಚಾರಿ,** ಸಹ ಶಿಕ್ಷಕರು, ಬಾಲಕರ ಪದವಿಪೂರ್ವ ಕಾಲೇಜು, ಮಾಲೂರು, ಕೋಲಾರ ಜಿಲ್ಲೆ.

**ಶ್ರೀ ಅಸೀಫ್ ಅಹ್ಮದ್,** ಸಹ ಶಿಕ್ಷಕರು, ದ ಸಿಟಿ ಅಕಾಡೆಮಿ, ಜಾಮ್ ಜಾಮ್ ಕಾಲೋನಿ, ರಿಂಗ್ ರೋಡ್, ಕಲಬುರಗಿ.

**ಶ್ರೀ ಸುಬ್ಬರಾಯ ಶರ್ಮ,** ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಸಜ್ಜಲೂರು, ಮಳವಳ್ಳಿ ತಾ. ಮಂಡ್ಯ ಜಿಲ್ಲೆ.

**ಶ್ರೀ ರವಿಕುಮಾರ ಕೆ. ಎಂ.,** ಸಹ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಎಸ್. ಮಾದಾಪುರ, ಕಡೂರು ತಾ. ಚಿಕ್ಕಮಗಳೂರು ಜಿಲ್ಲೆ.

**ಶ್ರೀ ಸುಂದರ ತೋಡಾರ್,** ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಗೋಳ್ತಮಜಲು, ಬಂಟ್ವಾಳ ತಾ. ದಕ್ಷಿಣ ಕನ್ನಡ ಜಿಲ್ಲೆ – ೦೫

**ಪರಿಶೀಲಕರು :**

**ಶ್ರೀ ಎ. ಬಿ. ಚಂದ್ರಶೇಖರ್,** ಪ್ರಾಧ್ಯಾಪಕರು, ಶ್ರೀ ಆದಿಚುಂಚನಗಿರಿ, ಶಿಕ್ಷಣ ಮಹಾವಿದ್ಯಾಲಯ, ಚನ್ನರಾಯಪಟ್ಟಣ.

**ಸಂಪಾದಕ ಮಂಡಳಿ ಸದಸ್ಯರು :**

೧. **ಪ್ರೊ. ಚಂದ್ರಶೇಖರ ಪಾಟೀಲ್,** ಸಾಹಿತಿಗಳು, ಸಂಕ್ರಮಣ ಪ್ರಕಾಶನ, ಎಲಚೇನಹಳ್ಳಿ, ಜೆ.ಪಿ. ನಗರ, ಬೆಂಗಳೂರು–೭೮

೨. **ಡಾ. ಕೆ. ಮರುಳಸಿದ್ಧಪ್ಪ,** ಸಾಹಿತಿಗಳು, ನಂ.೧೩೭, ೧೨ ನೇ ಕ್ರಾಸ್, ಜೆ.ಪಿ.ನಗರ, ಬೆಂಗಳೂರು–೭೮

೩. **ಪ್ರೊ. ಸಾ.ಶಿ. ಮರುಳಯ್ಯ,** ಸಾಹಿತಿಗಳು, ರಾಗಿಣಿ, ಹಂಪಿನಗರ, ಬೆಂಗಳೂರು.

೪. **ಪ್ರೊ. ಅ.ರಾ. ಮಿತ್ರ,** ಸಾಹಿತಿಗಳು, ಕೆ.ಎಚ್.ಬಿ. ಕಾಲೋನಿ, ಯಲಹಂಕ, ಬೆಂಗಳೂರು.

೫. **ಡಾ. ವಿಷ್ಣು ಎಂ. ಶಿಂದೆ,** ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಪುರ.

**ಮುಖ್ಯ ಸಂಯೋಜಕರು :**

**ಪ್ರೊ. ಜಿ.ಎಸ್. ಮುಡಂಬಡಿತ್ತಾಯ**

ಪಠ್ಯಕ್ರಮ ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ :**

೧. **ಶ್ರೀ ನಾಗೇಂದ್ರಕುಮಾರ್,** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

೨. **ಶ್ರೀಮತಿ ಸಿ. ನಾಗಮಣಿ,** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

**ಕಾರ್ಯಕ್ರಮ ಸಂಯೋಜಕರು :**

**ಶ್ರೀ ಪಾಂಡುರಂಗ,** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

©KTBS Not to be republished

# ಮುನ್ನುಡಿ

೨೦೦೫ ರ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿಗೆ ಅನುಗುಣವಾಗಿ ಕರ್ನಾಟಕ ಪಠ್ಯಪುಸ್ತಕ ಸಂಘವು ೨೦೧೦ ನೆಯ ಸಾಲಿನಿಂದ ಒಂದರಿಂದ ಹತ್ತನೆಯ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು ೧೨ ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ೭ ಮಾಧ್ಯಮಗಳಲ್ಲಿ ಕೋರ್ ವಿಷಯಗಳನ್ನು ರಚನೆ ಮಾಡಲಾಗುತ್ತಿದೆ. ೧ ರಿಂದ ೫ ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ೬ ರಿಂದ ೧೦ ನೇ ತರಗತಿಯವರೆಗೆ ಕೋರ್‌ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಿರುತ್ತವೆ.

೨೦೦೫ ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಅವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಅವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು
- ವಿಷಯಗಳ ಮೇರೆಗಳನ್ನು ಮುರಿದು ಅವುಗಳ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳನ್ನು ಕೆಳಗಿನ ಮೂಲಭೂತ ವಿಧಾನಗಳ ಆಧಾರದ ಮೇಲೆ ರಚಿಸಲಾಗಿದೆ. ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach) ಹಾಗೂ ಸುರುಳಿಯಾಕಾರದ ವಿಧಾನ (Spiral Approach).

ಪಠ್ಯಪುಸ್ತಕಗಳಲ್ಲಿರುವ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಅವಶ್ಯಕ ಭಾರತೀಯ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾಪೂರಕ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

©KTBS Not to be republished

ಭಾಷಾ ಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆ ಹಾಗೂ ಮಕ್ಕಳ ಅಭ್ಯಾಸ ಪುಸ್ತಕಗಳಲ್ಲಿ ಅನೇಕ ಚಟುವಟಿಕೆಗಳನ್ನು ಮಕ್ಕಳಿಂದ ಮಾಡಿಸಿ ಅವರಲ್ಲಿ ಸಂಬಂಧಪಟ್ಟ ಸಾಮರ್ಥ್ಯ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲಗಳ ಸಂವರ್ಧನೆಯೇ ಕಲಿಕೆಯ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ(learning to learn) ಹಾಗೂ ಕಲಿತುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ವೃದ್ಧಿಮಾಡುತ್ತದೆ. ಪ್ರತಿ ಘಟಕದಲ್ಲಿಯೂ ಕೆಲವು ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಜೋಡಿಸಲಾಗಿದೆ. ಅವುಗಳನ್ನು ಮಕ್ಕಳೇ ಕಂಡುಹಿಡಿದು, ಚರ್ಚಿಸಿ ಜೀವನದಲ್ಲಿ ಅವುಗಳ ಅರಿವನ್ನುಂಟುಮಾಡಿಕೊಳ್ಳುವಂತೆ ಮಾಡಬೇಕು.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ ಮತ್ತು ಸಂಪಾದಕ ಮಂಡಳಿಯ ಸದಸ್ಯರಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕವಿಗಳ ಹಾಗೂ ಸಾಹಿತಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಇದಕ್ಕೆ ತಮ್ಮ ಒಪ್ಪಿಗೆಯನ್ನು ನೀಡಿರುವ ಕವಿಗಳಿಗೆ ಹಾಗೂ ಸಾಹಿತಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

**ಪ್ರೊ. ಜಿ. ಎಸ್. ಮುಡಂಬಡಿತ್ತಾಯ**
ಮುಖ್ಯ ಸಂಯೋಜಕರು
ಪಠ್ಯವಸ್ತು ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

**ನಾಗೇಂದ್ರ ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು

©KTBS Not to be republished

## ಪಾಠ ಮಾಡುವ ಮುನ್ನ...

ಹದಿಹರೆಯದ ಹುಡುಗರಿಗೆ ಕನ್ನಡ ಕಲಿಸುವುದು ಎಂದರೇನು? ವಾಸ್ತವವಾಗಿ ಕನ್ನಡ ಕಲಿಸುವುದು ಎಂದರೆ ಕನ್ನಡವನ್ನು ಕೇಳಿಸಿಕೊಳ್ಳುವುದು, ಅರ್ಥಮಾಡಿಕೊಳ್ಳುವುದು, ಅರ್ಥ ಮಾಡಿಕೊಂಡದ್ದನ್ನು ಚೆನ್ನಾಗಿ ಅಭಿವ್ಯಕ್ತಿಸುವುದು ಹಾಗೂ ತಮಗೆ ಉಂಟಾದ ಭಾವನೆಗಳು ಮತ್ತು ಆಲೋಚನೆಗಳನ್ನು ತಪ್ಪಿಲ್ಲದಂತೆ ಕನ್ನಡದಲ್ಲಿ ಬರೆಯುವ ಹಾಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವುದು – ಇವೇ ಆಗಿದೆ. ಈ ಅಂಶಗಳನ್ನು ಶೂನ್ಯದಲ್ಲಿ ಕಲಿಸಿಕೊಡಲಾಗುವುದಿಲ್ಲ. ಇದಕ್ಕೆ ಪೂರಕವಾಗಿ ಒಂದು ಒಳ್ಳೆಯ ಪಠ್ಯವಿರಬೇಕಾಗುತ್ತದೆ. ಇಂತಹ ಪಠ್ಯವನ್ನು ಸಿದ್ಧಪಡಿಸುವಾಗ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿರುವ ತರಗತಿ, ಅವರ ವಯೋಮಾನವನ್ನು ಗಮನದಲ್ಲಿರಿಸಿಕೊಂಡು, ಒಟ್ಟು ಕನ್ನಡ ಭಾಷೆ, ಸಾಹಿತ್ಯ ಹಾಗೂ ಸಂಸ್ಕೃತಿಗಳ ಪರಂಪರೆಯನ್ನು ಕಟ್ಟಿ ಕೊಟ್ಟಿರುವ ಬರೆವಣಿಗೆಯ ಪ್ರಾತಿನಿಧಿಕ ಪಠ್ಯಕ್ರಮವೊಂದನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಈ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಈ ಪಠ್ಯವನ್ನು ಸಿದ್ಧಗೊಳಿಸಿದೆ.

ವಿದ್ಯಾರ್ಥಿಗಳು ಮೇಲಿನ ಅಂಶಗಳನ್ನು ಕಲಿಯುವುದರ ಜೊತೆಗೆ ಒಳ್ಳೆಯ ಅಭಿರುಚಿ, ವಾಚನಾಸಕ್ತಿ, ಬದುಕಿನ ಘನತೆಯನ್ನು ಕುರಿತ ಗೌರವ, ವಿವಿಧ ಕಾವ್ಯಶಾಸ್ತ್ರ ಕಲಾ ವಿನೋದಗಳನ್ನು ಕುರಿತಂತೆ ಪ್ರಜ್ಞಾಪೂರ್ವಕ ಎಚ್ಚರ, ವಿವೇಕಯುತ ವಸ್ತುನಿಷ್ಠ ಚಿಂತನೆ, ಜೀವನ ಪ್ರೀತಿ – ಇವುಗಳನ್ನು ಈ ಪಠ್ಯದ ಮೂಲಕ ಕುದುರಿಸಿಕೊಳ್ಳುತ್ತಾರೆ ಎಂಬುದು ಪಠ್ಯಪುಸ್ತಕ ರಚನಾ ಸಮಿತಿಯ ಆಶಯ. ಈ ನಿಟ್ಟಿನಲ್ಲಿ, ಬೋಧನೆ ಮಾಡುವ ಅಧ್ಯಾಪಕರ ಪಾತ್ರ ತುಂಬಾ ಜವಾಬ್ದಾರಿಯುತವಾದದ್ದು.

ನಾಡಿನ ಮಹತ್ವದ ಲೇಖಕರ ಕಾವ್ಯ, ವೈಚಾರಿಕ ಬರೆವಣಿಗೆ, ಪ್ರಬಂಧ ಮುಂತಾದ ಲೇಖನಗಳು, ಅವುಗಳಿಗೆ ಪೂರಕವಾಗಿ ನೀಡಿರುವ ವ್ಯಾಕರಣ ವಿಶೇಷ, ಭಾಷಾವಿಚಾರ, ಅಭ್ಯಾಸ ಮುಂತಾದವುಗಳನ್ನು ವಿದ್ಯಾರ್ಥಿಗಳಿಂದ ಅನುಷ್ಠಾನಕ್ಕೆ ತರಿಸಿ, ಪಠ್ಯಭಾಗದಲ್ಲಿನ ಸೂಕ್ಷ್ಮಾಂಶಗಳು ಹಾಗೂ ಒಳನೋಟಗಳನ್ನು ವಿದ್ಯಾರ್ಥಿಗಳ ಮನಸ್ಸಿಗೆ ರವಾನೆಯಾಗುವಂತೆ ಪಾಠ ಮಾಡುವ ಪ್ರಕ್ರಿಯೆಯಲ್ಲಿ ಅಧ್ಯಾಪಕರು ಕ್ರಿಯಾತ್ಮಕವಾಗಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಶೈಕ್ಷಣಿಕ ಹೊರಸಂಚಾರದಂತಹ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳಿಗೆ ವಿಷಯ ಮನನ ಮಾಡಿಕೊಡಬಹುದು. ಶಿಕ್ಷಕರು ವಿದ್ಯಾರ್ಥಿಗಳನ್ನು ಧರ್ಮಾತೀತವಾಗಿ ವೈಚಾರಿಕವಾಗಿ ಬಲಪಡಿಸಬೇಕಾದ್ದು ಅಗತ್ಯ. ಇದಕ್ಕೆ ಈ ಪಠ್ಯ ನೆರವು ನೀಡಿದರೆ ನಮ್ಮ ಶ್ರಮವು ಸಾರ್ಥಕ.

ಮೇಲ್ಕಂಡ ವಿಷಯಗಳನ್ನು ಕುರಿತು ಜಿಜ್ಞಾಸೆ ಮಾಡಿ ಒಂದು ಒಳ್ಳೆಯ ಪಠ್ಯವೆಂದು ಸಮಿತಿಯು ನಂಬಿರುವ ಈ ಪಠ್ಯವನ್ನು ಅಣಿಗೊಳಿಸಲು ಕ್ರಿಯಾತ್ಮಕವಾಗಿ ವಿವಿಧ ನೆಲೆಗಳಲ್ಲಿ ನೆರವು ನೀಡಿರುವ ಕರ್ನಾಟಕ ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕ ನಿರ್ದೇಶಕರು ಮತ್ತು ಉಪ ನಿರ್ದೇಶಕರು ಹಾಗೂ ಸಂಯೋಜಕರಾದ ಪ್ರೊ. ಜಿ.ಎಸ್. ಮುಡಂಬಡಿತ್ತಾಯ, ಕಾರ್ಯಕ್ರಮ ಸಂಯೋಜಕ ಹಾಗೂ ಹಿರಿಯ ಸಹಾಯಕ ನಿರ್ದೇಶಕರಾದ ಶ್ರೀ ಪಾಂಡುರಂಗ ಮತ್ತು ಪರಿಶೀಲಕ ಶ್ರೀ ಎ.ಬಿ.ಚಂದ್ರಶೇಖರ್ ಹಾಗೂ ಸಮಿತಿ ಸದಸ್ಯರು – ಇವರುಗಳನ್ನು ಕೃತಜ್ಞತೆಗಳಿಂದ ಸ್ಮರಿಸಿಕೊಳ್ಳುತ್ತೇನೆ. ಸಂಪಾದಕ ಮಂಡಳಿ ಸದಸ್ಯರ ಸೂಕ್ತ ಸಲಹೆ ಮಾರ್ಗದರ್ಶನಗಳಿಗೆ ನಾನು ವಿಶೇಷವಾಗಿ ಋಣಿಯಾಗಿದ್ದೇನೆ.

**ಕೆ. ಎಸ್. ಮಧುಸೂದನ**

ಅಧ್ಯಕ್ಷರು, ತಿಳಿ ಕನ್ನಡ – ೯

ಪಠ್ಯಪುಸ್ತಕ ರಚನಾ ಸಮಿತಿ

©KTBS Not to be republished

# ಪಠ್ಯಪುಸ್ತಕ ಪರಿಷ್ಕರಣ ಸಮಿತಿಗಳ ವಿವರ

**ಸರ್ವಾಧ್ಯಕ್ಷರು**

**ಪ್ರೊ. ಬರಗೂರು ರಾಮಚಂದ್ರಪ್ಪ**

ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೮೫

**ಅಧ್ಯಕ್ಷರು**

**ಡಾ. ಕೆಂಪೇಗೌಡ**

ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೬

**ಸದಸ್ಯರು**

**ಡಾ. ಗಣೇಶ್ ಜಿ. ಎಂ.**
ಸಹಾಯಕ ಪ್ರಾಧ್ಯಾಪಕರು, ಎಂ.ಎಲ್.ಎಂ.ಎನ್.
ಶಿಕ್ಷಣ ಮಹಾವಿದ್ಯಾಲಯ, ಜ್ಯೋತಿನಗರ, ಚಿಕ್ಕಮಗಳೂರು.

**ಡಾ. ಕೆ. ಷರೀಫಾ**
ಲೇಖಕಿ, ನಂ.೫/ಎ ೧ನೇ ಮಹಡಿ, ೧ನೇ ಬ್ಲಾಕ್,
೨ನೇ ಕ್ರಾಸ್, ಆರ್.ಟಿ. ನಗರ, ಬೆಂಗಳೂರು.

**ಶ್ರೀ ನಾಗರಾಜಾಚಾರಿ**
ಕನ್ನಡ ಶಿಕ್ಷಕರು, ಸರ್ಕಾರಿ ಉರ್ದು ಪ್ರೌಢಶಾಲೆ,
ಡಾ.ಟಿ.ಸಿ.ಎಂ. ರಾಯನ್ ರಸ್ತೆ, ಬೆಂಗಳೂರು.

**ಡಾ. ಬಂಗಾರಿಮಠ ಎಸ್. ವಿ.**
ಮುಖ್ಯಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,
ಮಡಕಲಕಟ್ಟಿ, ಧಾರವಾಡ ಜಿಲ್ಲೆ.

**ಶ್ರೀ ಪ್ರಕಾಶ್ ಎಸ್.**
ಸಿ.ಆರ್.ಪಿ. ಕ್ಷೇತ್ರ ಸಂಪನ್ಮೂಲ ಕೇಂದ್ರ, ಮದ್ದೂರು.
ಮಂಡ್ಯ ಜಿಲ್ಲೆ.

**ಶ್ರೀ ವೆಂಕಟೇಶ್ ಡಿ. ಎನ್.**
ಚಿತ್ರಕಲಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,
ಉರಮಾರ ಕಸಲಗೆರೆ, ಮಂಡ್ಯ ದಕ್ಷಿಣ ವಲಯ.

## ಉನ್ನತ ಪರಿಶೀಲನಾ ಸಮಿತಿ

**ಡಾ. ಎಚ್.ಎಸ್. ರಾಘವೇಂದ್ರರಾವ್**
ನಿವೃತ್ತ ಪ್ರಾಧ್ಯಾಪಕರು, #೭, ೧೫ನೇ ಕ್ರಾಸ್, ೫ನೇ ಫೇಸ್,
ಜೆ.ಪಿ.ನಗರ, ಬೆಂಗಳೂರು-೭೮

**ಡಾ. ಜಿ.ಆರ್. ತಿಪ್ಪೇಸ್ವಾಮಿ**
ನಿವೃತ್ತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸ ಗಂಗೋತ್ರಿ, ಮೈಸೂರು-೬

**ಡಾ. ಸೈಯದ್ ಜಮೀರ್ ಉಲ್ಲಾಷರೀಫ್**
ನಿವೃತ್ತ ಪ್ರಾಂಶುಪಾಲರು, ಭಟ್ಕಳ,
ಉತ್ತರ ಕನ್ನಡ ಜಿಲ್ಲೆ.

**ಡಾ. ಯಲ್ಲಪ್ಪ ಹಿಮ್ಮಡಿ**
ಎಸ್.ಪಿ.ಎಂ. ಕಲಾ ಮತ್ತು ವಾಣಿಜ್ಯ ಕಾಲೇಜು,
ರಾಯಬಾಗ, ಬೆಳಗಾವಿ ಜಿಲ್ಲೆ.

**ಡಾ. ಕಲಾವತಿ**
ಕನ್ನಡ ಅಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು,
ಬಳ್ಳಾರಿ.

**ಡಾ. ಪ್ರಶಾಂತ್ ನಾಯಕ್**
ಪ್ರಾಧ್ಯಾಪಕರು, ಕನ್ನಡ ಭಾರತಿ, ಕುವೆಂಪು ವಿಶ್ವವಿದ್ಯಾನಿಲಯ
ಶಂಕರಘಟ್ಟ, ಶಿವಮೊಗ್ಗ.

**ಡಾ. ಗೀತಾ ವಸಂತ**
ಸಹಪ್ರಾಧ್ಯಾಪಕರು ಕನ್ನಡವಿಭಾಗ, ತುಮಕೂರು
ವಿಶ್ವವಿದ್ಯಾಲಯ, ತುಮಕೂರು.

**ಡಾ. ಸತ್ಯನಾರಾಯಣ ಎಚ್.ಎಸ್.**
ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು,
ಬಸವನಗುಡಿ, ಬೆಂಗಳೂರು.

**ಸಲಹೆ ಮತ್ತು ಮಾರ್ಗದರ್ಶನ**

**ಶ್ರೀ ನರಸಿಂಹಯ್ಯ** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೮೫

**ಶ್ರೀಮತಿ ಸಿ. ನಾಗಮಣಿ** ಉಪನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೮೫

**ಕಾರ್ಯಕ್ರಮ ಸಂಯೋಜಕರು**

**ಶ್ರೀ ಪಾಂಡುರಂಗ** ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು-೮೫

©KTBS Not to be republished

# ಪರಿಷ್ಕರಣೆ ಕುರಿತು

ಒಂದರಿಂದ ಹತ್ತನೇ ತರಗತಿಯ ಪಠ್ಯಪುಸ್ತಕಗಳ ಬಗ್ಗೆ ಪ್ರಕಟಗೊಂಡ ಸಾರ್ವಜನಿಕ ಅಭಿಪ್ರಾಯಗಳನ್ನು ಗಮನಿಸಿ ಮಾನ್ಯ ಮುಖ್ಯಮಂತ್ರಿಯವರೂ ಅರ್ಥಸಚಿವರೂ ಆಗಿರುವ ಶ್ರೀ ಸಿದ್ಧರಾಮಯ್ಯನವರು ತಮ್ಮ ೨೦೧೪-೧೫ ರ ಬಜೆಟ್‌ನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಘೋಷಣೆ ಮಾಡಿದರು. ತಜ್ಞರು ಅನುಸರಿಸಬೇಕಾದ ಮೂಲ ಆಶಯವನ್ನು ಹೀಗೆ ಹೇಳಿದರು: "ಪಠ್ಯಪುಸ್ತಕಗಳನ್ನು ಸಾಮಾಜಿಕ ಸಾಮರಸ್ಯ, ನೈತಿಕ ಮೌಲ್ಯಗಳು, ವ್ಯಕ್ತಿತ್ವ ವಿಕಸನ, ವೈಜ್ಞಾನಿಕ ಮತ್ತು ವೈಚಾರಿಕ ಮನೋಭಾವ, ಜಾತ್ಯತೀತತೆ ಮತ್ತು ರಾಷ್ಟ್ರೀಯ ಬದ್ಧತೆಗಳಿಗೆ ಅನುವಾಗುವಂತೆ ತಜ್ಞರ ಸಮಿತಿಯನ್ನು ಪುನರ್ ರಚಿಸಲಾಗುವುದು" ಇದು ಬಜೆಟ್ ಭಾಷಣದಲ್ಲಿ ಸಾದರಪಡಿಸಿದ ಆಶಯ.

ಆನಂತರ ಶಿಕ್ಷಣ ಇಲಾಖೆಯು ಒಂದರಿಂದ ಹತ್ತನೇ ತರಗತಿಯವರೆಗಿನ ಪಠ್ಯಪುಸ್ತಕಗಳ ಪರಿಷ್ಕರಣೆಗಾಗಿ ೨೭ ಸಮಿತಿಗಳನ್ನು ರಚಿಸಿ ದಿನಾಂಕ: ೨೪. ೧೧. ೨೦೧೪ ರಂದು ಆದೇಶ ಹೊರಡಿಸಿತು. ಈ ಸಮಿತಿಗಳು ವಿಷಯವಾರು ಮತ್ತು ತರಗತಿವಾರು ಮಾನದಂಡಕ್ಕನುಗುಣವಾಗಿ ರಚಿತವಾದವು. ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದ ತಜ್ಞರು, ಅಧ್ಯಾಪಕರು ಈ ಸಮಿತಿಗಳಲ್ಲಿದ್ದಾರೆ. ಈಗಾಗಲೇ ಲಿಖಿತವಾಗಿ ಬಂದಿರುವ ಅನೇಕ ಆಕ್ಷೇಪಗಳು ಮತ್ತು ವಿಶ್ಲೇಷಣೆಗಳನ್ನು ಪರಿಶೀಲಿಸಿ, ತಪ್ಪು ಒಪ್ಪುಗಳ ಬಗ್ಗೆ ನಿರ್ಣಯಿಸಿ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ಹೊಣೆಹೊತ್ತ ಈ ಸಮಿತಿಗಳಿಗೆ 'ಅಗತ್ಯವಿದ್ದಲ್ಲಿ ಪಠ್ಯವಸ್ತುವನ್ನು ಪರಿಷ್ಕರಿಸಿ ನಂತರ ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ' ಸ್ವಾತಂತ್ರ್ಯವನ್ನು ೨೪.೧೧.೨೦೧೪ ರ ಆದೇಶದಲ್ಲೇ ನೀಡಲಾಗಿತ್ತು. ಆನಂತರ ೧೯.೦೯.೨೦೧೫ ರಂದು ಹೊಸ ಆದೇಶ ಹೊರಡಿಸಿ 'ಅಗತ್ಯವಿದ್ದಲ್ಲಿ ಪುನರ್ ರಚಿಸುವ' ಸ್ವಾತಂತ್ರ್ಯವನ್ನು ನೀಡಲಾಯಿತು. ಹೀಗೆ ಸಮಗ್ರ ಪರಿಷ್ಕರಣೆಗೊಂಡ ಪಠ್ಯಪುಸ್ತಕಗಳನ್ನು ೨೦೧೬-೧೭ ರ ಬದಲು ೨೦೧೭-೧೮ ನೇ ಶೈಕ್ಷಣಿಕ ವರ್ಷದಲ್ಲಿ ಜಾರಿಗೊಳಿಸಲಾಗುವುದೆಂದು ಇದೇ ಆದೇಶದಲ್ಲಿ ತಿಳಿಸಲಾಯಿತು.

ಅನೇಕ ವ್ಯಕ್ತಿಗಳೂ ಸಂಘಟನೆಗಳೂ ಸ್ವಯಂಪ್ರೇರಿತರಾಗಿ ಪಠ್ಯಪುಸ್ತಕಗಳ ಮಾಹಿತಿ ದೋಷ, ಆಶಯ ದೋಷಗಳನ್ನು ಪಟ್ಟಿಮಾಡಿ ಶಿಕ್ಷಣ ಸಚಿವರಿಗೆ, ಪಠ್ಯಪುಸ್ತಕ ಸಂಘಕ್ಕೆ ಕಳುಹಿಸಿದ್ದರು. ಅವುಗಳ ಪರಿಶೀಲನೆ ಮಾಡಿದ್ದಲ್ಲದೆ, ಸಮಿತಿಗಳಾಚೆಗೆ ಅನೇಕ ಸಂವಾದಗಳನ್ನು ಏರ್ಪಡಿಸಿ ವಿಚಾರ ವಿನಿಮಯ ಮಾಡಿಕೊಂಡಿದ್ದೇವೆ. ಪ್ರಾಥಮಿಕ ಮತ್ತು ಪ್ರೌಢಶಾಲಾ ಅಧ್ಯಾಪಕರ ಸಂಘಗಳ ಜೊತೆ ಚರ್ಚಿಸಿದ್ದಲ್ಲದೆ ಪ್ರಶ್ನಾವಳಿ ಸಿದ್ಧಪಡಿಸಿ ಅಧ್ಯಾಪಕರಿಗೆ ಕಳಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಅಧ್ಯಾಪಕರು, ವಿಷಯ ಪರಿವೀಕ್ಷಕರು ಮತ್ತು ಡಯಟ್ ಪ್ರಾಂಶುಪಾಲರ ಪ್ರತ್ಯೇಕ ಸಭೆಗಳನ್ನು ನಡೆಸಿ ವಿಶ್ಲೇಷಣಾತ್ಮಕ ಅಭಿಮತಗಳನ್ನು ಪಡೆಯಲಾಗಿದೆ. ವಿಜ್ಞಾನ, ಸಮಾಜವಿಜ್ಞಾನ, ಗಣಿತ, ಭಾಷೆ ಸಾಹಿತ್ಯಗಳಿಗೆ ಸಂಬಂಧಿಸಿದ ತಜ್ಞರಿಗೆ ಮೊದಲೇ ಪಠ್ಯಪುಸ್ತಕಗಳನ್ನು ಕಳುಹಿಸಿ ಆನಂತರ ಸಭೆನಡೆಸಿ ಚರ್ಚಿಸಲಾಗಿದೆ. ಮಹಿಳಾ ಸಂಘಟನೆ ಹಾಗೂ ವಿಜ್ಞಾನ ಸಂಬಂಧಿ ಸಂಸ್ಥೆಗಳನ್ನು ಆಹ್ವಾನಿಸಿ ಚಿಂತನೆ ನಡೆಸಲಾಗಿದೆ. ಹೀಗೆ ಎಲ್ಲಾ ಮೂಲಗಳಿಂದ ಪಡೆದ ಅರಿವಿನ ಆಧಾರದ ಮೇಲೆ ಪಠ್ಯಪುಸ್ತಕಗಳನ್ನು ಅಗತ್ಯವಿದ್ದಕಡೆ ಪರಿಷ್ಕರಿಸಲಾಗಿದೆ.

ಬಹುಮುಖ್ಯವಾದ ಇನ್ನೊಂದು ಸಂಗತಿಯನ್ನು ಇಲ್ಲಿ ಹೇಳಬೇಕು. ಕೇಂದ್ರೀಯ ಶಾಲಾ (ಎನ್.ಸಿ.ಇ.ಆರ್.ಟಿ) ಪಠ್ಯಪುಸ್ತಕಗಳ ಜೊತೆ ರಾಜ್ಯದ ಪಠ್ಯಪುಸ್ತಕಗಳನ್ನು ತೌಲನಿಕವಾಗಿ ಅಧ್ಯಯನ ಮಾಡಿ

©KTBS Not to be republished

ಸಲಹೆಗಳನ್ನು ನೀಡಲು ವಿಜ್ಞಾನ, ಗಣಿತ ಮತ್ತು ಸಮಾಜವಿಜ್ಞಾನಕ್ಕೆ ಸಂಬಂಧಿಸಿದಂತೆ ತಜ್ಞರ ಮೂರು ಸಮಿತಿಗಳನ್ನು ರಚಿಸಲಾಯಿತು. ಈ ಸಮಿತಿಗಳು ನೀಡಿದ ತೌಲನಿಕ ವಿಶ್ಲೇಷಣೆ ಮತ್ತು ಸಲಹೆಗಳನುಆಧರಿಸಿ ರಾಜ್ಯ ಪಠ್ಯಪುಸ್ತಕಗಳ ಗುಣಮಟ್ಟವನ್ನು ಹೆಚ್ಚಿಸಲಾಗಿದೆ. ಕೇಂದ್ರೀಯ ಶಾಲಾ ಪಠ್ಯಪುಸ್ತಕಗಳಿಗಿಂತ ನಮ್ಮ ರಾಜ್ಯದ ಪಠ್ಯಪುಸ್ತಕಗಳ ಗುಣಮಟ್ಟ ಕಡಿಮೆಯಾಗದಂತೆ ಕಾಯ್ದುಕೊಳ್ಳಲಾಗಿದೆ. ಜೊತೆಗೆ ಆಂಧ್ರ, ತಮಿಳುನಾಡು, ಮಹಾರಾಷ್ಟ್ರಗಳ ಪಠ್ಯಪುಸ್ತಕಗಳ ಜೊತೆ ನಮ್ಮ ಪಠ್ಯಪುಸ್ತಕಗಳನ್ನು ಪರಿಶೀಲಿಸಲಾಗಿದೆ.

ಇನ್ನೊಂದು ಸ್ಪಷ್ಟನೆಯನ್ನು ನೀಡಲು ಬಯಸುತ್ತೇನೆ. ನಮ್ಮ ಸಮಿತಿಗಳು ಮಾಡಿರುವುದು ಪರಿಷ್ಕರಣೆಯೇ ಹೊರತು ಪಠ್ಯಪುಸ್ತಕಗಳ ಸಮಗ್ರ ರಚನೆಯಲ್ಲ. ಆದ್ದರಿಂದ ಈಗಾಗಲೇ ರಚಿತವಾಗಿರುವ ಪಠ್ಯಪುಸ್ತಕಗಳ ಸ್ವರೂಪಕ್ಕೆ ಎಲ್ಲಿಯೂ ಧಕ್ಕೆಯುಂಟುಮಾಡಿಲ್ಲ. ಲಿಂಗತ್ವ ಸಮಾನತೆ, ಪ್ರಾದೇಶಿಕ ಪ್ರಾತಿನಿಧ್ಯ, ರಾಷ್ಟ್ರೀಯ ಸಮಗ್ರತೆ, ಸಮಾನತೆ, ಸಾಮಾಜಿಕ ಸಾಮರಸ್ಯಗಳ ಹಿನ್ನೆಲೆಯಲ್ಲಿ ಕೆಲವು ಪರಿಷ್ಕರಣೆಗಳು ನಡೆದಿವೆ. ಹೀಗೆ ಪರಿಷ್ಕರಿಸುವಾಗ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ರಾಜ್ಯ ಪಠ್ಯಕ್ರಮ ಚೌಕಟ್ಟುಗಳನ್ನು ಮೀರಿಲ್ಲವೆಂದು ತಿಳಿಸಬಯಸುತ್ತೇನೆ: ಜೊತೆಗೆ ನಮ್ಮ ಸಂವಿಧಾನದ ಆಶಯಗಳನ್ನು ಅನುಸರಿಸಲಾಗಿದೆ. ಸಮಿತಿಗಳು ಮಾಡಿದ ಪರಿಷ್ಕರಣೆಯನ್ನು ಮತ್ತೊಮ್ಮೆ ಪರಿಶೀಲಿಸಲು ವಿಷಯವಾರು ಉನ್ನತ ಪರಿಶೀಲನ ಸಮಿತಿಗಳನ್ನು ರಚಿಸಿ ಅಭಿಪ್ರಾಯಪಡೆದು ಅಳವಡಿಸಲಾಗಿದೆ.

ಹೀಗೆ ಕ್ರಮಬದ್ಧವಾಗಿ ನಡೆದ ಕೆಲಸಕ್ಕೆ ತಮ್ಮನ್ನು ತಾವು ಸಂಪೂರ್ಣ ತೊಡಗಿಸಿಕೊಂಡ ೨೭ ಸಮಿತಿಗಳ ಅಧ್ಯಕ್ಷರು ಮತ್ತು ಸದಸ್ಯರನ್ನು ಹಾಗೂ ಉನ್ನತ ಪರಿಶೀಲನಾ ಸಮಿತಿಯ ಸಮಸ್ತರನ್ನು ಕೃತಜ್ಞತೆಯಿಂದ ನೆನೆಯುತ್ತೇವೆ. ಅಂತೆಯೇ ಸಮಿತಿಗಳ ಕೆಲಸ ಸುಗಮವಾಗಿ ನಡೆಯುವಂತೆ ವ್ಯವಸ್ಥೆಮಾಡಲು ಕಾರ್ಯಕ್ರಮ ಅಧಿಕಾರಿಗಳಾಗಿ ನಿಷ್ಠೆಯಿಂದ ದುಡಿದ ಪಠ್ಯಪುಸ್ತಕ ಸಂಘದ ಎಲ್ಲಾ ಅಧಿಕಾರಿಗಳನ್ನೂ ನೆನೆಯುತ್ತೇವೆ. ಸಹಕರಿಸಿದ ಸಿಬ್ಬಂದಿಗೂ ನಮ್ಮ ವಂದನೆಗಳು. ಅಭಿಪ್ರಾಯ ನೀಡಿ ಸಹಕರಿಸಿದ ಸರ್ವ ಸಂಘಟನೆಗಳು ಮತ್ತು ತಜ್ಞರಿಗೆ ಧನ್ಯವಾದಗಳು.

**(ನರಸಿಂಹಯ್ಯ)**
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ಬೆಂಗಳೂರು–೮೫

**(ಪ್ರೊ. ಬರಗೂರು ರಾಮಚಂದ್ರಪ್ಪ)**
ಸರ್ವಾಧ್ಯಕ್ಷರು
ರಾಜ್ಯ ಪಠ್ಯಪುಸ್ತಕ ಪರಿಷ್ಕರಣ ಸಮಿತಿ
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ)
ಬೆಂಗಳೂರು–೮೫

©KTBS Not to be republished

# ಪರಿವಿಡಿ


| ಕ್ರ. ಸಂ. | ಪಾಠದ ಹೆಸರು | ಕೃತಿಕಾರರು | ಪು. ಸಂ. |
|---|---|---|---|
| | **ಗದ್ಯಭಾಗ** | | |
| ೧. | ಅವರೇ ರಾಜರತ್ನಂ! | ಕೆ. ಪಿ. ಪೂರ್ಣಚಂದ್ರ ತೇಜಸ್ವಿ | ೦೧ – ೦೯ |
| ೨. | ಅರಳಿಕಟ್ಟೆ | ಬಿ. ಜಿ. ಎಲ್. ಸ್ವಾಮಿ | ೧೦ – ೧೬ |
| ೩. | ಜೇನು ಕುರುಬರ ತಾಯಿಯೂ ಕಾಡು ಆನೆಯ ಮಗನೂ | ಅಬ್ದುಲ್ ರಶೀದ್ | ೧೭ – ೨೬ |
| ೪. | ಬಸ್ಸು ಪ್ರಯಾಣದ ಸುಖ ದುಃಖಗಳು | ವೀರೇಂದ್ರ ಸಿಂಪಿ | ೨೭ – ೩೫ |
| ೫. | ಉರುಸುಗಳಲ್ಲಿ ಭಾವೈಕ್ಯತೆ | ದಸ್ತಗೀರ ಅಲ್ಲೀಭಾಯಿ | ೩೬ – ೪೨ |
| ೬. | ಪಾಂಡಿತ್ಯದ ಡಿ.ಎಲ್. ನರಸಿಂಹಾಚಾರ್ | ಎಂ.ಎಂ. ಕಲಬುರ್ಗಿ | ೪೩ – ೫೨ |
| ೭. | ಐನ್‌ಸ್ಟೀನ್ ಮತ್ತು ದೇವರು | ಎಚ್. ನರಸಿಂಹಯ್ಯ | ೫೩ – ೬೦ |
| ೮. | ಭೀಷ್ಮ ಪ್ರತಿಜ್ಞೆ | ಎ. ಆರ್. ಕೃಷ್ಣಶಾಸ್ತ್ರಿ | ೬೧ – ೬೮ |
| | **ಪದ್ಯಭಾಗ** | | |
| ೧. | ಬೆಳಗು ಜಾವ | ದ. ರಾ. ಬೇಂದ್ರೆ | ೬೯ – ೭೩ |
| ೨. | ಅಟ್ಟ ಹತ್ತ ಬೇಡ | ಎಲ್. ಹನುಮಂತಯ್ಯ | ೭೪ – ೭೭ |
| ೩. | ಅವರು ಮತ್ತು ನಾವು | ಟಿ. ಯಲ್ಲಪ್ಪ | ೭೮ – ೮೧ |
| ೪. | ತೊಟ್ಟಿಲು ತೂಗುವ ಹಾಡು | ವೈದೇಹಿ | ೮೨ – ೮೫ |
| ೫. | ಮನೆಗೆಲಸದ ಹೆಣ್ಣು ಮಗಳು | ಎಸ್. ಜಿ. ಸಿದ್ಧರಾಮಯ್ಯ | ೮೬ – ೯೦ |
| ೬. | ಹೊನ್ನೆ ಮರದ ನೆರಳು | ಜನಪದ ಸಾಹಿತ್ಯ | ೯೧ – ೯೫ |
| ೭. | ವಚನಗಳು | ಜೇಡರ ದಾಸಿಮಯ್ಯ | ೯೬ – ೯೯ |
| ೮. | ಆಚಾರವಿಲ್ಲದ ನಾಲಗೆ | ಪುರಂದರದಾಸರು | ೧೦೦ – ೧೦೩ |


©KTBS Not to be republished

## ಸೈದ್ಧಾಂತಿಕ ವ್ಯಾಕರಣ


| | | |
|---|---|---|
| ೧. | ಸಂಧಿಗಳು – ಸಂಸ್ಕೃತ ಸಂಧಿಗಳು | ೦೬ – ೦೯ |
| ೨. | ದೇಶೀಯ – ಅನ್ಯದೇಶೀಯ ಪದಗಳು | ೧೪ – ೧೬ |
| ೩. | ನಾಮಪದ – ನಾಮಪದದ ವಿಧಗಳು | ೨೪ – ೨೬ |
| ೪. | ವಿಭಕ್ತಿ ಪ್ರತ್ಯಯಗಳು | ೩೪ – ೩೫ |
| ೫. | ಕ್ರಿಯಾಪದ – ಸಕರ್ಮಕ – ಅಕರ್ಮಕ ಕ್ರಿಯಾಪದಗಳು | ೪೦ – ೪೨ |
| ೬. | ಕಾಲಗಳು – ಕಾಲಪಲ್ಲಟ | ೫೦ – ೫೨ |
| ೭. | ದ್ವಿರುಕ್ತಿ – ಜೋಡುನುಡಿ – ಅವ್ಯಯಗಳು | ೫೮ – ೬೦ |
| ೮. | ನುಡಿಗಟ್ಟು – ಪಡೆನುಡಿ | ೬೮ – ೬೮ |


## ರಚನೆ


| | | |
|---|---|---|
| ೧. | ಗಾದೆಗಳ ವಿಸ್ತರಣೆ | ೧೦೪ – ೧೦೫ |
| ೨. | ಪತ್ರಲೇಖನ | ೧೦೫ – ೧೦೭ |
| ೩. | ಪ್ರಬಂಧ ರಚನೆ | ೧೦೮ – ೧೧೦ |


## ಪೂರಕ ಓದು


| | | |
|---|---|---|
| ೧. | ಕುವೆಂಪು ಅವರ ವಿಶ್ವಮಾನವ ಸಂದೇಶ | ೧೧೧ – ೧೧೩ |
| ೨. | ನೀರಿನ ಮಹತ್ವ ಮತ್ತು ಮಾಲಿನ್ಯ | ೧೧೪ – ೧೧೫ |
| ೩. | ಸರ್ ಎಂ. ವಿಶ್ವೇಶ್ವರಯ್ಯ | ೧೧೬ – ೧೧೭ |
| ೪ | **ಚಟುವಟಿಕೆ** | ೧೧೮ |


©KTBS Not to be republished

**ಗದ್ಯ ಭಾಗ**

# ೧. ಅವರೇ ರಾಜರತ್ನಂ !

**– ಕೆ. ಪಿ. ಪೂರ್ಣಚಂದ್ರ ತೇಜಸ್ವಿ**

**ಪಾಠ ಪ್ರವೇಶ :** ಕೆಲವು ವ್ಯಕ್ತಿಗಳ ಪರಿಚಯ ನಮಗೆ ನೇರವಾಗಿರದೆ ಪರೋಕ್ಷವಾಗಿರುತ್ತದೆ. ಅವರ ಕಾರ್ಯಸಾಧನೆಗಳ ಬಗ್ಗೆ ಕೇಳಿ ಅಭಿಮಾನ ಹೊಂದಿರುತ್ತೇವೆ. ಆದರೆ, ಅವರನ್ನು ನಾವು ನೋಡಿರುವುದಿಲ್ಲ. ಒಂದು ವೇಳೆ ಅದೇ ವ್ಯಕ್ತಿ ಅನಿರೀಕ್ಷಿತವಾಗಿ ನಮ್ಮ ಮನೆಗೆ ಬಂದರೆ ನಾವು ಅವರನ್ನು ಹೇಗೆ ಕಾಣಬಹುದು? ಹೇಗೆ ಉಪಚರಿಸಬಹುದು? ಹೇಳುವುದು ಕಷ್ಟ. ಸಾಮಾನ್ಯವಾಗಿ ಅಂತಹವರನ್ನು ನಿರ್ಲಕ್ಷಿಸುತ್ತೇವೆ ಇಲ್ಲವೇ ಅನುಮಾನಿಸಿ ಅವಮಾನಿಸುತ್ತೇವೆ. ನಂತರದಲ್ಲಿ ಆ ವ್ಯಕ್ತಿ ಯಾರೆಂಬುದು ತಿಳಿದಾಗ ನಮಗೆ ಹೇಗಾಗಬಹುದು? ಆಗ ನಮಗಾಗುವ ಮುಜುಗರ, ಆಶ್ಚರ್ಯ, ನಾಚಿಕೆ, ಕಸಿವಿಸಿ, ಚಡಪಡಿಕೆ ಪಶ್ಚಾತ್ತಾಪ ಹೇಳತೀರದು. ಇಂತಹ ಘಟನೆಯೊಂದು ಪೂರ್ಣಚಂದ್ರ ತೇಜಸ್ವಿಯವರ ಬಾಲ್ಯದಲ್ಲಿ ನಡೆದಿದ್ದು, ಅದನ್ನು ಅವರು ಇಲ್ಲಿ ಸ್ವಾರಸ್ಯಕರವಾಗಿ ವಿವರಿಸಿದ್ದಾರೆ.

ಮೊದಲೆಲ್ಲಾ ಯಾವತ್ತೂ ಅಣ್ಣನನ್ನು ನೋಡಬರುವವರಿಂದ ನಮಗೆ ತೊಂದರೆಯೇ ಆಗಿರಲಿಲ್ಲ. ಹೆಚ್ಚೆಂದರೆ ಭಿಕ್ಷುಕರ ಕಾಟವಷ್ಟೇ ನಮಗೆ ಗೊತ್ತಿದ್ದಿದ್ದು. ಭಿಕ್ಷುಕರಿಗೆ ಭಿಕ್ಷೆ ಹಾಕುವುದು ಅವರನ್ನು ಪ್ರೋತ್ಸಾಹಿಸಿದ ಹಾಗೆ ಎಂದು ಒಂದು ದಿನ ಅಣ್ಣ ನಮಗೆ ಜೋರು ಮಾಡಿದರು. ಅವರು ಆಶ್ರಮದಲ್ಲಿದ್ದಾಗ ಒಬ್ಬ ಹೆಳವನಿಗೆ ಮೂರುಕಾಸು, ಆರುಕಾಸು ಭಿಕ್ಷೆ ಹಾಕುತ್ತಿದ್ದರಂತೆ. ಆಗಲೂ ಆಶ್ರಮದ ಸ್ವಾಮಿಗಳಾದ ಸಿದ್ಧೇಶ್ವರಾನಂದರು ಭಿಕ್ಷಾವೃತ್ತಿಗೆ ಉತ್ತೇಜನ ನೀಡುವುದಕ್ಕೆ ಬದ್ಧ ವಿರೋಧಿಗಳಾಗಿದ್ದರು. ಒಮ್ಮೆ ಅಣ್ಣ ಆ ಹೆಳವನಿಗೆ ಭಿಕ್ಷೆ ನೀಡುತ್ತಿದ್ದಾಗ ಆಕಸ್ಮಿಕವಾಗಿ ಸಿದ್ಧೇಶ್ವರಾನಂದರು ಅಲ್ಲಿಗೆ ಬಂದರು. ಕೈಕಾಲೆಲ್ಲಾ ಸೊಟ್ಟ ಮಾಡಿಕೊಂಡು ಸ್ವಾಮೀ ಎಂದು ಕರುಣಾಜನಕವಾಗಿ ಅಂಗಲಾಚುತ್ತಿದ್ದ ಆ ಹೆಳವ, ಸಿದ್ಧೇಶ್ವರಾನಂದರನ್ನು ನೋಡಿದ ಕೂಡಲೇ ಸಟ್ಟನೆ ಕೈಕಾಲುಗಳನ್ನು ನೆಟ್ಟಗೆ ಮಾಡಿಕೊಂಡು ವೇಗವಾಗಿ ಆಶ್ರಮದ ಆವರಣದಿಂದ ಆಚೆಗೆ ಓಡಿಹೋದನಂತೆ. ಸಿದ್ಧೇಶ್ವರಾನಂದರು ಅಣ್ಣನ ಮೂರ್ಖತನಕ್ಕೆ ಸರಿಯಾಗಿ ಛೀಮಾರಿ ಮಾಡಿದರು. ಅಣ್ಣನಿಗೆ ದುಡ್ಡು ಕಳಕೊಂಡಿದ್ದಕ್ಕಿಂತ ಹೆಚ್ಚಾಗಿ ಇಷ್ಟು ದಿನ ಮೋಸಹೋದೆನಲ್ಲಾ ಎಂಬುದು ಹೆಚ್ಚು ಬೇಸರದ ಸಂಗತಿಯಾಗಿತ್ತು.

ಅಣ್ಣ ಆಗಾಗ್ಗೆ ನಮಗೆ ಈ ಕಥೆ ಹೇಳಿ ಭಿಕ್ಷಕ್ಕೆ ಬರುವವರೆಲ್ಲ ಸಾಧಾರಣವಾಗಿ ಮೋಸಗಾರರು, ಅಥವಾ ಕದಿಯಲು ಏನಾದರೂ ಇದೆಯೆ ಎಂದು ನೋಡಿಕೊಂಡು ಹೋಗಲು ಬರುವ ಕಳ್ಳರು, ಇಲ್ಲವೇ ದುಡಿದು ತಿನ್ನಲು ಇಷ್ಟವಿಲ್ಲದ ಸೋಮಾರಿಗಳು. ಆದ್ದರಿಂದ ಅವರಿಗೆ ಭಿಕ್ಷೆ ಹಾಕಿ ಪ್ರೋತ್ಸಾಹಿಸಬೇಡಿ ಎಂದು ಹೇಳುತ್ತಿದ್ದರು. ಆದರೂ ಅಮ್ಮ ಮಾತ್ರ ನಮ್ಮ ಮನೆ ಹತ್ತಿರ ಬರುತ್ತಿದ್ದ ಎರಡು ಮೂರು ಜನ ಕುಷ್ಠ ರೋಗಿಗಳಿಗೆ ಕನಿಕರದಿಂದ ಭಿಕ್ಷೆ ಹಾಕೇ ಹಾಕುತ್ತಿದ್ದರು. ನಾವು ಮಾತ್ರ ಅಣ್ಣನ ಬೋಧನೆಯನ್ನು ಶಿರಸಾವಹಿಸಿ ಯಾರು ಮನೆಗೆ ಬಂದರೂ "ಮುಂದೆ ಹೋಗಪ್ಪಾ" ಎಂದು ಕೂಗುತ್ತಿದ್ದೆವು.

©KTBS Not to be republished



ಒಂದು ಸಾರಿ ಬಿಳಿಯ ಅಡ್ಡ ಪಂಚೆ ಹಾಗೂ ಬಿಳಿಯ ಅಂಗಿ, ಮೈಮೇಲೆ ನಸು ಕಂದು ಧೋತ್ರ ಹೊದ್ದವರೊಬ್ಬರು ನಮ್ಮ ಮನೆ ಬಾಗಿಲು ತೆರೆಯಲು ಸಾಹಸ ಪಡುತ್ತಿದ್ದುದನ್ನು ನೋಡಿದೆವು. ಅವರ ಬಗಲಲ್ಲೊಂದು ದೊಡ್ಡ ಜೋಳಿಗೆಯಂಥ ಚೀಲ ಇತ್ತು. ಮನೆಯ ಚಿಕ್ಕ ಗೇಟನ್ನು ಕೊಂಚ ಎತ್ತಿ ಅಗುಳಿ ತೆರೆಯಬೇಕಾಗಿದ್ದರಿಂದ ಹೊರಗಿನಿಂದ ತೆಗೆಯುವುದು ಕಷ್ಟ ಇತ್ತು. ಅವರನ್ನು ನೋಡಿದ ಚೈತ್ರ "ಮುಂದೆ ಹೋಗಪ್ಪಾ" ಎಂದು ಕೂಗಿದ. ಆದರೂ ಆ ವ್ಯಕ್ತಿ ತಮ್ಮ ಗೇಟು ತೆಗೆಯುವ ಪ್ರಯತ್ನ ಮುಂದುವರೆಸಿದ್ದನ್ನು ನೋಡಿ ನಾವೆಲ್ಲರೂ ಸಾಮೂಹಿಕವಾಗಿ ಮುಂದೆ ಹೋಗಪ್ಪಾ ಎಂದು ಕಿರುಚಿದೆವು. ಆಮೇಲೂ ಅವರು ನಿಂತೆ ಇದ್ದುದನ್ನು ನೋಡಿ ನಾವು ಅಣ್ಣನಿಗೆ ಚಾಡಿ ಹೇಳಲು ಒಳಗೆ ಓಡಿದೆವು. ಬಂದ ವ್ಯಕ್ತಿಯೇನೂ ಭಿಕ್ಷುಕರ ರೀತಿ ಕೊಳಕು ಬಟ್ಟೆಯಲ್ಲಿ ಭಿಕ್ಷಾಪಾತ್ರೆ ಹಿಡಿದವರಲ್ಲ. ಆದರೆ ಅನೇಕ ದಾಸಯ್ಯಗಳೂ, ಮಾರಿ ಭಕ್ತರೂ, ಎಂತೆಂಥವಕ್ಕೋ ಚಂದಾ ವಸೂಲಿ ಮಾಡಲು ಬರುವವರು ಟ್ರಿಮ್ಮಾಗಿಯೇ ಬಟ್ಟೆ ಹಾಕಿಕೊಂಡು ಭಿಕ್ಷಾಟನೆಗೆ ಬರುತ್ತಿದ್ದುದರಿಂದ ನಾವು ನಮಗೆ ಗುರುತು ಪರಿಚಯ ಇಲ್ಲದೆ ಮನೆಯೊಳಗೆ ಬರುವವರನ್ನೆಲ್ಲಾ ಮುಂದೆ ಕಳಿಸಬೇಕಾದ ಭಿಕ್ಷದವರೆಂದೇ ತೀರ್ಮಾನಿಸಿ ಕೂಗುತ್ತಿದ್ದೆವು. ಅಣ್ಣನ ಬಳಿ ಹೋಗಿ "ಯಾವನೊ ಒಬ್ಬ ಮುಂದೆ ಹೋಗು ಅಂದರೂ ಹೋಗದೆ ನಿಂತೇ ಇದ್ದಾನೆ" ಎಂದು ಚಾಡಿ ಹೇಳಿದೆವು. ಅಣ್ಣ ಹೊರಬಂದು ನೋಡಿದವರೇ ಅವರ ಗುರುತು ಹಿಡಿದು "ಓಹ್ಹೊ ಬನ್ನಿ ಬನ್ನಿ" ಎಂದೆನ್ನುತ್ತಾ ಅವರೇ ಸರಸರ ಮುಂದುವರೆದು ಗೇಟು ತೆಗೆದು ದಟ್ಟಿಪಂಚೆಯ ಮನುಷ್ಯನನ್ನು ಕರೆದುಕೊಂಡು ಬಂದರು. ಮುಂದೆ ಹೋಗು ಎಂದು ಹೇಳಿದ ಮನುಷ್ಯನಿಗೆ ಸಿಕ್ಕ ಮರ್ಯಾದೆಯನ್ನು ನೋಡಿ ನಾವು ಅಪ್ರತಿಭರಾಗಿ ನಿಂತಿದ್ದೆವು. ಬಂದಾತ "ಏನು ಪುಟ್ಟಪ್ಪಾ! ಮನೆಗೆ ಬಂದವರನ್ನೆಲ್ಲ

©KTBS Not to be republished

ಮುಂದೆ ಕಳಿಸಿಬಿಡಿ ಎಂದು ಹೇಳಿದ್ದೀರಾ?” ಎಂದು ತಮಾಷೆಯಾಗಿ ಕೇಳಿದರು. ಅದಕ್ಕೆ ಅಣ್ಣ ನಮ್ಮ ಕಡೆ ತಿರುಗಿ “ಇವರು ಯಾರು ಗೊತ್ತಾ?” ಎಂದು ಕೇಳಿದರು. ನಮಗೇನು ಗೊತ್ತು. ನಮಗೆ ಗೊತ್ತಿದ್ದರೆ ನಾವ್ಯಾಕೆ ಮುಂದೆ ಹೋಗು ಎಂದು ಹೇಳುತ್ತಿದ್ದೆವು. ನಮ್ಮ ಪಿಳಿಪಿಳಿ ಕಣ್ಣುಗಳನ್ನು ನೋಡಿ “ನಿಮ್ಮ ಪುಸ್ತಕದಲ್ಲಿ ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ ಓದಿದ್ದೀರಲ್ಲಾ. ಇವರೇ ಅದನ್ನು ಬರೆದವರು.” ಎಂದರು.

ಅವರೇ ರಾಜರತ್ನಂ! ನಾವು ಆವರೆಗೂ ಕವಿತೆಗಳು ಸಹ ಹುಡುಗರು ಮಕ್ಕಳು ಮರ ಗಿಡ ಇರುವಂತೆ ಪ್ರಪಂಚದಲ್ಲಿರುವ ವಸ್ತುಗಳು ಎಂದು ತಿಳಿದಿದ್ದವರು. ಕವಿತೆಗಳನ್ನು ಕವಿಗಳು ಬರೆಯುತ್ತಾರೆ. ಎಂದು ತಿಳಿದಿದ್ದೇ ಅವತ್ತು. ಆಮೇಲಿಂದ ನಾವು ಕವಿತೆ ಓದುವಾಗಲೆಲ್ಲಾ ಅದು ಮುಗಿದ ಮೇಲೆ ಕೆಳಗೆ ಕೊಟ್ಟಿರುವ ಕವಿಯ ಹೆಸರನ್ನೂ ಬಾಯಿಪಾಠ ಮಾಡಿಕೊಂಡು ಕಿರುಚುತ್ತಿದ್ದೆವು. ರಾಜರತ್ನಂ ಆಮೇಲೆ ಯಾವಾಗಲಾದರೂ ಮನೆಗೆ ಬಂದಾಗ ನಮ್ಮನ್ನು ಕಂಡರೆ “ಏನ್ರಪ್ಪಾ ಒಳಗೆ ಬರಬಹುದೋ, ಮುಂದೆ ಹೋಗಬೇಕೋ?” ಎಂದು ತಮಾಷೆ ಮಾಡುತ್ತಿದ್ದರು.

* * * *

## ಕೃತಿಕಾರರ ಪರಿಚಯ :



**ಕೆ.ಪಿ. ಪೂರ್ಣಚಂದ್ರ ತೇಜಸ್ವಿ** ಅವರು ೧೯೩೮ ರಲ್ಲಿ ಜನಿಸಿದರು. ತಂದೆ ರಾಷ್ಟ್ರಕವಿ ಕುವೆಂಪು. ಕನ್ನಡದ ಶ್ರೇಷ್ಠ ಬರಹಗಾರರಲ್ಲೊಬ್ಬರಾದ ತೇಜಸ್ವಿಯವರು ಪ್ರಕೃತಿ ಹಾಗೂ ಪರಿಸರಕ್ಕೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಬರೆದಿದ್ದಾರೆ. ‘ಹುಲಿಯೂರಿನ ಸರಹದ್ದು’, ‘ನಿಗೂಢ ಮನುಷ್ಯರು’, ‘ಜುಗಾರಿ ಕ್ರಾಸ್’, ‘ಚಿದಂಬರ ರಹಸ್ಯ’ ಎಂಬ ಕಾದಂಬರಿಗಳನ್ನೂ ‘ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್’ ಎಂಬ ಪ್ರವಾಸ ಕಥನವನ್ನೂ ಅವರು ಬರೆದಿದ್ದಾರೆ. ‘ಅಬಚೂರಿನ ಪೋಸ್ಟಾಫೀಸು’ ಮತ್ತು ‘ತಬರನಕಥೆ’ ಚಲನಚಿತ್ರಗಳಾಗಿವೆ. ಇವರ ‘ಕರ್ವಾಲೋ’ ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ‘ಚಿದಂಬರ ರಹಸ್ಯ’ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇವರ ಸಾಹಿತ್ಯ ಸೇವೆ ಗುರುತಿಸಿದ ಕರ್ನಾಟಕ ಸರ್ಕಾರ ಪಂಪ ಪ್ರಶಸ್ತಿ ನೀಡಿ ಸನ್ಮಾನಿಸಿದೆ. ಇವರು ೨೦೦೭ ರಲ್ಲಿ ಇಹಲೋಕವನ್ನು ತ್ಯಜಿಸಿದರು.

‘ಅವರೇ ರಾಜರತ್ನಂ!’ ಗದ್ಯ ಭಾಗವನ್ನು ತೇಜಸ್ವಿ ಅವರ **‘ಅಣ್ಣನ ನೆನಪು’** ಕೃತಿಯಿಂದ ಆರಿಸಲಾಗಿದೆ.

©KTBS Not to be republished

# ಅಭ್ಯಾಸ

## I. ಪದಗಳ ಅರ್ಥ :

**ಅಂಗಲಾಚು** – ಬೇಡು
**ಕಿರುಚು** – ಜೋರಾಗಿ ಕೂಗು
**ಛೀಮಾರಿ ಹಾಕು** – ತಿರಸ್ಕಾರ; ಧಿಕ್ಕರಿಸು; ಅಪಮಾನಿಸು.
**ಧೋತ್ರ** – ಪಂಚೆ
**ಮೂರ್ಖತನ** – ದಡ್ಡತನ
**ಸಾಮೂಹಿಕ** – ಒಟ್ಟು
**ಹೆಳವ** – ಕುಂಟ
**ಅಪ್ರತಿಭ** – ದಿಗ್ಭ್ರಮೆ
**ಚಾಡಿ** –ಇಲ್ಲದ್ದನ್ನು ಹೇಳು
**ಜೋರುಮಾಡು** – ದಬಾಯಿಸು
**ಬಗಲು** – ಪಕ್ಕೆ; ಕಂಕುಳು.
**ಶಿರಸಾವಹಿಸು** – ಹೇಳಿದಂತೆ ಮಾಡು
**ಸೋಮಾರಿ** – ಮೈಗಳ್ಳ; ಆಲಸಿ.

## II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಗಳಿಂದ ಸೂಕ್ತವಾದುದನ್ನು ಆಯ್ದು ಬರೆಯಿರಿ.**

೧. ಅವರೇ ರಾಜರತ್ನ! ಗದ್ಯಭಾಗದ ಆಕರ ಕೃತಿ ____________
ಅ) ಅಣ್ಣನ ಕನಸು ಬ) ಅಣ್ಣನ ನೆನಪು ಕ) ಅಣ್ಣನ ಮನಸು ಡ) ಅಣ್ಣನ ಸೊಗಸು

೨. ತೇಜಸ್ವಿ ಅವರು ರಾಜರತ್ನಂ ಅವರನ್ನು ____________ ಎಂದು ಭಾವಿಸಿದ್ದರು.
ಅ) ಕವಿ ಬ) ಭಿಕ್ಷುಕ ಕ) ಗೆಳೆಯ ಡ) ಸನ್ಯಾಸಿ

೩. ತೇಜಸ್ವಿಯವರು ಬಾಲ್ಯದಲ್ಲಿ ಕವಿತೆಗಳನ್ನು ____________ ಎಂದು ಭಾವಿಸಿದ್ದರು.
ಅ) ಕವಿಸೃಷ್ಟಿ ಬ) ಮಾಯಾಸೃಷ್ಟಿ ಕ) ಸಹಜಸೃಷ್ಟಿ ಡ) ಮಕ್ಕಳಸೃಷ್ಟಿ

೪. ಕುವೆಂಪು ಅವರ ಪ್ರಕಾರ ಭಿಕ್ಷೆ ನೀಡುವುದು ಭಿಕ್ಷುಕರನ್ನು ____________
ಅ) ಅವಮಾನಿಸಿದಂತೆ ಬ) ತಿರಸ್ಕರಿಸಿದಂತೆ ಕ) ಪ್ರೋತ್ಸಾಹಿಸಿದಂತೆ ಡ) ಗೌರವಿಸಿದಂತೆ

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಕುವೆಂಪು ಅವರು ಭಿಕ್ಷೆ ಹಾಕುವುದನ್ನು ಏಕೆ ವಿರೋಧಿಸುತ್ತಿದ್ದರು?
೨. ಕುವೆಂಪು ಅವರನ್ನು ಮನೆಯವರೆಲ್ಲ ಏನೆಂದು ಕರೆಯುತ್ತಿದ್ದರು?
೩. ಕುವೆಂಪು ಅವರ ಮಕ್ಕಳು ಭಿಕ್ಷುಕನೆಂದು ಭಾವಿಸಿದ ಕವಿಯ ಹೆಸರೇನು?

©KTBS Not to be republished

೪. ಕುವೆಂಪು ಅವರ ಮಕ್ಕಳು ಚಿಕ್ಕವರಿರುವಾಗ ಕವಿತೆಗಳನ್ನು ಏನೆಂದು ತಿಳಿದಿದ್ದರು?

೫. ಕುವೆಂಪು ಅವರ ಹೆಂಡತಿ ಮಕ್ಕಳ ಹೆಸರೇನು?

೬. ರಾಜರತ್ನಂ ಅವರು ಪುಟ್ಟಪ್ಪನವರನ್ನು ಏನೆಂದು ತಮಾಷೆ ಮಾಡಿದರು?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕುವೆಂಪು ಅವರಿಗೆ ಭಿಕ್ಷುಕರ ಬಗ್ಗೆ ಇದ್ದ ಅಭಿಪ್ರಾಯವೇನು?

೨. ಕುವೆಂಪು ತಮ್ಮ ಮಕ್ಕಳಿಗೆ ರಾಜರತ್ನಂ ಅವರನ್ನು ಹೇಗೆ ಪರಿಚಯಿಸಿದರು?

೩. ರಾಜರತ್ನಂ ಅವರ ವೇಷಭೂಷಣಗಳು ಹೇಗಿದ್ದವು?

೪. ರಾಜರತ್ನಂ ಬಗ್ಗೆ ಮಕ್ಕಳು ಕುವೆಂಪು ಅವರಲ್ಲಿ ಏನೆಂದು ಚಾಡಿ ಹೇಳಿದರು?

೫. ಕವಿತೆಯ ಜೊತೆಗೆ ಕವಿಯ ಹೆಸರನ್ನೂ ಏಕೆ ನೆನಪಲ್ಲಿಡಬೇಕು?

೬. ಕುವೆಂಪು ಅವರು ರಾಜರತ್ನಂ ಅವರನ್ನು ಮನೆಯ ಒಳಕ್ಕೆ ಹೇಗೆ ಬರಮಾಡಿಕೊಂಡರು?

೭. ಕುವೆಂಪು ಅವರ ಮಕ್ಕಳನ್ನು ಕಂಡಾಗಲೆಲ್ಲಾ ರಾಜರತ್ನಂ ಏನೆಂದು ತಮಾಷೆ ಮಾಡುತ್ತಿದ್ದರು?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಕುವೆಂಪು ಅವರು ಭಿಕ್ಷೆ ನೀಡಿ ಯಾವ ರೀತಿ ಮೋಸಕ್ಕೆ ಒಳಗಾಗಿದ್ದರು?

೨. ಕುವೆಂಪು ಅವರ ಮಕ್ಕಳು ರಾಜರತ್ನಂ ಅವರನ್ನು ಭಿಕ್ಷುಕನೆಂದು ಏಕೆ ಭಾವಿಸಿದರು? ಅದು ಉಂಟು ಮಾಡಿದ ಫಜೀತಿ ಏನು?

**ಉ) ಸಂದರ್ಭದೊಡನೆ ವಿವರಿಸಿರಿ.**

೧. "ಯಾವನೊ ಒಬ್ಬ ಮುಂದೆ ಹೋಗು ಅಂದರೂ ಹೋಗದೆ ನಿಂತೇ ಇದ್ದಾನೆ"

೨. "ನಿಮ್ಮ ಪುಸ್ತಕದಲ್ಲಿ ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ ಓದಿದ್ದೀರಲ್ಲಾ. ಇವರೇ ಅದನ್ನು ಬರೆದವರು"

೩. "ಏನ್ರಪ್ಪಾ ಒಳಗೆ ಬರಬಹುದೋ, ಮುಂದೆ ಹೋಗಬೇಕೋ?"

## III. ಭಾಷಾಭ್ಯಾಸ :

**ಅ) ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

೧. ಅಪ್ಪ, ಅಣ್ಣ, ತಮ್ಮ, ಸ್ನೇಹಿತ.

೨. ಮನೆಯನ್ನು, ಕರುವನ್ನು, ಏನನ್ನು, ಶಾಲೆಯನ್ನು.

೩. ಬಾಗಿಲು, ಕಿಟಕಿ, ಜೋಳಿಗೆ, ಅಟ್ಟ.

೪. ಸರಸರ, ಬನ್ನಿಬನ್ನಿ, ಸಟ್ಟನೆ, ಪಿಳಿಪಿಳಿ.

೫. ಕಣ್ಣು, ದೇಹ, ಕಿವಿ, ಮೂಗು.

©KTBS Not to be republished

ಆ) **ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

ಶಿರಸಾವಹಿಸಿ, ಆಕಸ್ಮಿಕ, ಛೀಮಾರಿ, ಪ್ರೋತ್ಸಾಹ, ಕನಿಕರ, ಅಂಗಲಾಚು.

ಇ) **ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಕರುಣೆ, ಸಾಧಾರಣ, ಕಷ್ಟ, ಪ್ರೋತ್ಸಾಹಿಸು.

ಈ) **ಕೆಳಗಿನ ಪದಗಳಿಗೆ ಬಹುವಚನ ರೂಪಗಳನ್ನು ಬರೆಯಿರಿ.**

ಭಿಕ್ಷುಕ, ಚೀಲ, ಸೋಮಾರಿ, ಬಾಗಿಲು, ಮಗು, ಕವಿತೆ.

ಉ) **ಕೆಳಗಿನ ಪದಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಬರೆಯಿರಿ.**

ಮನೆಯಿಂದ, ಕಾಲೇಜಿಗೆ, ಊಟವನ್ನು, ಪುಸ್ತಕದ, ದಾರಿಯಲ್ಲಿ.

## IV. ಸೈದ್ಧಾಂತಿಕ ವ್ಯಾಕರಣ :

ಕನ್ನಡ ವರ್ಣಮಾಲೆ, ಗುಣಿತಾಕ್ಷರಗಳು, ಸಂಯುಕ್ತಾಕ್ಷರಗಳು, ಲಿಂಗ, ವಚನ, ವಿಭಕ್ತಿ, ತತ್ಸಮ, ತದ್ಭವ, ವಾಕ್ಯರಚನೆ, ಸಂಧಿಯ ಅರ್ಥ ಮತ್ತು ಕನ್ನಡ ಸಂಧಿ – ಇತ್ಯಾದಿಗಳನ್ನು ೮ನೇ ತರಗತಿಯಲ್ಲಿ ವಿವರವಾಗಿ ಕಲಿತಿದ್ದೀರಿ. ನೀವು ಅವುಗಳನ್ನು ೧೦ ನೇ ತರಗತಿಯವರೆಗೂ ಪುನರ್ ಮನನ ಮಾಡಿಕೊಳ್ಳುತ್ತಿರಬೇಕು. ಈ ತರಗತಿಯಲ್ಲಿ ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದಂತೆ ಇನ್ನೂ ಹಲವು ವಿಚಾರಗಳನ್ನು ನಿಮಗೆ ಪರಿಚಯಿಸಲಾಗುತ್ತದೆ. ಕನ್ನಡ ವ್ಯಾಕರಣವನ್ನು ಚೆನ್ನಾಗಿ ಕಲಿತರೆ ನಿಮ್ಮ ಭಾಷೆಯ ಶುದ್ಧತೆ ಮತ್ತು ಬಳಕೆ ಉತ್ತಮಗೊಳ್ಳುತ್ತದೆ. ಆ ಮುಖೇನ ನಿಮ್ಮ ವ್ಯಕ್ತಿತ್ವವೂ ಹೆಚ್ಚುತ್ತದೆ.

### ಸಂಧಿಗಳು

ಎರಡು ಅಕ್ಷರಗಳು ಕಾಲವಿಳಂಬವಿಲ್ಲದಂತೆ ಕೂಡುವುದಕ್ಕೆ 'ಸಂಧಿ' ಎಂದು ಹೆಸರು.

೧. ಸಂಧಿಯಾಗುವಾಗ ಸ್ವರದ ಮುಂದೆ ಸ್ವರ ಬಂದರೆ 'ಸ್ವರಸಂಧಿ' ಎನ್ನುವರು.

೨. ಸ್ವರದ ಮುಂದೆ ವ್ಯಂಜನ ಅಥವಾ ವ್ಯಂಜನದ ಮುಂದೆ ವ್ಯಂಜನ ಬಂದರೆ 'ವ್ಯಂಜನ ಸಂಧಿ' ಎನ್ನುವರು.

೩. ಸಂಧಿಯಾಗುವಾಗ ಹಲಕೆಲವು ವ್ಯತ್ಯಾಸಗಳು ಸಂಧಿಸಿದ ಅಕ್ಷರಗಳಲ್ಲಿ ಉಂಟಾಗುವುವು. ಅದನ್ನು 'ಸಂಧಿ ಕಾರ್ಯಗಳು' ಎನ್ನುತ್ತೇವೆ.

ನೀವು ೮ ನೇ ತರಗತಿಯಲ್ಲಿ ಕನ್ನಡ ಸಂಧಿಗಳಾದ 'ಲೋಪ ಸಂಧಿ', 'ಆಗಮ ಸಂಧಿ' ಹಾಗೂ 'ಆದೇಶ ಸಂಧಿ' ಇವುಗಳ ಬಗೆಗೆ ತಿಳಿದಿದ್ದೀರಿ. ಈಗ ಸಂಸ್ಕೃತ ಸಂಧಿಗಳನ್ನು ವಿವರವಾಗಿ ತಿಳಿಯೋಣ.

©KTBS Not to be republished

## ಸಂಸ್ಕೃತ ಸಂಧಿಗಳು :

ಸಂಧಿ ಆಗುವ ಎರಡು ಧ್ವನಿಘಟಕಗಳು (ಪದಗಳು) ಸಂಸ್ಕೃತವಾಗಿದ್ದರೆ ಅದನ್ನು **'ಸಂಸ್ಕೃತ ಸಂಧಿ'** ಎಂದು ಕರೆಯಲಾಗುತ್ತದೆ. ಇದರಲ್ಲಿ ಸಂಸ್ಕೃತ ಸ್ವರಸಂಧಿಗಳು ಹಾಗೂ ಸಂಸ್ಕೃತ ವ್ಯಂಜನ ಸಂಧಿಗಳು ಎಂದು ಎರಡು ವಿಭಾಗಗಳಿವೆ. ಮೊದಲಿಗೆ ಸಂಸ್ಕೃತ ಸ್ವರ ಸಂಧಿಗಳನ್ನು ತಿಳಿಯೋಣ.

### ಸಂಸ್ಕೃತ ಸ್ವರಸಂಧಿಗಳು :

**೧. ಸವರ್ಣದೀರ್ಘಸಂಧಿ :** ಎರಡು ಸವರ್ಣ ಸ್ವರಗಳ (ಅ+ಆ, ಇ+ಈ, ಉ+ಊ, ಎ+ಏ, ಒ+ಓ) ನಡುವೆ ಸಂಧಿ ಕಾರ್ಯ ನಡೆದಾಗ ಅವೆರಡರ ಸ್ಥಾನದಲ್ಲಿ ಅದೇ ವರ್ಣದ ದೀರ್ಘಸ್ವರವು ಆದೇಶವಾಗಿ ಬರುವುದನ್ನು 'ಸವರ್ಣದೀರ್ಘ ಸಂಧಿ' ಎಂದು ಕರೆಯಲಾಗುತ್ತದೆ.

| **ಉದಾ :** | **ಪೂರ್ವಪದ** | + | **ಉತ್ತರಪದ** | = **ಸಂಧಿಪದ** | |
|---|---|---|---|---|---|
| | ದೇವ | + | ಆಲಯ | = ದೇವಾಲಯ | (ಅ + ಆ = ಆ) |
| | ಮಹಾ | + | ಅನುಭಾವ | = ಮಹಾನುಭಾವ | (ಆ + ಅ = ಆ) |
| | ಗಿರಿ | + | ಇಂದ್ರ | = ಗಿರೀಂದ್ರ | (ಇ + ಇ = ಈ) |
| | ಗುರು | + | ಉಪದೇಶ | = ಗುರೂಪದೇಶ | (ಉ + ಉ = ಊ) |

**೨. ಗುಣಸಂಧಿ :** ಪೂರ್ವಪದದ ಅಂತ್ಯದಲ್ಲಿ 'ಅ' ಅಥವಾ 'ಆ' ಸ್ವರಗಳಿದ್ದು, ಅವುಗಳಿಗೆ 'ಇ' ಅಥವಾ 'ಈ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಏ' ಸ್ವರವು, 'ಉ' ಅಥವಾ 'ಊ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಓ' ಸ್ವರವು, ಅದೇ ರೀತಿ 'ಋ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಅರ್' ಆದೇಶವಾಗಿ ಬರುವುದನ್ನು 'ಗುಣ ಸಂಧಿ' ಎಂದು ಕರೆಯಲಾಗುತ್ತದೆ.

| **ಉದಾ :** | **ಪೂರ್ವಪದ** | + | **ಉತ್ತರಪದ** | = **ಸಂಧಿಪದ** | |
|---|---|---|---|---|---|
| | ದೇವ | + | ಈಶ | = ದೇವೇಶ | (ಅ + ಈ = ಏ) |
| | ಮಹಾ | + | ಉತ್ಸವ | = ಮಹೋತ್ಸವ | (ಆ + ಉ = ಓ) |
| | ಮಹಾ | + | ಋಷಿ | = ಮಹರ್ಷಿ | (ಆ + ಋ = ಅರ್) |

**೩. ವೃದ್ಧಿಸಂಧಿ :** ಪೂರ್ವಪದದ ಅಂತ್ಯದಲ್ಲಿ 'ಅ' ಅಥವಾ 'ಆ' ಸ್ವರಗಳಿದ್ದು, ಅವುಗಳಿಗೆ 'ಏ' ಅಥವಾ 'ಐ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಐ' ಸ್ವರವು, ಅದೇ ರೀತಿ 'ಓ' ಅಥವಾ 'ಔ' ಸ್ವರ ಪರವಾದರೆ ಅವೆರಡರ ಸ್ಥಾನದಲ್ಲಿ 'ಔ' ಸ್ವರವು ಆದೇಶವಾಗಿ ಬರುತ್ತದೆ. ಇದನ್ನೇ 'ವೃದ್ಧಿ ಸಂಧಿ' ಎಂದು ಕರೆಯಲಾಗುತ್ತದೆ.

©KTBS Not to be republished

| ಉದಾ : | ಪೂರ್ವಪದ | + | ಉತ್ತರಪದ | = ಸಂಧಿಪದ | |
|---|---|---|---|---|---|
| | ಏಕ | + | ಏಕ | = ಏಕೈಕ | (ಅ + ಏ = ಐ) |
| | ಭಾವ | + | ಐಕ್ಯ | = ಭಾವೈಕ್ಯ | (ಅ + ಐ = ಐ) |
| | ಜಲ | + | ಓಘ | = ಜಲೌಘ | (ಅ + ಓ = ಔ) |
| | ವನ | + | ಔಷಧ | = ವನೌಷಧ | (ಅ + ಔ = ಔ) |

**೪. ಯಣ್‌ಸಂಧಿ :** ಪೂರ್ವಪದದ ಅಂತ್ಯದಲ್ಲಿನ ಇ,ಈ,ಉ,ಊ,ಋ ಸ್ವರಗಳಿಗೆ ಅನ್ಯಸ್ವರಗಳು ಪರವಾದಾಗ 'ಇ','ಈ' ಸ್ವರಗಳಿಗೆ 'ಯ್' ಕಾರವೂ, 'ಉ', 'ಊ' ಸ್ವರಗಳಿಗೆ 'ವ್' ಕಾರವೂ, 'ಋ' ಸ್ವರಕ್ಕೆ 'ರ್' ಕಾರವು ಆದೇಶವಾಗಿ ಬರುವುದು. ಇದನ್ನು 'ಯಣ್‌ಸಂಧಿ' ಎಂದು ಕರೆಯಲಾಗುತ್ತದೆ.

| ಉದಾ : | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ಅತಿ | + | ಉಕ್ತಿ | = ಅತ್ಯುಕ್ತಿ |
| | ಮನು | + | ಅಂತರ | = ಮನ್ವಂತರ |
| | ಪಿತೃ | + | ಆರ್ಜಿತ | = ಪಿತ್ರಾರ್ಜಿತ |

## ಸಂಸ್ಕೃತ ವ್ಯಂಜನ ಸಂಧಿಗಳು :

**೫. ಜಸ್ತ್ವಸಂಧಿ :** ಪೂರ್ವಪದದ ಕೊನೆಯಲ್ಲಿರುವ ಕ್,ಚ್,ಟ್,ತ್,ಪ್, ವ್ಯಂಜನಗಳಿಗೆ ಯಾವ ವರ್ಣ ಪರವಾದರೂ ಅದೇ ವರ್ಗದ ಮೂರನೆಯ ವ್ಯಂಜನಾಕ್ಷರಗಳು (ಗ್,ಜ್,ಡ್,ದ್,ಬ್,) ಆದೇಶವಾಗಿ ಬರುತ್ತವೆ. ಇದನ್ನು 'ಜಸ್ತ್ವಸಂಧಿ' ಎನ್ನುತಾರೆ.

| ಉದಾ : | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ವಾಕ್ | + | ದೇವಿ | = ವಾಗ್ದೇವಿ |
| | ಅಚ್ | + | ಅಂತ | = ಅಜಂತ |
| | ಷಟ್ | + | ಆನನ | = ಷಡಾನನ |
| | ಸತ್ | + | ಆನಂದ | = ಸದಾನಂದ |
| | ಅಪ್ | + | ಧಿ | = ಅಬ್ಧಿ |

**೬. ಶ್ಚುತ್ವಸಂಧಿ :** ಪೂರ್ವಪದದ ಕೊನೆಯಲ್ಲಿ ಸಕಾರ ಇಲ್ಲವೇ ತವರ್ಗಾಕ್ಷರಗಳಿಗೆ ಶಕಾರ ಇಲ್ಲವೇ ಚವರ್ಗಾಕ್ಷರಗಳು ಪರವಾದಾಗ ಸಕಾರಕ್ಕೆ ಶಕಾರವೂ, ತವರ್ಗಕ್ಕೆ ಚವರ್ಗವೂ ಆದೇಶಗಳಾಗಿ ಬರುತ್ತವೆ. ಇದನ್ನು 'ಶ್ಚುತ್ವ ಸಂಧಿ' ಎನ್ನುತ್ತಾರೆ.

| ಉದಾ : | ಪೂರ್ವಪದ | + | ಉತ್ತರಪದ | = ಸಂಧಿಪದ |
|---|---|---|---|---|
| | ಮನಸ್ | + | ಶುದ್ಧಿ | = ಮನಶ್ಶುದ್ಧಿ |
| | ಸತ್ | + | ಚಿತ್ರ | = ಸಚ್ಚಿತ್ರ |
| | ಜಗತ್ | + | ಜ್ಯೋತಿ | = ಜಗಜ್ಜ್ಯೋತಿ |

©KTBS Not to be republished

**೭. ಅನುನಾಸಿಕಸಂಧಿ :** ವರ್ಗದ ಪ್ರಥಮ ಆಕ್ಷರಗಳಿಗೆ ಯಾವ ಅನುನಾಸಿಕ ಅಕ್ಷರ ಪರವಾದರೂ ಅವುಗಳಿಗೆ ಅಂದರೆ ಕ್, ಚ್,ಟ್,ತ್,ಪ್, ವ್ಯಂಜನಗಳಿಗೆ ಕ್ರಮವಾಗಿ ಅದೇ ವರ್ಗದ ಜ್, ಞ್, ಣ್, ನ್, ಮ್, ವ್ಯಂಜನಗಳು ಆದೇಶಗಳಾಗಿ ಬರುತ್ತವೆ.

| **ಉದಾ :** | **ಪೂರ್ವಪದ** | + | **ಉತ್ತರಪದ** | = **ಸಂಧಿಪದ** |
|---|---|---|---|---|
| | ದಿಕ್ | + | ನಾಗ | = ದಿಙ್ನಾಗ |
| | ಷಟ್ | + | ಮಾಸ | = ಷಣ್ಮಾಸ |
| | ಚಿತ್ | + | ಮೂಲ | = ಚಿನ್ಮೂಲ |

## V. ಚಟುವಟಿಕೆಗಳು :

೧. ತೇಜಸ್ವಿಯವರ 'ಅಣ್ಣನ ನೆನಪು' ಕೃತಿಯನ್ನು ಓದಿರಿ.

೨. ರಾಜರತ್ನಂ ಅವರು ಬರೆದಿರುವ ಮಕ್ಕಳ ಕವಿತೆಗಳನ್ನು ಸಂಗ್ರಹಿಸಿ ಓದಿರಿ.

೩. ನಿಮ್ಮ ಜೀವನದಲ್ಲಿ ನಡೆದ ಸ್ವಾರಸ್ಯಕರ ಘಟನೆಗಳನ್ನು ಬರೆದು ಶಾಲಾ ಭಿತ್ತಿಪತ್ರದಲ್ಲಿ ಪ್ರಕಟಿಸಿ.

©KTBS Not to be republished

# ೨. ಅರಳಿಕಟ್ಟೆ


– ಬಿ. ಜಿ. ಎಲ್. ಸ್ವಾಮಿ

**ಪಾಠ ಪ್ರವೇಶ :** ಕೆಲವು ಗಿಡಮರಗಳು ನಮ್ಮ ಸಮೀಪದಲ್ಲಿದ್ದರೂ ಅವುಗಳ ಉಪಯೋಗ, ಗುಣ, ಲಕ್ಷಣಗಳು ನಮ್ಮ ಅರಿವಿಗೆ ಬಾರದಿರಬಹುದು. ಎಷ್ಟೋ ಗಿಡ ಮೂಲಿಕೆಗಳು ಅಳಿವಿನ ಅಂಚಿನಲ್ಲಿವೆ. ಅಶ್ವತ್ಥವೃಕ್ಷವನ್ನು ಅರಳಿಮರ, ಬೋಧಿವೃಕ್ಷವೆಂತಲೂ ಕರೆಯುವರು. ಮಾನವನ ಒಡನಾಡಿಯಾಗಿ ಅಶ್ವತ್ಥಮರ ಅನಾದಿಕಾಲದಿಂದಲೂ ಉಪಯೋಗದಲ್ಲಿದೆ. ಈ ಮರವನ್ನು "ಆಮ್ಲಜನಕದ ಬ್ಯಾಂಕ್" ಎಂದು ಕರೆಯುವರು. ನಮ್ಮ ಪೂರ್ವಜರು ಈ ಮರದ ಗುಣವನ್ನು ಅರಿತೇ ಪ್ರತಿ ಗ್ರಾಮದ ಮುಂದೆ ಅರಳಿಮರದ ಜೊತೆಗೆ ಬೇವಿನ ಮರವನ್ನು ಬೆಳೆಸಿ ಸುತ್ತಲೂ ಕಟ್ಟೆಕಟ್ಟಿ ನಾಗರಕಲ್ಲು ಪ್ರತಿಷ್ಠಾಪಿಸಿ ಪೂಜಿಸುತ್ತಿದ್ದರು. ಅರಳಿಮರದ ಎಲೆಗಳನ್ನು ಆಡು, ಹಸು, ಎಮ್ಮೆಗಳು ತಿನ್ನುತ್ತವೆ. ಹಣ್ಣುಗಳನ್ನು ಹತ್ತಾರು ಪಕ್ಷಿಗಳು ತಿನ್ನುತ್ತವೆ. ಪಕ್ಷಿಗಳು ಗೂಡುಕಟ್ಟಿ ವಾಸ ಮಾಡುತ್ತವೆ. ಅಲ್ಲದೆ ನೂರಾರು ಕ್ರಿಮಿ–ಕೀಟಗಳ ವಾಸಸ್ಥಾನವೂ ಹೌದು.

ಬಹು ಉಪಯುಕ್ತವಾದ ಅರಳಿಮರವನ್ನು ನೆಟ್ಟು ಬದುಕಿನ ಸಾರ್ಥಕತೆಯನ್ನು ಕಂಡುಕೊಂಡ ಹೃದಯ ಶ್ರೀಮಂತಿಕೆ ಮೆರೆದ ಕಡುಬಡತನದ ಶೇಷಪ್ಪನ ಯಶೋಗಾಥೆಯೆ ಪ್ರಸ್ತುತ ಗದ್ಯದ ತಿರುಳು. ಇಂತಹ ಸಾರ್ಥಕ ಬದುಕನ್ನು ಬದುಕಬೇಕು ಎಂಬುದು ಲೇಖಕರ ಆಶಯ.

©KTBS
Not to be republished

ನನ್ನ ಚಿಕ್ಕಂದಿನಲ್ಲಿ ನಮ್ಮ ಮನೆಗೊಬ್ಬ ವೃದ್ಧರು ಬರುತ್ತಿದ್ದರು. ವಯಸ್ಸು ೭೫–೮೦ ಇರಬಹುದು; ಕೃಶವಾದ ದೇಹ, ಕುಳಿಬಿದ್ದ ಕಣ್ಣು, ದೃಷ್ಟಿಮಾಂದ್ಯ, ಕಿವಿಯಂತೂ ಎಷ್ಟೋ ವರ್ಷಗಳ ಹಿಂದೆಯೇ ತನ್ನ ಕಾರ್ಯದಿಂದ ರಿಟೈರ್ ಆಗಿಬಿಟ್ಟಿತ್ತು. ಕೈಯಲ್ಲಿ ಕೋಲು ಹಿಡಿಯದೆ ಒಂದು ಹೆಜ್ಜೆಯನ್ನೂ ಇಡುವಂತಿರಲಿಲ್ಲ. ನಿತ್ಯ ಭಿಕ್ಷೆಯಿಂದ ಜೀವನ. ಇಳಿ ವಯಸ್ಸಿನಲ್ಲಿ ಇವರನ್ನು ನೋಡಿಕೊಳ್ಳುವವರಾರೂ ಇರಲಿಲ್ಲ. ಶೇಷಪ್ಪ ಎಂದೇನೋ ಹೆಸರು. ಈತನಿಗಿದ್ದದ್ದು ಒಂದೇ ಒಂದು ಆಸೆ, ಉತ್ಕಟವಾದ ಆಸೆ. ಕಣ್ಣುಮುಚ್ಚುವುದರೊಳಗಾಗಿ ನೆರವೇರಿಸಬೇಕೆಂಬ ಆಸೆ. ಅಶ್ವತ್ಥ ಪ್ರತಿಷ್ಠೆ, ಪ್ರತಿಷ್ಠೆಯಾದ ಮರಕ್ಕೊಂದು ಕಟ್ಟೆ ಕಟ್ಟುವುದು. ಈ ಎರಡು ಕರ್ತವ್ಯಗಳ ಹೊರೆ ಅವರ ಹೆಗಲ ಮೇಲೆ ಭಾರವಾಗಿ ಹೇರಿಕೊಂಡಿದ್ದು ಬಹಳ ತೊಂದರೆ ಕೊಡುತ್ತಿದ್ದವಂತೆ. ಈ ಕಾರ್ಯಕ್ಕಾಗಿ ಅವರು ಉದ್ದೇಶಿಸಿದ್ದ ಪ್ರದೇಶ ಬಸವನಗುಡಿಯಲ್ಲಿರುವ (ಬೆಂಗಳೂರು) ಮಲ್ಲಿಕಾರ್ಜುನಸ್ವಾಮಿ ಗುಡಿಯ ಮುಂಭಾಗ. ಅದು ಸರ್ಕಾರಕ್ಕೋ ಕಾರ್ಪೋರೇಷನ್ನಿಗೋ ಸೇರಿದ್ದು. ಕಟ್ಟೆ ಹಾಕುವುದಕ್ಕೆ ಈ ಸಂಸ್ಥೆಗಳವರು ಏನೋ ತಕರಾರು ಎತ್ತಿದ್ದರು. ವೃದ್ಧರ ಯತ್ನಕ್ಕೆ ವಿಘ್ನಗಳನ್ನು ಒಡ್ಡಿದ್ದರು. ಇದರ ವಿಷಯವಾಗಿ ಮಾತುಕತೆಯಾಡಿಕೊಂಡು ಹೋಗುವುದಕ್ಕೆ ನನ್ನ ತಂದೆಯವರ ಬಳಿ ಬರುತ್ತಿದ್ದರು. ಕೊನೆಗೊಂದು ದಿನ ವಿಘ್ನಗಳು ನಿವಾರಣೆಯಾದವು. ಪ್ರಶಸ್ತ



ದಿನವೊಂದರಲ್ಲಿ ಕಾರ್ಯಗಳನ್ನು ಮುಗಿಸಿದರು. ಬೆಳಗ್ಗೆ ಸುಮಾರು ೧೧ ಗಂಟೆ ಸಮಯಕ್ಕೆ ವೃದ್ಧರು ಮನೆಗೆ ಬಂದರು. ತಂದೆಯವರು ಹೊರಗೆ ಹೋಗಿದ್ದರು. ವೃದ್ಧರು ಕೈಲಿ ಹಿಡಿದು ತಂದಿದ್ದ ತಾಮ್ರದ ಪಂಚಪಾತ್ರೆ, ಉದ್ದರಣೆ, ಒಂದು ಬಾಳೆಹಣ್ಣು, ಎರಡು ಸೇವಂತಿಗೆ ಹೂ, ಒಂದು 'ಅನಂತ ವಸ್ತ್ರ' ಇವುಗಳನ್ನು ನನ್ನ ಸೋದರತ್ತೆಯವರ ಕೈಲಿಟ್ಟು "ಇವುಗಳನ್ನು ಯಜಮಾನರಿಗೆ ತಲುಪಿಸಿಬಿಡಿ. ಕಾರ್ಯ ನನ್ನ ಉದ್ದೇಶಕ್ಕೆ ತಕ್ಕಂತೆ ನೆರವೇರಿತು. ನನ್ನ ಋಣ ತೀರಿತು. ಯಜಮಾನರ ನೆರವಿಲ್ಲದೆ ಹೋಗಿದ್ದಿದ್ದರೆ ನನ್ನ ಋಣದ ಗಂಟನ್ನು ಹೊತ್ತುಕೊಂಡೇ ಕಣ್ಮುಚ್ಚಬೇಕಾಗಿದ್ದಿತು. ಈಗ ನನಗೆ ಯಾವ ಭಯವೂ ಇಲ್ಲ. ನಿಶ್ಚಿಂತೆಯಿಂದ ಮುಂದನ್ನು ಎದುರು ನೋಡುತ್ತಿದ್ದೇನೆ. ಇನ್ನೊಂದು ಸಲ ಬಂದು ಯಜಮಾನರಿಗೆ ಸಾಷ್ಟಾಂಗ ಬೀಳುತ್ತೇನೆ. ದಯವಿಟ್ಟು ತಿಳಿಸಿಬಿಡಿ" ಎಂದು ಹೊರಡಲು ಉದ್ಯುಕ್ತರಾದರು. ಸೋದರತ್ತೆ "ಒಂದಿಷ್ಟು ಹಾಲು ಕುಡಿದು ಹೋಗಬೇಕು" ಎಂದರು.

"ಇಲ್ಲಮ್ಮ, ಇವತ್ತು ನಾಲ್ಕು ಜನಕ್ಕೆ ಭೋಜನ ಬಡಿಸಬೇಕು. ಅವರದಾದ ಬಳಿಕವೇ ನನ್ನದು. ನಾಲ್ಕೈದು ಮನೆಗಳಿಗೆ ಹೋಗಿ ಭಿಕ್ಷೆ ತೆಗೆದುಕೊಳ್ಳಬೇಕು. ಆಮೇಲೆ ಅಡುಗೆ ಮಾಡಬೇಕು. ಅನ್ನಶಾಂತಿಗೆ ಬರುವವರನ್ನು ನಾನು ಕಾಯಿಸಬಾರದಮ್ಮ."

"ಅಕ್ಕಿ ಬೇಳೆ ಸಾಮಗ್ರಿಗಳನ್ನು ನಮ್ಮ ಮನೆಯಿಂದಲೇ ಕೊಡುತ್ತೇನೆ."

"ಬೇಡಮ್ಮ, ನಾಲ್ಕು ಬಾಗಿಲಲ್ಲಿ ನಿಂತು ಯಾಚಿಸುವುದು ನನಗೆ ರಕ್ತಗತವಾಗಿಬಿಟ್ಟಿದೆ. ಇಂದೇಕೆ ಅದನ್ನು ತಪ್ಪಿಸಲಿ?" ಎಂದು ಹೊರಟುಹೋದರು.


©KTBS Not to be republished

ನನ್ನ ಬಾಲ್ಯದ ಬುದ್ಧಿಗೆ "ಈ ಮುದುಕ ಯಾಚನೆಯಿಂದ ಜನರನ್ನು ತೊಂದರೆಗೀಡುಮಾಡಿ, ಮರ ನೆಟ್ಟು ಜಗುಲಿ ಕಟ್ಟಿಸದೆ ಹೋಗಿದ್ದರೆ ಯಾರು ಅಳುತ್ತಿದ್ದರು?" ಎನ್ನಿಸಿದ್ದೇನೋ ನಿಜ. ಕಾಲಕ್ರಮೇಣದಲ್ಲಿ ಶೇಷಪ್ಪನಂಥ ಮಹಾನುಭಾವರಿಗೆಲ್ಲ ಮನಸ್ಸಿನಲ್ಲಿಯೇ ಎಷ್ಟೋ ಸಲ ಮಣಿದಿದ್ದೇನೆ. ಕೃತಜ್ಞತೆ ಅರ್ಪಿಸಿದ್ದೇನೆ. ಅವರ ಜೀವಿತದಲ್ಲಿ ಯಾವುದೋ ಒಂದು – ತಮ್ಮ ಸ್ವಧರ್ಮ ದೃಷ್ಟಿಯಲ್ಲಿ ಸರಿಯೆಂದು ಪ್ರೇರಿತವಾದ ಯಾವುದೋ ಒಂದು – ಉದ್ದೇಶವನ್ನು ಕಂಡುಕೊಂಡು, ಅದನ್ನು ತನ್ನ ಋಣ ತೀರಿಸುವ ಕರ್ತವ್ಯವೆಂದು ಬಗೆದು, ತದೇಕಚಿತ್ತತೆಯಿಂದ ಅದರ ಸಾಧನೆಯಲ್ಲಿ ತೊಡಗಿ, ಪೂರೈಸಿ ಕೃತಕೃತ್ಯರಾದವರು ಮಹಾನುಭಾವರು ಎಂದು ನನ್ನ ತಿಳಿವಳಿಕೆ. ಇಂಥವರ ಸತತವಾದ ನಿಷ್ಠೆಯಿಂದಲೇ ಬೀದಿಗೊಂದು ಹಳ್ಳಿಗೊಂದು ಅಶ್ವತ್ಥಕಟ್ಟೆ ತಲೆಯೆತ್ತಿವೆ.

ಅಶ್ವತ್ಥ ಬರಿಯ ಮರವಲ್ಲ, ಕಟ್ಟೆ ಯಾವುದೋ ಕಟ್ಟೆಯಲ್ಲ. ಇವೆರಡೂ ಜನಜೀವನದಲ್ಲಿ ಬಹುಕಾಲದಿಂದ ಒಂದಾಗಿಬಿಟ್ಟಿವೆ. ಹಳ್ಳಿಯ ಸಾರ್ವಜನಿಕ ಸಮಾರಂಭಗಳು ಅಶ್ವತ್ಥ ಮರದಡಿಯಲ್ಲಿ ನಡೆಯುತ್ತವೆ. ಪಂಚಾಯಿತಿಗಳಿಗೆ ಅಶ್ವತ್ಥಮರ ಛಾವಣಿ, ಕಟ್ಟೆಯೇ ನೆಲಹಾಸು; ಮದುವೆ ಮುಂಜಿಗಳಿಗೆ ಪ್ರಶಸ್ತವಾದ, ಪವಿತ್ರವಾದ ಕಲ್ಯಾಣ ಮಂಟಪ; ಪ್ರವಾಸಿಗಳಿಗೂ ಯಾತ್ರಾರ್ಥಿಗಳಿಗೂ ಆದರವೀಯುವ ಸತ್ರ; ಮಕ್ಕಳ ಆಟ, ಓಟ, ಪಾಠಗಳಿಗೆ ಕಾಪು: ಹಿರಿಯರ ಗಾಳಿ ಸೇವನೆಗೂ ವಿಚಾರ ವಿನಿಮಯಕ್ಕೂ ಒಪ್ಪುವ ಆಶ್ರಯ. ಬೀದಿ ಮಾತಿಗೂ ಕಾಡು ಹರಟೆಗೂ ಕೀಟಲೆ ಕೋಟಲೆಗಳಿಗೂ ಮಾತೃಸ್ಥಾನವಾಗಿಯೂ ರೂಪುಗೊಂಡಿದೆ.

* * * *

## ಕೃತಿಕಾರರ ಪರಿಚಯ :



**ಬಿ.ಜಿ.ಎಲ್. ಸ್ವಾಮಿ** ಅವರ ಪೂರ್ಣ ಹೆಸರು ಬೆಂಗಳೂರು ಗುಂಡಪ್ಪ ಲಕ್ಷ್ಮೀನಾರಾಯಣ ಸ್ವಾಮಿ. ಇವರು ೧೯೧೬ ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಇವರ ತಂದೆ ಕನ್ನಡದ ಪ್ರಖ್ಯಾತ ಲೇಖಕರೂ ಕವಿಗಳೂ ಆದ ಡಿ.ವಿ. ಗುಂಡಪ್ಪನವರು.

ಇವರ ಪ್ರಮುಖ ಕೃತಿಗಳೆಂದರೆ, 'ದೌರ್ಗಂಧಿಕಾಪಹರಣ', 'ಶಾಸನಗಳಲ್ಲಿ ಗಿಡಮರಗಳು', 'ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ', 'ಹಸುರು ಹೊನ್ನು', 'ಪಂಚಕಲಶಗೋಪುರ', 'ಕಾಲೇಜುರಂಗ', 'ಕಾಲೇಜು ತರಂಗ', 'ತಮಿಳು ತಲೆಗಳ ನಡುವೆ' ಮುಂತಾದವು. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ. ಶ್ರೀಯುತರು ೧೯೮೦ ರಲ್ಲಿ ಇಹಲೋಕವನ್ನು ತ್ಯಜಿಸಿದರು. ಪ್ರಸ್ತುತ **'ಅರಳಿ ಕಟ್ಟೆ'** ಗದ್ಯ ಭಾಗವನ್ನು ಬಿ.ಜಿ.ಎಲ್.ಸ್ವಾಮಿ ಅವರ **'ಹಸುರು ಹೊನ್ನು'** ಕೃತಿಯಿಂದ ಆರಿಸಲಾಗಿದೆ.

©KTBS Not to be republished

# ಅಭ್ಯಾಸ

## I. ಪದಗಳ ಅರ್ಥ :

**ಆದರ** – ಪ್ರೀತಿ; ಗೌರವ.
**ಉದ್ಧರಣೆ** – ತೀರ್ಥದ ಸಣ್ಣ ಚಮಚ
**ಕಾಪು** – ಕಾಯುವಿಕೆ; ಕಾವಲು; ರಕ್ಷಣೆ.
**ಕೃಶ** – ಬಡಕಲು; ಅಶಕ್ತ.
**ಪ್ರತಿಷ್ಠೆ** – ಸ್ಥಾಪನೆ
**ರಿಟೈರ್** (ಇಂಗ್ಲಿಷ್) – ನಿವೃತ್ತಿ
**ಸತ್ರ** – ಛತ್ರ
**ಸಾಷ್ಟಾಂಗ ಬೀಳು** – ದೀರ್ಘದಂಡ ನಮಸ್ಕಾರ ಮಾಡು.
**ಉತ್ಕಟ** – ಪ್ರಬಲ
**ಉದ್ಯುಕ್ತ** – ಕೆಲಸದಲ್ಲಿ ತೊಡಗಿದ; ಪ್ರಯತ್ನಿಸಿದ.
**ಕೃತಕೃತ್ಯ** – ಸಾರ್ಥಕ; ಧನ್ಯ; ಇಚ್ಛೆಪೂರ್ತಿಗೊಂಡ.
**ಕಾರ್ಪೋರೇಷನ್** (ಇಂಗ್ಲಿಷ್) – ನಗರ ಪಾಲಿಕೆ
**ವಿಘ್ನ** – ಅಡಚಣೆ
**ವೃದ್ಧ** – ವಯಸ್ಸಾದ ವ್ಯಕ್ತಿ; ಮುದುಕ.
**ಸರ್ಕಾರ** (ಹಿಂದಿ) – ಆಡಳಿತ ನಡೆಸುವ ವ್ಯವಸ್ಥೆ.

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಶೇಷಪ್ಪನವರಿಗೆ ಜೀವನದಲ್ಲಿದ್ದ ಉತ್ಕಟ ಆಸೆ ಯಾವುದು?
೨. ಶೇಷಪ್ಪನವರು ಜೀವನೋಪಾಯಕ್ಕೆ ಏನು ಮಾಡುತ್ತಿದ್ದರು?
೩. ಶೇಷಪ್ಪನವರು ಅಶ್ವತ್ಥ ಕಟ್ಟೆಯನ್ನು ಕಟ್ಟಲು ಗುರುತಿಸಿದ ಸ್ಥಳ ಯಾವುದು?
೪. 'ಅರಳಿಕಟ್ಟೆ' ಗದ್ಯ ಭಾಗದ ಆಕರ ಗ್ರಂಥ ಯಾವುದು?
೫. ಬಿ.ಜಿ.ಎಲ್. ಸ್ವಾಮಿಯವರ ಪೂರ್ಣ ಹೆಸರೇನು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಶೇಷಪ್ಪನವರ ದೇಹಾರೋಗ್ಯದ ಸ್ಥಿತಿ ಹೇಗಿತ್ತು?
೨. ಶೇಷಪ್ಪನವರು ತಮ್ಮ ಆಸೆ ನೆರವೇರಿದುದರಿಂದ ಕೃತಜ್ಞತೆಯನ್ನು ಹೇಗೆ ಸಲ್ಲಿಸಿದರು?
೩. ಶೇಷಪ್ಪನವರ ಆಸೆಯನ್ನು ಗಮನಿಸಿದ ಲೇಖಕರಿಗೆ ಬಾಲ್ಯದಲ್ಲಿ ಅನಿಸಿದ್ದೇನು?
೪. ಅಶ್ವತ್ಥಕಟ್ಟೆ ಜನರಿಗೆ ಹೇಗೆ ಉಪಯುಕ್ತವಾಗಿದೆ?
೫. ಲೇಖಕರು ಶೇಷಪ್ಪನವರಿಗೆ ಕೃತಜ್ಞತೆ ಅರ್ಪಿಸಿದ್ದು ಏಕೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಏಳು–ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಶೇಷಪ್ಪನವರ ವ್ಯಕ್ತಿತ್ವದ ವಿಶೇಷತೆಗಳೇನು?
೨. ಶೇಷಪ್ಪನವರಿಗೂ ಲೇಖಕರ ಸೋದರತ್ತೆಗೂ ಯಾವ ರೀತಿಯ ಸಂಭಾಷಣೆ ನಡೆಯಿತು?

©KTBS Not to be republished

**ಈ) ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿರಿ.**

೧. "ಇವುಗಳನ್ನು ಯಜಮಾನರಿಗೆ ತಲುಪಿಸಿಬಿಡಿ."

೨. "ಒಂದಿಷ್ಟು ಹಾಲು ಕುಡಿದು ಹೋಗಬೇಕು."

೩. "ಅಕ್ಕಿ ಬೇಳೆ ಸಾಮಗ್ರಿಗಳನ್ನು ನಮ್ಮ ಮನೆಯಿಂದಲೇ ಕೊಡುತ್ತೇನೆ."

೪. "ಅಶ್ವತ್ಥ ಬರಿಯ ಮರವಲ್ಲ."

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪಗಳನ್ನು ಬರೆಯಿರಿ.**

ನಿತ್ಯ, ಕಾರ್ಯ, ಸಂಸ್ಥಾ, ಸ್ಥಾನ, ರಕ್ತ, ಭಿಕ್ಷೆ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಇಳಿ, ಆಸೆ, ಕೃತಜ್ಞತೆ, ಭಾರ, ಭಯ, ನಿಶ್ಚಿಂತೆ.

**ಇ) ಕೆಳಗೆ ನೀಡಿರುವ ಪದಗಳನ್ನು ಮಾದರಿಯಂತೆ ವಿಭಿನ್ನಾರ್ಥಗಳಲ್ಲಿ ವಾಕ್ಯಗಳನ್ನು ರಚಿಸಿರಿ.**

**ಮಾದರಿ :** ತಂದೆ - * ನಾನು ಈ ಪುಸ್ತಕವನ್ನು ಅಂಗಡಿಯಿಂದ ತಂದೆ.

* ನನ್ನ ತಂದೆ ಬೆಂಗಳೂರಿಗೆ ಹೋಗಿದ್ದಾರೆ.

ತೊರೆ, ಮಡಿ, ಕಳೆ, ತಂದೆ, ಮುಗಿ.

**ಈ) ಕೆಳಗಿನ ಪದಗಳನ್ನು ಬಿಡಿಸಿ, ಸಂಧಿ ಹೆಸರಿಸಿ.**

ಮನೆಗೊಬ್ಬ, ಕಿವಿಯಂತೂ, ಭಿಕ್ಷೆಯಿಂದ, ಮರಕ್ಕೊಂದು, ಇದೇಕೆ.

## IV. ಸೈದ್ಧಾಂತಿಕ ವ್ಯಾಕರಣ :

**ದೇಶೀಯ, ಅನ್ಯದೇಶೀಯ ಪದಗಳು :**

ಒಂದು ಭಾಷೆ ಜನರು, ಬೇರೊಂದು ಭಾಷೆಯ ಜನರೊಂದಿಗೆ ವ್ಯವಹರಿಸಿದಾಗ ಅವರು ಬಳಸುವ ಭಾಷೆಯ ಶಬ್ದಗಳೂ ಸಹ ಪರಸ್ಪರ ವರ್ಗಾವಣೆಯಾಗುತ್ತವೆ. ಹೀಗೆ ಒಂದು ಭಾಷೆಯಲ್ಲಿ ಹಲವು ಭಾಷೆಯ ಶಬ್ದಗಳೂ ಸೇರಬಹುದು. ನಮ್ಮ ಕನ್ನಡ ಭಾಷೆಯಲ್ಲಿ ಸಂಸ್ಕೃತ, ಇಂಗ್ಲಿಷ್, ಹಿಂದಿ, ಪೋರ್ಚುಗೀಸ್, ಫಾರ್ಸಿ, ಉರ್ದು, ಪ್ರಾಕೃತ ಇತ್ಯಾದಿ ಭಾಷೆಯ ಶಬ್ದಗಳು ಆಯಾ ಕಾಲದ ಜನರ ಸಂಪರ್ಕದೊಂದಿಗೆ ಬೆರೆತುಕೊಂಡಿವೆ. ಈ ಕೆಳಗಿನ ಉದಾಹರಣೆಯನ್ನು ಗಮನಿಸಿ,

©KTBS Not to be republished

**'ಮೋಟಾರುಗಳಲ್ಲಿ ಜಬರ್ದಸ್ತಿನಿಂದ ಓಡಾಡುವುದೇ ಜೀವನದ ಮುಖ್ಯ ಗುರಿಯಲ್ಲವೆಂದು ನಾವು ತಿಳಿಯಬೇಕು.'** ಈ ವಾಕ್ಯದಲ್ಲಿ

೧. ಮೋಟಾರು – ಇಂಗ್ಲಿಷ್ ಭಾಷೆಯ ಶಬ್ದ
೨. ಜಬರ್ದಸ್ತ್ – ಹಿಂದಿ ಭಾಷೆಯ ಶಬ್ದ
೩. ಜೀವನ, ಮುಖ್ಯ – ಸಂಸ್ಕೃತ ಭಾಷೆಯ ಶಬ್ದಗಳು
೪. ಓಡಾಡು, ಗುರಿ, ನಾವು, ತಿಳಿಯಬೇಕು – ಕನ್ನಡ ಭಾಷೆಯ ಶಬ್ದಗಳು.

ಹೀಗೆ ನಾವು ಮಾತನಾಡುವ ಕನ್ನಡ ಭಾಷೆಯಲ್ಲಿ ಬೇರೆಬೇರೆ ಭಾಷೆಯ ಪದಗಳು ಬೆರೆತು, ಅವುಗಳಲ್ಲಿ ಕನ್ನಡದ ಪದಗಳು ಯಾವುವು? ಬೇರೆ ಭಾಷೆಯ ಪದಗಳು ಯಾವುವು? ಎಂಬುದನ್ನು ಗುರುತಿಸುವುದಕ್ಕೆ ಸಾಧ್ಯವಾಗದಷ್ಟು ಚಿರಪರಿಚಿತವಾಗಿವೆ. ಭಾಷೆಯ ತಿಳಿವಳಿಕೆಯ ದೃಷ್ಟಿಯಿಂದ ಅಚ್ಚಗನ್ನಡ ಶಬ್ದಗಳನ್ನು **'ದೇಶ್ಯ'** ಶಬ್ದಗಳು ಎನ್ನುತ್ತೇವೆ. ಉಳಿದವುಗಳನ್ನು **'ಅನ್ಯದೇಶೀಯ'** ಶಬ್ದಗಳು ಎನ್ನುತ್ತೇವೆ.

**೧. ದೇಶ್ಯ ಶಬ್ದಗಳು :**

ಕನ್ನಡ ಭಾಷೆಯ ಮೂಲ ಶಬ್ದಗಳನ್ನು ಅಥವಾ ಅಚ್ಚಗನ್ನಡದ ಶಬ್ದಗಳನ್ನು 'ದೇಶ್ಯ ಶಬ್ದಗಳು' ಎನ್ನುತ್ತೇವೆ.

**ಉದಾ :** ಮನೆ, ಹೊಲ, ಮರ, ಗದ್ದೆ, ಆಳು, ಗಿಡ, ತೆಂಕಣ, ಬಡಗಣ, ಮೂಡಣ, ನೇಸರು, ಕಲ್ಲು, ಕಡಿಮೆ, ಹೆಚ್ಚು, ನೀರು, ತಿನ್ನು, ಸಣ್ಣ, ದೊಡ್ಡ, ಸಾರು, ಬೆಣ್ಣೆ, ಮಜ್ಜಿಗೆ, ಹಾಲು, ಮೊಸರು, ತುಪ್ಪ, ಬಾಯಿ, ಕಿವಿ, ಮೂಗು, ಕಾಡು – ಇತ್ಯಾದಿಗಳು

**೨. ಅನ್ಯದೇಶ್ಯ ಶಬ್ದಗಳು :**

ಮರಾಠಿ, ಅರಬ್ಬಿ, ಫಾರ್ಸಿ, ಪೋರ್ಚುಗೀಸ್, ಸಂಸ್ಕೃತ, ಇಂಗ್ಲಿಷ್ ಮುಂತಾದ ಭಾಷೆಗಳಿಂದ ಕನ್ನಡಕ್ಕೆ ಬಂದಿರುವ ಶಬ್ದಗಳನ್ನು 'ಅನ್ಯದೇಶ್ಯ ಶಬ್ದಗಳು' ಎಂದು ಕರೆಯುತ್ತಾರೆ.

**ಉದಾ :**

**ಅ) ಸಂಸ್ಕೃತ ಭಾಷೆಯಿಂದ ಬಂದ ಶಬ್ದಗಳು :**

ಭೂಮಿ, ಪೃಥ್ವಿ, ರಾತ್ರಿ, ದಿವಸ, ರಾಮ, ಲಕ್ಷ್ಮಣ, ಪುರಾಣ, ಶಿರ, ಹಸ್ತ, ಪಾದ, ನೇತ್ರ, ಸ್ವರ್ಗ, ಔಷಧ, ಶತ್ರು, ಮಿತ್ರ, ರಾಶಿ, ಅರಣ್ಯ, ಯುದ್ಧ, ಲೇಖನ, ಗ್ರಂಥ, ವಾಕ್ಯ – ಇತ್ಯಾದಿಗಳು.

©KTBS Not to be republished

**ಆ) ಹಿಂದಿ ಭಾಷೆಯಿಂದ ಬಂದ ಶಬ್ದಗಳು :**

ಅರ್ಜಿ, ಕಛೇರಿ, ಕಾರ್ಖಾನೆ, ಚುನಾವಣೆ, ಕಾನೂನು, ಗುಲಾಮ, ರಸ್ತೆ, ಕಾಗದ, ಸಲಾಮು, ದರ್ಬಾರು, ಬಂದೂಕ, ಮಹಲ್, ದವಾಖಾನೆ, ಅಸಲಿ, ನಕಲಿ, ಕುರ್ಚಿ – ಇತ್ಯಾದಿಗಳು

**ಇ) ಇಂಗ್ಲಿಷ್ ಭಾಷೆಯಿಂದ ಬಂದ ಶಬ್ದಗಳು :**

ರೋಡ್, ರೈಲ್, ಬ್ಯಾಂಕ್, ಲಾಯರ್, ಪೊಲೀಸ್, ಕಾಲೇಜ್, ಸ್ಕೂಲ್, ಹೋಟೆಲ್, ಸ್ಕೂಟರ್, ಪೆಟ್ರೋಲ್, ಬುಕ್, ನೋಟ್ಸ್, ಪೇಜ್, ಕಾಫಿ, ಟೀ, ಎಲೆಕ್ಟ್ರಿಕ್, ಸರ್ಕಲ್ – ಇತ್ಯಾದಿಗಳು

**ಈ) ಪೋರ್ಚುಗೀಸ್ ಭಾಷೆಯಿಂದ ಬಂದ ಶಬ್ದಗಳು :**

ಅಲಮಾರು, ಸಾಬೂನು, ಪಾದ್ರಿ, ಮೇಜು – ಇತ್ಯಾದಿಗಳು.

## V. ಚಟುವಟಿಕೆಗಳು :

೧. ನಿಮ್ಮ ಸುತ್ತಮುತ್ತಲಿನಲ್ಲಿ ಇರುವ ಔಷಧೀಯ ಸಸ್ಯಗಳ ಗುಣಗಳನ್ನು ಪಟ್ಟಿಮಾಡಿರಿ.
೨. ನಿಮ್ಮ ಸುತ್ತಮುತ್ತಲಿನಲ್ಲಿ ಇರುವ ಸಸ್ಯಗಳ ಎಲೆಗಳನ್ನು ಸಂಗ್ರಹಿಸಿರಿ.
೩. ಔಷಧೀಯ ಸಸ್ಯಗಳನ್ನು ಬೆಳೆಸಿರಿ.

©KTBS Not to be republished

# ೩. ಜೇನು ಕುರುಬರ ತಾಯಿಯೂ ಕಾಡು ಆನೆಯ ಮಗನೂ

– ಅಬ್ದುಲ್ ರಶೀದ್

**ಪಾಠ ಪ್ರವೇಶ :** ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಂಕಣ ಬರೆಹ ವಿಶಿಷ್ಟವಾದದ್ದು. ನಮ್ಮ ಸುತ್ತಮುತ್ತಲಿನ ಸನ್ನಿವೇಶಗಳು, ಘಟನೆಗಳು, ವೈಚಾರಿಕತೆ, ವ್ಯಕ್ತಿಚಿತ್ರ ಇತ್ಯಾದಿ ವಿಷಯಗಳನ್ನು ನೈಜವಾಗಿ ಬಿಡಿ ಬಿಡಿಯಾಗಿ ವಿವರಿಸಿ, ಮೌಲ್ಯಗಳನ್ನು ಜೀವಂತವಾಗಿರಿಸುವುದು ಅಂಕಣ ಬರೆಹದ ಉದ್ದೇಶವಾಗಿರುತ್ತದೆ.

ಭಾವುಕ ಜೀವಿಗಳಾದ ಗಿರಿಜನರು ಪ್ರಕೃತಿಯ ಪ್ರಾಣಿ ಪಕ್ಷಿಗಳ ಜೊತೆ ವಿಶಿಷ್ಟ ಸಂಬಂಧವನ್ನು ಬೆಸೆದುಕೊಂಡಿರುತ್ತಾರೆ. ತಮ್ಮ ಮಕ್ಕಳನ್ನು ಲಾಲನೆ ಪಾಲನೆ ಮಾಡಿದಂತೆಯೇ ಕಾಡು ಪ್ರಾಣಿಗಳನ್ನೂ ಪೋಷಿಸುತ್ತಾರೆ. ಪ್ರಾಣಿಗಳ ನಲಿವು ತಮ್ಮ ನಲಿವು ಎಂದು ಭಾವಿಸುತ್ತಾರೆ. ಅವುಗಳಿಗೆ ನೋವು ಉಂಟಾದರೆ ತಮಗೇ ನೋವಾಯಿತೆಂದು ಚಡಪಡಿಸುತ್ತಾರೆ. ಕಾಡು ಜನರು ಪ್ರಾಣಿಗಳನ್ನು ರಕ್ಷಿಸೆಂದು ದೇವರಲ್ಲಿ ಪ್ರಾರ್ಥಿಸುತ್ತಾರೆ. ಪ್ರಸ್ತುತ ಪಾಠದಲ್ಲಿ ಜೇನು ಕುರುಬರ ತಾಯಿಯೊಬ್ಬಳು ಅನಾಥವಾಗಿದ್ದ ಆನೆಮರಿಯನ್ನು ತನ್ನ ಮಗನೆಂದು ಭಾವಿಸಿ ಪೋಷಿಸುವ ತಾಯ್ತನವನ್ನು ಕಾಣಬಹುದು.

©KTBS Not to be republished

ಈ ತಾಯಿಯ ಹೆಸರು ಗೀತಾ. ಈಕೆ ಜೇನು ಕುರುಬರ ಹೆಂಗಸು. ಕಷ್ಟಗಳನ್ನು ಉಂಡೂ ಉಂಡೂ ಬಹುಶಃ ಈಕೆಯ ಮುಖ ಗಂಡಸಿನಂತೆ ಗಡುಸಾಗಿ ಹೋಗಿದೆ. ಮಗನ ಹೆಸರು ಶಿವ. ತಮಾಷೆಯೆಂದರೆ ಈ ಮಗ ಮನುಷ್ಯ ಪುತ್ರನಲ್ಲ. ಮನುಷ್ಯರ ಗುಂಡೇಟಿನಿಂದ ತೀರಿಹೋದ ಹೆಣ್ಣಾನೆಯೊಂದರ ಗಂಡು ಮಗು. ತಾಯಿ ತೀರಿಹೋದಾಗ ಈತನಿಗೆ ಇನ್ನೂ ಎರಡು ತಿಂಗಳೂ ತುಂಬಿರಲಿಲ್ಲ. ಈಗ ಕಳೆದ ಒಂದೂವರೆ ತಿಂಗಳಿಂದ ಜೇನು ಕುರುಬರ ಗೀತಾ ಈ ಆನೆ ಮಗನನ್ನು ಸಾಕುತ್ತಿದ್ದಾಳೆ. ಆಕೆ ತನ್ನ ಈ ತಾಯ್ತನವನ್ನು ಎಷ್ಟು ಗಂಭೀರವೂ ಸಹಜವಾಗಿಯೂ ತೆಗೆದುಕೊಂಡಿದ್ದಾಳೆಂದರೆ ಆಕೆಯ ಕಣ್ಣಿಗೆ ರಾತ್ರಿಯಿಡೀ ನಿದ್ದೆ ಹತ್ತುವುದಿಲ್ಲ. ಆನೆ ಮಗನಿಗೆ ಹಸುವಿನ ಹಾಲು ಕಾಯಿಸಿ ಕುಡಿಸಲಿಕ್ಕೆ ಎರಡು ಸಲ ಏಳುತ್ತಾಳೆ. ಒಂದು ಸಲ ಅದರ ಕಕ್ಕ ಬಳಿದು ತೆಗೆಯಲಿಕ್ಕೆ ಏಳುತ್ತಾಳೆ. ಹಗಲೂ ಅಷ್ಟೇ. ಕಣ್ಣುರೆಪ್ಪೆ ಮುಚ್ಚದೆ ಶಿವನ ಚಲನವಲನಗಳನ್ನು ಕಾಯುತ್ತಿರುತ್ತಾಳೆ. ನಡೆಯುವಾಗ ಅದು ಮುಗ್ಗರಿಸಿದರೆ ಇವಳ ಕರುಳು ದಸಕ್ಕೆನ್ನುತ್ತದೆ. ಅದು ಧೂಳಲ್ಲಿ ಆಟವಾಡಿ ಸೊಂಡಿಲು ಮಣ್ಣು ಮಾಡಿಕೊಂಡರೆ ಜೇನು ಕುರುಬರ ಭಾಷೆಯಲ್ಲಿ ಅದನ್ನು ಬೈದು ತನ್ನ ಹರಿದ ಶರಟಿನ ತುದಿಯಿಂದ ಅದನ್ನು ಒರೆಸಿ ಉಜ್ಜಿ ಶುಚಿ ಮಾಡುತ್ತಾಳೆ. ಹಂಡೆಯಲ್ಲಿ ಬಿಸಿ ನೀರು ಕಾಸಿ, ದಿನಕ್ಕೆರಡು ಬಾರಿ ಸ್ನಾನ ಮಾಡಿಸುತ್ತಾಳೆ. ಹಾಲಲ್ಲಿ ರಾಗಿ ಹುಡಿ ಬೆರಸಿ, ಅಂಬಲಿ ಮಾಡಿ ಕುಡಿಸಿ ಅದೇನಾದರೂ ಕುಡಿಯಲಾಗದೆ ಉಗಿದರೆ ಕೆಟ್ಟದಾಗಿ ಬೈಯ್ಯುತ್ತಾಳೆ. ಬೈದಾದ ನಂತರ "ಅಯ್ಯೋ ನಿನ್ನ ಬೈದೆನಾ ಕೂಸೇ, ರಾಜಾ" ಅಂತ ಮಮ್ಮಲ ಮರುಗುತ್ತಾಳೆ.

ಈ ತುಂಟ ಆನೆ ಮರಿಯೂ ಅಷ್ಟೇ, ಗೀತಾಳನ್ನು ಮರುಗಿಸಲೆಂದೇ ಬೇಕಾದಷ್ಟು ಕೀಟಲೆಗಳನ್ನೂ ಮಾಡುತ್ತದೆ. ಬೇಕು ಬೇಕೆಂತಲೇ ತನ್ನ ಸೊಂಡಿಲಿನಿಂದ ಆಕೆಯ ಬಿಗಿದು ಕಟ್ಟಿದ ತುರುಬನ್ನು ಎಳೆಯುವುದು, ಬಿಸಿಲಲ್ಲಿ ಒಣಗಲು ಹಾಕಿದ ಆಕೆಯ ಹರಿದ ಬಟ್ಟೆಗಳ ಮೇಲೆ ತನ್ನ ಪಾದದ ಚಿತ್ರಗಳನ್ನು ಬಿಡಿಸುವುದು ಇತ್ಯಾದಿ ಮಾಡುತ್ತಾನೆ. ಆಗ ಆಕೆ ಸಿಟ್ಟಿನಿಂದ ಅದರ ಕಿವಿ ಹಿಂಡಿ ಬುದ್ಧಿ ಹೇಳಿ, ಅದರ ಕಿವಿ ಹಿಡಿದು ಎಳೆದುಕೊಂಡು ಆಟದ ಸೆರೆಮನೆಯಂತಹ ಬಿದಿರು ತಡಿಕೆಯ ಅಂಗಳದೊಳಕ್ಕೆ ಸೇರಿಸಿ ಬೈದುಬಿಡುತ್ತಾಳೆ. “ನಾನು ನಿನ್ನ ಅಮ್ಮ, ನೀನು ನನ್ನ ಮಾತು ಕೇಳೋಕು ಹಠ ಮಾಡಿದರೆ ಸೌದೆ ಸೋಟಿನಿಂದ ಬಾರಿಸಿಯೇ ಬಿಡುವೆ” ಎಂದು ಗದರುತ್ತಾಳೆ.

ಶಿವನೂ ಅಷ್ಟೇ, ತಾನು ಆನೆ ಮರಿಯೆಂಬುದ ಮರೆತು ವಿಧೇಯ ಮಗುವಂತೆ ಅಳಲು ತೊಡಗುತ್ತದೆ. ಆದರೆ ಅದರ ಅಳು ಪುಟ್ಟ ಆನೆಯೊಂದು ಘೀಳಿಡುವಂತೆ ಕೇಳುತ್ತದೆ. ಮೂರೂವರೆ ತಿಂಗಳ ಆನೆ ಮರಿ ಘೀಳಿಡುವ ಸದ್ದು, ಆ ಸದ್ದು ಮಾತ್ರ ಸಾಕು ನಮಗೆ ಇದೆಲ್ಲ ಸಹಜವಾಗಿಲ್ಲ ಅಂತ ಅನಿಸಲಿಕ್ಕೆ.

“ಗೀತಾ, ನೋಡು ಶಿವನ ಕಣ್ಣಲ್ಲಿ ನೀರು ಬರುತ್ತಿದೆ. ಏನಾದರೂ ಸೋಂಕು, ಗೀಂಕು ತಗುಲಿರಬೇಕು” ಅನ್ನುತ್ತೇನೆ. “ಸೋಂಕೂ ಅಲ್ಲ, ಗೀಂಕೂ ಅಲ್ಲ ಅದಕ್ಕೆ ಅದರ ತಾಯಿಯ ನೆನಪು ಆಗಿರಬೇಕು ಸಾಹೇಬರೇ” ಆಕೆ ಅನ್ನುತ್ತಾಳೆ. ಹಾಗೆ ಅನ್ನುವಾಗ ಆಕೆಯ ಕಣ್ಣಲ್ಲಿ ಒಂದು ನೋವಿನ ಸೆಳಕು ಮಿಂಚಿನಂತೆ ಮೂಡಿ ಮಾಯವಾಗುತ್ತದೆ. ಆಕೆ ಉಸ್ಸಂತ ನೆಲದಲ್ಲಿ ಮಂಡಿಯೂರಿ ಕುಳಿತುಬಿಡುತ್ತಾಳೆ. ಆಮೇಲೆ ಏನೇನೋ ಕಥೆಗಳನ್ನು ಹೇಳುತ್ತಾಳೆ. ಅದರಲ್ಲಿ ಏನೇನೋ ಕೊಂಚ ನನಗೆ ಅರ್ಥವಾಗುತ್ತದೆ. ಉಳಿದದ್ದು ಹಾಗೇ ಗಾಳಿಯಲ್ಲಿ ಹೊರಟುಹೋಗುತ್ತದೆ.



©KTBS Not to be republished

“ಗೀತಾ, ನಿನ್ನ ಯಜಮಾನ ಗಂಡಸು ಎಲ್ಲಿ? ನಿಜವಾದ ನಿನ್ನ ಇಬ್ಬರು ಗಂಡು ಮಕ್ಕಳೆಲ್ಲಿ?” ಎಂದು ಮಾತು ಬದಲಿಸಲು ನೋಡುತ್ತೇನೆ. ಗಂಡ ಸೌದೆ ತರಲು ಕಾಡಿಗೆ ಹೋದ ಅನ್ನುತ್ತಾಳೆ. ಗಂಡು ಮಕ್ಕಳು ಇಬ್ಬರು ಸರಕಾರೀ ಹಾಸ್ಟೆಲಲ್ಲಿ ಓದುತ್ತಿರುವವರು ಈಗ ರಜೆಯಲ್ಲಿ ಹಾಡಿಗೆ ಬಂದಿದ್ದಾರೆ. ಒಬ್ಬ ಕಾಡಿನೊಳಗಿನ ಕೆರೆಯಲ್ಲಿ ಮೀಯಲು ಹೋಗಿದ್ದಾನೆ. ಇನ್ನೊಬ್ಬಾತ ಮೊಬೈಲಿನ ಬ್ಯಾಟರಿ ಚಾರ್ಜ್ ಮಾಡಿಸಿಕೊಂಡು ಬರಲು ಕರೆಂಟಿರುವ ಸಾಹುಕಾರರೊಬ್ಬರ ಅಂಗಡಿಗೆ ಹೋಗಿದ್ದಾನೆ. ಒಂದು ಸಲ ಬ್ಯಾಟರಿ ಚಾರ್ಜು ಮಾಡಿಸಲು ಐದು ರೂಪಾಯಿಯಂತೆ. ಆ ಮಗ ಮೊಬೈಲಲ್ಲಿ ಆಡಿ ಆಡಿ ಅರ್ಧ ದಿನದಲ್ಲೇ ಮತ್ತೆ ಚಾರ್ಜು ಮಾಡಲು ಹೋಗುತ್ತಾನಂತೆ. “ಹಾಳಾದ ಮಕ್ಕಳು” ಎಂದು ಅವರಿಗೂ ಪ್ರೀತಿಯಲ್ಲೆ ಬೈಯ್ಯುತ್ತಾಳೆ.

ಆಕೆಯ ಗಂಡನೂ ಆನೆಯ ಮಾವುತನೇ, ಇವರಿಬ್ಬರು ಸಾಕುತ್ತಿದ್ದ ಮೊದಲ ಆನೆ ರಾಜೇಂದ್ರ, ಮೈಸೂರು ಅರಮನೆಯಲ್ಲಿ ಒಂದು ಕಾಲದಲ್ಲಿ ಅದು ಪಟ್ಟದಾನೆಯಾಗಿತ್ತು. ವಯಸ್ಸಾದಾಗ ಇವರ ಸುಪರ್ದಿಗೆ ಬಂದು ಒಂದು ದಿನ ಇವರ ಕಣ್ಣ ಮುಂದೆಯೇ ತೀರಿಹೋಯಿತು. ಆ ನಂತರ ಇವರ ಸುಪರ್ದಿಗೆ ಬಂದ ಆನೆಯ ಹೆಸರು ಲಂಬೋದರ. ಅದು ಕಾಡೊಳಗಿದ್ದ ಒಂದು ದೊಡ್ಡ ರೌಡಿ ಆನೆಯಾಗಿತ್ತು. ಪ್ಲಾಂಟರನೊಬ್ಬ ಅದರ ಒಡಲೊಳಕ್ಕೆ ಹಲವು ಕಾಡುತೂಸುಗಳನ್ನು ತೂರಿಸಿಬಿಟ್ಟಿದ್ದ. ಆಮೇಲೆ ಅದನ್ನು ಹಿಡಿದು ಪಳಗಿಸಿ ಇವರಿಬ್ಬರ ಸುಪರ್ದಿಗೆ ವಹಿಸಿದ್ದರು. ಸಾಯುವವರೆಗೆ ಹೊಟ್ಟೆಯೊಳಗಿದ್ದ ಕಾಡುತೂಸುಗಳಿಂದಾಗಿ ನರಳುತ್ತಾ ಬದುಕಿದ್ದ ಲಂಬೋದರ ಒಂದು ದಿನ ತಾನೂ ವ್ರಣದಿಂದಾಗಿ ತೀರಿಹೋಗಿತ್ತು. ಅದು ತೀರಿಹೋದಾಗ ಈ ಗೀತಾ ತಲೆಯ ಮೇಲೆ ಮಣ್ಣೆರಚಿ ಹುಚ್ಚಿಯಂತೆ ಅತ್ತಿದ್ದಳು. “ದೇವರೇ, ಈ ಕೆಟ್ಟ ಮನುಷ್ಯರಿಂದ ಆನೆಗಳನ್ನೂ ಕಾಡು ಕುರುಬರನ್ನೂ ಕಾಪಾಡು” ಎಂದು ಅಲ್ಲಿ ನೆರೆದವರಿಗೆಲ್ಲ ಹಿಡಿ ಹಿಡಿ ಶಾಪ ಹಾಕಿದ್ದಳು. “ನೀವು ಚೆನ್ನಾಗಿ ನೋಡಿಕೊಂಡಿಲ್ಲ, ಅದಕ್ಕಾಗಿ ಲಂಬೋದರ ಸತ್ತುಹೋದ” ಅಂತ ಯಾರೋ ಬೈದಿದ್ದರಂತೆ. ಅದಕ್ಕಾಗಿ ಅವಳಿಗೆ ಅವತ್ತು ದುಃಖ ಇನ್ನೂ ಉಮ್ಮಳಿಸಿತ್ತು.

ಮೊನ್ನೆ ಇದನ್ನೆಲ್ಲ ಹೇಳುವಾಗ ಅವಳಿಗೆ ಇನ್ನೊಮ್ಮೆ ದುಃಖ ಉಮ್ಮಳಿಸಿ ಬಂದು ಎಲ್ಲರಿಗೂ ಇನ್ನೊಮ್ಮೆ ಶಾಪ ಹಾಕಿದಳು. ತನ್ನ ತುರುಬನ್ನು ಎಳೆಯಲು ಬಂದ ಶಿವನ ಸೊಂಡಿಲಿಗೆ ಮುತ್ತಿಟ್ಟಳು. “ಎನ್ನ ಜೀವ ಹೋದರೂ ಸರಿಯೇ, ಈ ಶಿವನನ್ನು ಬೆಳೆಸಿ ದೊಡ್ಡ ಪಟ್ಟದಾನೆ ಮಾಡಿಯೇ ತಾನೂ ಜೀವ ಬಿಡುವುದು” ಎಂದು ಕಣ್ಣೀರು ಹಾಕಿ ಪ್ರೀತಿಯಿಂದ ನಕ್ಕಳು.

ಆಮೇಲೆ ನನಗೊಂದು ಗುಟ್ಟು ಹೇಳಿದಳು. ಅದು ಈ ಶಿವನಿಗಾಗಿ ಅವಳು ಜೇನುಕುರುಬರ ದೇವರು ಅಮ್ಮಾಳಮ್ಮನ ಬಳಿ ಹರಕೆ ಹಾಕಿಕೊಂಡಿರುವ ಗುಟ್ಟು. ಇಲ್ಲೇ ಕಾವೇರಿ ನದಿಯ ತೀರದಲ್ಲಿ ಕಾಡಿನೊಳಗಡೆ ಅಮ್ಮಾಳಮ್ಮ ದೇವತೆ ಇರುವವಳು. ಅವಳು ಒಳ್ಳೆಯವರಿಗೆ ಒಳ್ಳೆಯ ದೇವರು. ಕೆಟ್ಟವರಿಗೆ ತೀರಾ ಕೆಟ್ಟವಳು. ಅವಳ ಬಳಿ ಇವಳು ಒಬ್ಬಳೇ ಹೋಗಿ ಈ ಆನೆಮಗನನ್ನು ಬದುಕಿಸಿ ದೊಡ್ಡವನನ್ನಾಗಿ ಮಾಡಲು ಬಿಡು. ದೊಡ್ಡದೊಂದು ಹರಕೆ ತೀರಿಸುವೆನು ಅಂದಿರುವಳಂತೆ. ಆ ದೊಡ್ಡ ಹರಕೆ ಏನೆಂದು ಯಾರಿಗೂ ಹೇಳದೆ ತನ್ನೊಳಗೇ ಬಚ್ಚಿಟ್ಟುಕೊಂಡಿರುವಳು.

©KTBS Not to be republished

"ಹೇಳಬೇಡ ಪರವಾಗಿಲ್ಲ. ಶಿವ ಬದುಕಿ ದೊಡ್ಡವನಾದರೆ ಹರಕೆ ತೀರಿಸುವಾಗ ನಾನೂ ಬರುವೆ" ಎಂದು ಹೇಳಿ ಬಂದಿರುವೆ.

ಬರುವ ಮೊದಲು ಇನ್ನೊಂದು ಗುಟ್ಟನ್ನೂ ಹೇಳಿದಳು. ಅದು ಏನೆಂದರೆ ಅವಳೂ ಈ ಆನೆಮಗನೂ ಇಬ್ಬರೇ ಇರುವಾಗ ಅವಳು ಅವನನ್ನು ಕರೆಯುವ ಹೆಸರು 'ಶಿವ' ಅಲ್ಲವಂತೆ.

'ಶಿವ' ಅಂತ ಹೆಸರು ಇಟ್ಟಿರುವುದು ಫಾರೆಸ್ಟಿನ ರೇಂಜರು ಸಾಹೇಬರು. ಆದರೆ ಅಮ್ಮಾಳಮ್ಮ ದೇವರು ಬೇರೆ ಒಂದು ಹೆಸರಿನಿಂದ ಕರೆಯಲು ಹೇಳಿರುವಳು. ಅದು ನನಗೂ ಮತ್ತು ಇವನಿಗೂ ಮಾತ್ರ ಗೊತ್ತು. ಬೇರೆ ಯಾರಿಗೂ ಹೇಳಕೂಡದು ಅಂದಳು.

"ಆಯ್ತು ತಾಯೀ, ಯಾರಿಗೂ ಗೊತ್ತಾಗಬಾರದು. ನಿನ್ನ ಆನೆ ಮಗ ಬದುಕಿ ದೊಡ್ಡ ಪಟ್ಟದಾನೆಯಾದರೆ ಸಾಕು" ಎಂದು ಹೇಳಿ ಬಂದಿರುವೆ.

* * * *

©KTBS Not to be republished

## ಕೃತಿಕಾರರ ಪರಿಚಯ :



**ಅಬ್ದುಲ್ ರಶೀದ್** ಕವಿ, ಕಥೆಗಾರ, ಅಂಕಣಕಾರ ಹಾಗೂ ಕಾದಂಬರಿಕಾರರೂ ಆಗಿದ್ದಾರೆ. ಇವರು ೧೯೬೫ ರಲ್ಲಿ ಕೊಡಗಿನ ಸುಂಟಿಕೊಪ್ಪದಲ್ಲಿ ಜನಿಸಿದರು. ಅಬ್ದುಲ್ ರಶೀದ್‌ರವರು ಮಂಗಳೂರು, ಮೇಘಾಲಯದ ಶಿಲ್ಲಾಂಗ್, ಗುಲ್ಬರ್ಗಾ, ಮೈಸೂರು ಆಕಾಶವಾಣಿ ಕೇಂದ್ರದಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಈಗ ಮಡಿಕೇರಿ ಆಕಾಶವಾಣಿ ಕೇಂದ್ರದಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕನ್ನಡದ ಜನಪ್ರಿಯ ಅಂತರ್ಜಾಲ ತಾಣ 'ಕೆಂಡಸಂಪಿಗೆ'ಯ ಗೌರವ ಸಂಪಾದಕರಾಗಿದ್ದಾರೆ.

ಇವರು **'ಹಾಲು ಕುಡಿದ ಹುಡುಗ'**, **'ಪ್ರಾಣಪಕ್ಷಿ'**, **'ಈ ತನಕದ ಕಥೆಗಳು'** (ಕಥಾ ಸಂಕಲನಗಳು) **'ನನ್ನ ಪಾಡಿಗೆ ನಾನು'** (ಕವನ ಸಂಕಲನ), **'ಮಾತಿಗೂ ಆಚೆ'**, **'ಅಲೆಮಾರಿಯ ದಿನಚರಿ'**, **'ಮೈಸೂರ್ ಪೋಸ್ಟ್'** (ಅಂಕಣ ಬರೆಹಗಳು), **'ಹೂವಿನಕೊಲ್ಲಿ'** (ಕಾದಂಬರಿ) ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವದ ಯುವ ಲೇಖಕ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಲಂಕೇಶ್ ಪ್ರಶಸ್ತಿ ದೊರೆತಿವೆ.

ಪ್ರಸ್ತುತ ಪಠ್ಯ ಭಾಗವನ್ನು ಇವರ **'ಕಾಲುಚಕ್ರ'** ಕೃತಿಯಿಂದ ಆರಿಸಿದೆ.

## ಟಿಪ್ಪಣಿ :

**ಜೇನುಕುರುಬರು :** 'ಜೇನುಕುರುಬ' ಎಂದರೆ ಜೇನನ್ನು ಹುಡುಕುವ ಒಂದು ಜನಾಂಗ. ಇವರು ಕರ್ನಾಟಕದಲ್ಲಿ ನೆಲೆಗೊಂಡ ಪೂರ್ವಿಕರಲ್ಲಿ ಮೊದಲಿಗರಾಗಿದ್ದಾರೆ. ಇವರು ಕಾಡನ್ನೇ ನಂಬಿ, ಕಾಡಲ್ಲಿಯೇ ಬದುಕುತ್ತಿರುವವರು. ಇವರಿಗೆ ಕಾಡನ್ನು ಬಿಟ್ಟು ನಾಡಿಗೆ ಬರಬೇಕು ಎಂಬ ಯೋಚನೆಯೇ ಇಲ್ಲ. ಮಲೈಮಾದೇಶ್ವರ ಇವರ ಕುಲದೇವರು. ಇಂದಿನ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ಕಾಡುಗಳಲ್ಲಿ ವಾಸಿಸುತ್ತಿದ್ದಾರೆ. ಜೇನು ಕುರುಬರು ಆನೆಗಳನ್ನು ಪಳಗಿಸುವುದರಲ್ಲಿ ನಿಪುಣರು. ತುಂಬ ಜನ ಜೇನುಕುರುಬರು ಮಾವುತರಾಗಿ ದಸರಾ ಹಬ್ಬದಲ್ಲಿ ಪಾಲ್ಗೊಳ್ಳುತ್ತಾರೆ ಹಾಗೂ ಕರ್ನಾಟಕ ಅರಣ್ಯ ಇಲಾಖೆಯಲ್ಲಿ ಕಾಡಿನ ರಕ್ಷಣೆಗೆ ಕೆಲಸಕ್ಕೆ ಸೇರಿದ್ದಾರೆ.

©KTBS Not to be republished

## ಅಭ್ಯಾಸ

### I. ಪದಗಳ ಅರ್ಥ :

**ಉಮ್ಮಳಿಸು** – ದುಃಖ ಹೆಚ್ಚಾಗು; ಚಿಮ್ಮು.
**ಗಡಸು** – ಒರಟು
**ಕೊಂಚ** – ಸ್ವಲ್ಪ; ತುಸು; ಅಲ್ಪ.
**ತಾಯ್ತನ** – ತಾಯಿಯ ಪ್ರೀತಿ: ಮಾತೃತ್ವ.
**ತುರುಬು** – ತಲೆ ಕೂದಲಿನ ಗಂಟು; ಮುಡಿ.
**ಪುತ್ರ** – ಮಗ; ಸುತ; ತನಯ; ಕುಮಾರ.
**ಮರುಗಿಸು** – ಕನಿಕರಪಡು; ಮನಸ್ಸು ಕರಗು.
**ವ್ರಣ** – ಹುಣ್ಣು; ಗಾಯ.
**ಸೆಳಕು** – ಎಳೆ; ಜಗ್ಗು.
**ಹಂಡೆ** – ನೀರು ತುಂಬುವ ದೊಡ್ಡ ಪಾತ್ರೆ.
**ಹಾಡಿಗೆ** – ಹಳ್ಳಿಗೆ; ಗ್ರಾಮಕ್ಕೆ.
**ಒಡಲು** – ದೇಹ; ಶರೀರ.
**ಕಕ್ಕ** – ಆನೆಯ ಲದ್ದಿ; ಕಕ್ಕಸು; ಪಾಯಖಾನೆ.
**ಘೀಳಿಡು** – ಆನೆಯ ಕೂಗು
**ತೀರಿಹೋಗು** –ಸಾಯುವುದು; ಮರಣ ಹೊಂದು.
**ಪಟ್ಟದಾನೆ** –ರಾಜನ ಸಿಂಹಾಸನ ಹೊರುವ ಆನೆ.
**ಪ್ಲಾಂಟರ್** – ತೋಟದ ಒಡೆಯ
**ಮಾವುತ** – ಆನೆ ನಡೆಸುವವ; ಆನೆ ಪಳಗಿಸುವವ.
**ಸುಪರ್ದಿ** – ಜವಾಬ್ದಾರಿ
**ಸೋಂಕು** – ಅಂಟು ರೋಗ
**ಹರಕೆ** – ಬೇಡಿಕೊಳ್ಳುವಿಕೆ; ಮುಡುಪು; ಸಂಕಲ್ಪ.
**ಹುಡಿ** – ಮಣ್ಣು

### II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳವನ್ನು ನೀಡಿರುವ ನಾಲ್ಕು ಆಯ್ಕೆಯ ಉತ್ತರಗಳಿಂದ ಸರಿಯಾದುದನ್ನು ಆಯ್ದು ತುಂಬಿರಿ.**

೧. ಜೇನುಕುರುಬರ ತಾಯಿ ಗೀತಾ ಸಾಕಿದ ಆನೆ ಮಗನ ಹೆಸರು ________
ಅ) ಲಂಬೋದರ   ಆ) ರಾಜೇಂದ್ರ   ಇ) ಶಿವ   ಈ) ಹಾಡಿ

೨. ಜೇನುಕುರುಬರ ಗೀತಾ ತನ್ನ ಮಕ್ಕಳನ್ನು ಪ್ರೀತಿಯಿಂದ ______ ಎಂದು ಬೈಯುತ್ತಿದ್ದಳು.
ಅ) ಜಾಣಮಕ್ಕಳು ಆ) ಹಾಳಾದಮಕ್ಕಳು ಇ) ಮುದ್ದಿನಮಕ್ಕಳು ಈ) ಕಳ್ಳಮಕ್ಕಳು

೩. ಗೀತಾಳ ಗಂಡನು ಮಾಡುತ್ತಿದ್ದ ಕಸುಬು ______
ಅ) ಮಾವುತ ಆ) ಕೂಲಿ ಇ) ರೈತ ಈ) ದನಗಾಯಿ

೪. ಗೀತಾ ಮತ್ತು ಆಕೆಯ ಗಂಡ ಸಾಕುತ್ತಿದ್ದ ಮೊದಲ ಆನೆಯ ಹೆಸರು ______
ಅ) ಲಂಬೋದರ ಆ) ರಾಜೇಂದ್ರ ಇ) ಶಿವ ಈ) ಶಂಕರ

೫. ಜೇನುಕುರುಬರ ದೇವರ ಹೆಸರು ______
ಅ) ಮಾರಮ್ಮ ಆ) ಸೀತಾಳಮ್ಮ ಇ) ಅಮ್ಮಾಳಮ್ಮ ಈ) ದೇವೀರಮ್ಮ

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಜೇನು ಕುರುಬರ ಗೀತಾ ಸಾಕುತ್ತಿದ್ದ ಗಂಡು ಆನೆಯ ತಾಯಿ ತೀರಿದ್ದು ಏಕೆ?
೨. ಜೇನು ಕುರುಬರ ತಾಯಿ ಆನೆಗೆ ಬೈದಾಗ ಯಾವ ರೀತಿ ಮರುಗುತ್ತಿದ್ದಳು?
೩. ಗೀತಾ ಮರಿ ಆನೆಗೆ ಯಾವ ರೀತಿ ಗದರಿ ಬುದ್ಧಿ ಹೇಳುತ್ತಿದ್ದಳು?
೪. ಆನೆ ಕಣ್ಣಲ್ಲಿ ನೀರು ಬರುತ್ತಿರುವುದಕ್ಕೆ ಗೀತಾ ನೀಡಿದ ಪ್ರತಿಕ್ರಿಯೆ ಏನು?
೫. ಜೇನು ಕುರುಬರ ಗೀತಾಳ ಮಗನೊಬ್ಬ ಸಾಹುಕಾರರ ಅಂಗಡಿಗೆ ಏಕೆ ಹೋಗುತ್ತಿದ್ದನು?
೬. ಆನೆ ಮರಿಗೆ 'ಶಿವ' ಎಂದು ಹೆಸರಿಟ್ಟವರು ಯಾರು?
೭. ಆನೆ ಶಿವನ ಬಗ್ಗೆ ಗೀತಾ ಯಾವ ಆಸೆ ಇಟ್ಟುಕೊಂಡಿದ್ದಾಳೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಗೀತಾ ಅಮ್ಮಾಳಮ್ಮನಲ್ಲಿ ಆನೆ ಶಿವನ ಬಗ್ಗೆ ಏನೆಂದು ಬೇಡಿಕೊಂಡಿದ್ದಳು?
೨. ಆನೆ ಲಂಬೋದರ ತೀರಿಕೊಂಡದ್ದು ಹೇಗೆ?
೩. ಆನೆ ಲಂಬೋದರ ತೀರಿದಾಗ ಗೀತಾ ಯಾವ ರೀತಿ ದುಃಖಿಸಿದಳು?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಜೇನು ಕುರುಬರ ತಾಯಿ ಆನೆ ಮಗನನ್ನು ಹೇಗೆ ಸಾಕುತ್ತಿದ್ದಳು?
೨. ಮರಿ ಆನೆ ಗೀತಾಳಿಗೆ ಮಾಡುತ್ತಿದ್ದ ಕೀಟಲೆಗಳಾವುವು?

©KTBS Not to be republished

ಉ) ಸಂದರ್ಭದೊಡನೆ ವಿವರಿಸಿರಿ.

೧. ಅದು ಮುಗ್ಗರಿಸಿದರೆ ಇವಳ ಕರುಳು ದಸಕ್ಕೆನ್ನುತ್ತದೆ.

೨. "ಗೀತಾ ನೋಡು ಶಿವನ ಕಣ್ಣಲ್ಲಿ ನೀರು ಬರುತ್ತಿದೆ"

೩. "ದೇವರೇ, ಈ ಕೆಟ್ಟ ಮನುಷ್ಯರಿಂದ ಆನೆಗಳನ್ನೂ ಕಾಡುಕುರುಬರನ್ನೂ ಕಾಪಾಡು."

೪. "ಈ ಶಿವನನ್ನು ಬೆಳೆಸಿ ದೊಡ್ಡ ಪಟ್ಟದಾನೆ ಮಾಡಿಯೇ ತಾನು ಜೀವ ಬಿಡುವುದು."

# III. ಭಾಷಾಭ್ಯಾಸ :

ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಆನೆ, ಪುತ್ರ, ಕಾಡು, ತಾಯಿ.

ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.

ಸುಪರ್ದಿ, ಉಮ್ಮಳಿಸು, ಹರಕೆ, ತಾಯ್ತನ.

ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.

ಕಷ್ಟ, ಕೆಟ್ಟವ, ದುಃಖ, ಸಹಜ, ಹಗಲು, ವಿಧೇಯ.

ಈ) ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರು ತಿಳಿಸಿರಿ.

ಹೆಣ್ಣಾನೆ, ಗುಂಡೇಟು, ಇನ್ನೊಬ್ಬ, ಮೀಯಲು, ರಾಜೇಂದ್ರ, ಪಟ್ಟದಾನೆ, ಮಣ್ಣೆರಚಿ, ನನಗೊಂದು.

ಉ) ಕೆಳಗಿನ ಅನ್ಯದೇಶೀಯ ಪದಗಳಿಗೆ ಕನ್ನಡದ ಸಮಾನಾಂತರ ಪದಗಳನ್ನು ಬರೆಯಿರಿ.

ಶರಟು, ಸಾಹೇಬ, ಹಾಸ್ಟೆಲ್, ಪ್ಲಾಂಟರ್, ಕರೆಂಟ್, ಫಾರೆಸ್ಟ್.

ಊ) ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪಗಳನ್ನು ಬರೆಯಿರಿ.

ಶುಚಿ, ಮನುಷ್ಯ, ಸ್ನಾನ, ಸೌದೆ.

ಋ) ಕೆಳಗೆ ನೀಡಿರುವ ಪದಗಳಲ್ಲಿರುವ ದ್ವಿರುಕ್ತಿ ಹಾಗೂ ಜೋಡುನುಡಿಗಳನ್ನು ವಿಂಗಡಿಸಿ ಬರೆಯಿರಿ.

ಉಂಡೂ ಉಂಡೂ, ಸೋಂಕು ಗೀಂಕು, ಹಿಡಿ ಹಿಡಿ, ಆಡಿ ಆಡಿ.

©KTBS Not to be republished

# IV. ಸೈದ್ಧಾಂತಿಕ ವ್ಯಾಕರಣ :

## ನಾಮಪದ

(ನಾಮಪದ–ನಾಮಪ್ರಕೃತಿ–ನಾಮ ವಿಭಕ್ತಿ ಪ್ರತ್ಯಯ)

ಒಂದು ವಸ್ತು, ಒಬ್ಬ ವ್ಯಕ್ತಿ, ಒಂದು ಸ್ಥಳದ ಹೆಸರಾಗಿರಬಹುದು ಅಥವಾ ಒಂದು ಗುಂಪನ್ನು ಸೂಚಿಸುವ ಪದವಾಗಿರಬಹುದು ಅಥವಾ ಗುಣ, ಸ್ವಭಾವ, ಸಂಖ್ಯೆ, ಸ್ಥಾನ, ಅಳತೆ, ತೂಕ ಇತ್ಯಾದಿಗಳನ್ನು ಸೂಚಿಸುವ ಪದಗಳಾಗಿರಬಹುದು. ಅವುಗಳನ್ನು ನಾಮಪದಗಳೆಂದು ಕರೆಯುತ್ತೇವೆ.

**ನಾಮಪದದ ವಿಧಗಳು :**

೧. **ವಸ್ತುವಾಚಕ ಅಥವಾ ನಾಮವಾಚಕ** : ಯಾವುದೇ ವಸ್ತು, ವ್ಯಕ್ತಿ, ಪ್ರಾಣಿ ಹಾಗೂ ಸ್ಥಳಗಳಿಗೆ ಇರುವ ಹೆಸರುಗಳನ್ನು ವಸ್ತುವಾಚಕಗಳೆನ್ನುವರು. ಇವುಗಳಲ್ಲಿ ಮೂರು ವಿಧ. ಅವುಗಳೆಂದರೆ...

ಅ) **ರೂಢನಾಮ** : ಅನಾದಿಕಾಲದಿಂದ ರೂಢಿಯಾಗಿ ಬಂದಿರುವ ಸಾಮಾನ್ಯ ಹೆಸರುಗಳನ್ನು 'ರೂಢನಾಮ' ಎಂದು ಕರೆಯುತ್ತಾರೆ.
ಉದಾ : ಹೆಂಗಸು, ಗಂಡಸು, ಮಕ್ಕಳು, ಜನರು, ನದಿ, ಬೆಟ್ಟ – ಇತ್ಯಾದಿ.

ಆ) **ಅಂಕಿತನಾಮ** : ವ್ಯವಹಾರದ ಉಪಯೋಗಕ್ಕಾಗಿ ಇಟ್ಟುಕೊಂಡಿರುವ ಹೆಸರುಗಳನ್ನು 'ಅಂಕಿತನಾಮ' ಎಂದು ಕರೆಯುತ್ತಾರೆ.
ಉದಾ : ಗಣೇಶ, ಗಂಗಾ, ರಾಮ, ರಹೀಮ, ಧಾರವಾಡ – ಇತ್ಯಾದಿ.

ಇ) **ಅನ್ವರ್ಥನಾಮ** : ವಸ್ತುವಿನ ರೂಪ ಹಾಗೂ ವ್ಯಕ್ತಿಯ ಗುಣಲಕ್ಷಣಗಳನ್ನಾಧರಿಸಿ ಅರ್ಥಕ್ಕೆ ಅನುಸಾರ ನೀಡುವ ಹೆಸರುಗಳಿಗೆ 'ಅನ್ವರ್ಥನಾಮ' ಎಂದು ಕರೆಯುತ್ತಾರೆ.
ಉದಾ : ಜಾಣ, ಪಂಡಿತ, ಕುರುಡ, ಕಿವುಡ, ದಡ್ಡ, ವಿಜ್ಞಾನಿ – ಇತ್ಯಾದಿ.

೨. **ಗುಣವಾಚಕ** : ವಸ್ತು ಅಥವಾ ವ್ಯಕ್ತಿಗಳ ಗುಣ, ರೀತಿ ಸ್ವಭಾವಗಳನ್ನು ತಿಳಿಸುವ ವಿಶೇಷಣಗಳಿಗೆ 'ಗುಣವಾಚಕ' ಎನ್ನುವರು. ವಿಶೇಷಣಗಳನ್ನು ಯಾವುದಕ್ಕೆ ಹೇಳಲಾಗುತ್ತದೋ ಅಂಥ ಶಬ್ದಗಳನ್ನು ವಿಶೇಷ್ಯಗಳು ಎನ್ನುತ್ತಾರೆ.

| ಉದಾ : | **ವಿಶೇಷಣ** | **ವಿಶೇಷ್ಯ** |
|---|---|---|
| | ಸಿಹಿ | ಹಣ್ಣು |
| | ದೊಡ್ಡ | ನದಿ |
| | ಒಳ್ಳೆಯ | ಹುಡುಗಿ |

©KTBS Not to be republished

**೩. ಸಂಖ್ಯಾವಾಚಕ :** ಸಂಖ್ಯೆಯನ್ನು ಹೇಳುವ ಶಬ್ದಗಳೆಲ್ಲ ಸಂಖ್ಯಾ ವಾಚಕಗಳು.

ಉದಾ : ಒಂದು, ಎರಡು, ಮೂರು, ಹತ್ತು, ಸಾವಿರ, ಲಕ್ಷ, ಕೋಟಿ – ಇತ್ಯಾದಿ.

**೪. ಸಂಖ್ಯೇಯ ವಾಚಕ :** ಸಂಖ್ಯೆಯಿಂದ ಕೂಡಿದ ವಸ್ತುಗಳನ್ನು ಹೇಳುವ ಶಬ್ದಗಳೆಲ್ಲಾ ಸಂಖ್ಯೇಯ ವಾಚಕಗಳು ಎನ್ನುತ್ತಾರೆ. ಕೆಳಗಿನ ಉದಾಹರಣೆಯಲ್ಲಿ ಸಂಖ್ಯಾವಾಚಕ ಮತ್ತು ಸಂಖ್ಯೇಯ ವಾಚಕಗಳಿಗಿರುವ ವ್ಯತ್ಯಾಸವನ್ನು ತಿಳಿಯಿರಿ.

| ಉದಾ : | **ಸಂಖ್ಯಾವಾಚಕ** | **ಸಂಖ್ಯೇಯ ವಾಚಕ** |
|---|---|---|
| | ಎರಡು | ಇಬ್ಬರು, ಎರಡನೆಯ. |
| | ಮೂರು | ಮೂವರು, ಮೂರನೆಯ, ಮೂರರಿಂದ. |
| | ಐದು | ಐವರು, ಐದನೆಯ. |

**೫. ಭಾವನಾಮ :** ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳನ್ನು 'ಭಾವನಾಮ' ಎನ್ನುತ್ತಾರೆ. ಭಾವ ಎಂದರೆ ಇರುವಿಕೆ, ಸ್ಥಿತಿ ಎಂದು ಅರ್ಥೈಸಬಹುದು.

ಉದಾ : ಬಿಳಿಯದರ ಭಾವ – ಬಿಳುಪು

ಆಡುವುದರ ಭಾವ – ಆಟ

**೬. ಪರಿಮಾಣ ವಾಚಕ :** ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ, ಗಾತ್ರ ಇತ್ಯಾದಿಗಳನ್ನು ಹೇಳುವ ಶಬ್ದಗಳನ್ನು 'ಪರಿಮಾಣ ವಾಚಕ' ಎನ್ನುತ್ತಾರೆ.

ಉದಾ : ಪರಿಮಾಣ – ಹಲವು, ಕೆಲವು. (ಹಲವು ನದಿಗಳು, ಕೆಲವು ಹಣ್ಣುಗಳು)

ಗಾತ್ರ – ಅಷ್ಟು, ಇಷ್ಟು (ಗುಡ್ಡದಷ್ಟು, ಆನೆಯಷ್ಟು)

ಅಳತೆ – ಅಷ್ಟು, ಇಷ್ಟು (ಅಷ್ಟು ದೂರ, ಇಷ್ಟು ಪುಸ್ತಕಗಳು) – ಇತ್ಯಾದಿ.

**೭. ಪ್ರಕಾರ ವಾಚಕ :** ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದಗಳನ್ನು 'ಪ್ರಕಾರ ವಾಚಕ' ಎನ್ನುವರು. ಇವು ಒಂದು ಬಗೆಯ ಗುಣವಾಚಕಗಳೇ ಆಗಿವೆ.

ಉದಾ : ಅಂಥ, ಅಂಥದು, ಅಂತಹುದು, ಇಂಥ, ಇಂಥದು, ಇಂತಹುದು, ಎಂತಹ – ಇತ್ಯಾದಿ.

**೮. ದಿಗ್ವಾಚಕಗಳು :** ದಿಕ್ಕುಗಳ ಹೆಸರನ್ನು ಸೂಚಿಸುವ ಶಬ್ದಗಳನ್ನು 'ದಿಗ್ವಾಚಕ' ಎನ್ನುವರು.

ಉದಾ : ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ, ಈಶಾನ್ಯ, ಆಗ್ನೇಯ, ವಾಯವ್ಯ, ನೈರುತ್ಯ – ಇತ್ಯಾದಿ.

**೯. ಸರ್ವನಾಮ :** ನಾಮಪದಗಳ ಬದಲಾಗಿ ಬಳಸುವ ಪದಗಳಿಗೆ ಸರ್ವನಾಮಗಳು ಎನ್ನುವರು.

ಉದಾ : ಅವನು, ಅವಳು, ಅದು, ಇದು, ಅವರು, ಇವರು, ಇವುಗಳಿಂದ – ಇತ್ಯಾದಿ.

©KTBS Not to be republished

ಸರ್ವನಾಮಗಳನ್ನು 'ಪುರುಷಾರ್ಥಕ ಸರ್ವನಾಮ', 'ಆತ್ಮಾರ್ಥಕ ಸರ್ವನಾಮ', 'ಪ್ರಶ್ನಾರ್ಥಕ ಸರ್ವನಾಮ' ಎಂದು ಮೂರು ಭಾಗಗಳಾಗಿ ವಿಂಗಡಿಸಬಹುದು.

೧. **ಪುರುಷಾರ್ಥಕ ಸರ್ವನಾಮ** : ಪುರುಷಾರ್ಥಕ ಸರ್ವನಾಮಗಳಲ್ಲಿ ಮೂರು ವಿಧ.

ಅ. ಉತ್ತಮ ಪುರುಷ : ಮಾತನಾಡುವ ವ್ಯಕ್ತಿ ತನ್ನನ್ನು ನಿರ್ದೇಶಿಸಿಕೊಳ್ಳುವ ಸರ್ವನಾಮಗಳನ್ನು 'ಉತ್ತಮ ಪುರುಷ' ಎನ್ನಲಾಗುತ್ತದೆ.
ಉದಾ : ನಾನು, ನಾವು.

ಆ. ಮಧ್ಯಮ ಪುರುಷ : ಮಾತನಾಡುವವನು ತನ್ನ ಮುಂದಿರುವ ವ್ಯಕ್ತಿಯನ್ನು ನಿರ್ದೇಶಿಸುವ ಸರ್ವನಾಮಗಳನ್ನು 'ಮಧ್ಯಮ ಪುರುಷ' ಎನ್ನಲಾಗುತ್ತದೆ.
ಉದಾ : ನೀನು, ನೀವು.

ಇ. ಪ್ರಥಮ ಪುರುಷ : ಮಾತನಾಡುವವನಿಂದ ದೂರವಿರುವ ವ್ಯಕ್ತಿ ಇಲ್ಲವೇ ವಸ್ತುವನ್ನು ನಿರ್ದೇಶಿಸುವ ಸರ್ವನಾಮಗಳನ್ನು 'ಪ್ರಥಮ ಪುರುಷ' ಎನ್ನಲಾಗುತ್ತದೆ
ಉದಾ : ಅವರು, ಅವನು, ಅವಳು, ಅದು, ಅವು, ಇದು, ಇವು.

೨. **ಆತ್ಮಾರ್ಥಕ ಸರ್ವನಾಮ** : ಮಾತನಾಡುವವನು ತನ್ನನ್ನು ಹಾಗೂ ಇತರರನ್ನು ಗೌರವ ಸೂಚಕವಾಗಿ ಆತ್ಮಪ್ರಶಂಸೆಯಿಂದ ಬಳಸುವ ಸರ್ವನಾಮಗಳನ್ನು 'ಆತ್ಮಾರ್ಥಕ ಸರ್ವನಾಮ' ಎನ್ನುತ್ತಾರೆ. ಇವು ಸಾಮಾನ್ಯವಾಗಿ ಪ್ರಥಮ ಹಾಗೂ ಮಧ್ಯಮ ಪುರುಷದ ಅರ್ಥವನ್ನೇ ನೀಡುತ್ತವೆ.
ಉದಾ : ತಾನು, ತಾವು, ತನ್ನ, ತಮ್ಮ.

೩. **ಪ್ರಶ್ನಾರ್ಥಕ ಸರ್ವನಾಮ** : ಪ್ರಶ್ನೆಯಿಂದ ಕೂಡಿದ ಎಲ್ಲ ಸರ್ವನಾಮಗಳನ್ನು ಪ್ರಶ್ನಾರ್ಥಕ ಸರ್ವನಾಮ ಎನ್ನಲಾಗುತ್ತದೆ.

ಉದಾ : ಯಾವುವು? ಯಾವುದು? ಯಾರು?
ಏತರದು? ಆವುದು?

## V. ಚಟುವಟಿಕೆಗಳು :

೧. 'ತಾಯ್ತನ' ವಿಷಯದ ಮೇಲೆ ಲೇಖನ ಬರೆದು ತರಗತಿಯಲ್ಲಿ ಓದಿರಿ.
೨. ಕಾಡು ಜನರ ಜೀವನ ಹಾಗೂ ಪ್ರಾಣಿಗಳೊಂದಿಗೆ ಅವರ ಒಡನಾಟವನ್ನು ಕೇಳಿ ತಿಳಿಯಿರಿ.
೩. ಪತ್ರಿಕೆಗಳಲ್ಲಿ ಬರುವ ಅಂಕಣ ಬರೆಹಗಳನ್ನು ಓದಿರಿ ಹಾಗೂ ಸಂಗ್ರಹಿಸಿರಿ.

©KTBS Not to be republished

# ೪. ಬಸ್ಸು ಪ್ರಯಾಣದ ಸುಖ ದುಃಖಗಳು

– ವೀರೇಂದ್ರ ಸಿಂಪಿ

**ಪಾಠ ಪ್ರವೇಶ :** ಕನ್ನಡ ಗದ್ಯ ಸಾಹಿತ್ಯ ಪ್ರಕಾರಗಳಲ್ಲಿ 'ಲಲಿತ ಪ್ರಬಂಧ' ಅತ್ಯಂತ ಪ್ರಮುಖವಾದುದು. ಇದರ ಸ್ವರೂಪ ಹಾಗೂ ಲಕ್ಷಣಗಳು ಸ್ವಲ್ಪಮಟ್ಟಿಗೆ ಭಿನ್ನವಾದವು. ಬದುಕಿನ ವಿವಿಧ ಆಯಾಮಗಳನ್ನು ಯಥಾವತ್ತಾಗಿ ಬಿಂಬಿಸಲು ಸಾಧ್ಯತೆಗಳಿರುವ ಪ್ರಬಂಧ, ಹೊಸಗನ್ನಡದ ಜನಪ್ರಿಯ ಸಾಹಿತ್ಯ ಪ್ರಕಾರವಾಗಿದೆ. ಲಲಿತ ಪ್ರಬಂಧ ಸಂಸ್ಕೃತಿಯ ಅಭಿವ್ಯಕ್ತಿಗೆ ಪೂರಕ ಮಾಧ್ಯಮವಾಗಿದೆ. ಸಮಾಜದ ಸ್ಥಿತಿಗತಿ, ಜನರ ಬದುಕು, ಶಿಕ್ಷಣ, ವಿಜ್ಞಾನ, ಕೃಷಿ, ನಂಬಿಕೆಗಳು, ಸ್ತ್ರೀಯರ ಸ್ಥಾನಮಾನ, ಜೀವನ ಮೌಲ್ಯ ಮುಂತಾದುವನ್ನು ಮನಮುಟ್ಟುವಂತೆ ತಿಳಿಹಾಸ್ಯವನ್ನು ಬೆರೆಸಿ ಲಲಿತ ಪ್ರಬಂಧಗಳಲ್ಲಿ ಬಿತ್ತಲಾಗಿರುತ್ತದೆ.

ಪ್ರಸ್ತುತ ಪಾಠದಲ್ಲಿ ಲೇಖಕರು ಬಸ್ಸು ಪ್ರಯಾಣದ ಅನುಭವಗಳನ್ನು ರಸವತ್ತಾಗಿ ಕಟ್ಟಿಕೊಟ್ಟಿದ್ದಾರೆ. ಬರೆವಣಿಗೆಯ ಶೈಲಿ ಮತ್ತು ವಿಷಯದ ನಿರೂಪಣೆ ಓದುಗರಿಗೆ ಕಚಗುಳಿಯನ್ನಿಡುತ್ತದೆ. ಲೇಖಕರ ಅನುಭವಗಳೆಲ್ಲವೂ ಓದುಗರ ಅನುಭವಗಳೇ ಆಗಿ ಇಲ್ಲಿ ಬಿಂಬಿತವಾಗಿವೆ.

ಮನಸ್ಸು ಬಂದತ್ತ ಸ್ವೇಚ್ಛಾಚಾರಿಯಾಗಿ ಅಲೆಯುವಷ್ಟು ಸ್ಥಿತಿವಂತನೂ ನಾನಲ್ಲ. 'ಪ್ರಯಾಣಕ್ಕಾಗಿ ಪ್ರಯಾಣ' ಎನ್ನುವ ಷೋಕಿಲಾಲನೂ ನಾನಲ್ಲ. ಇಲ್ಲಿಯವರೆಗೆ ನಾನು ಸಂದರ್ಶಿಸಿದ ಸ್ಥಳಗಳಾಗಲಿ, ಸುತ್ತುವರಿದು ಅಲೆದಾಡಿದ ನಾಡುಗಳಾಗಲಿ ಕಡಿಮೆಯೆಂದೇ ಹೇಳಬೇಕು. ಪ್ರಸಿದ್ಧ ಪಟ್ಟಣಗಳೆಂದು ನಾಡಿನವರ ಬಾಯಲ್ಲೆಲ್ಲ ನಲಿಯುತ್ತಿರುವ ಸ್ಥಳಗಳು ನನ್ನ ಮಟ್ಟಿಗೆ ನಕಾಶದೊಳಗಿನ ಹೆಸರುಗಳು ಮಾತ್ರ. ಪ್ರವಾಸ ಕಥನಗಳನ್ನು ಅಷ್ಟಿಷ್ಟು ಓದಿದ ನಾನು ಆಯಾ ಊರುಗಳನ್ನು ಪ್ರತ್ಯಕ್ಷ ಕಂಡವರಿಗಿಂತ ಚೆನ್ನಾಗಿ ಬಲ್ಲೆ. ಇದು ನನ್ನ ಕೂಪಮಂಡೂಕತನವೂ ಅಲ್ಲ; ಮನೆಗೇ ಅಂಟಿಕೊಂಡು ಕೂರುವ ಜಿಗುಳೆತನವೂ ಅಲ್ಲ, ಹಾಗೆ ನೋಡಿದರೆ ಒಂದೇ ಪ್ರದೇಶವನ್ನು ಅದೆಷ್ಟೋ ಸಾರೆ ಸುತ್ತಿದ್ದೇನೆ – ಒಂದೇ ಪುಸ್ತಕವನ್ನು ಹಲವು ಸಾರೆ ಓದಿದಂತೆ. ನನ್ನ ಪ್ರವಾಸದ ಕ್ಷೇತ್ರ ಸಣ್ಣದಿರಬಹುದು. ಆದರೆ ಅದರಲ್ಲಿ ನಾನು ಕಂಡ ರಸದ ಒರತೆ ಮಾತ್ರ ದೊಡ್ಡದು. ಜೀವನದಲ್ಲಿ ಕಾಣಸಿಗದ ಸ್ವಾರಸ್ಯ ನನಗೆ ಪ್ರವಾಸದಲ್ಲಿ ದೊರಕಿದೆ. ಪ್ರವಾಸದಲ್ಲಿ ನಾನು ಅತ್ತಿದ್ದೇನೆ–ನಕ್ಕಿದ್ದೇನೆ. ನಗೆಪಾಟಲು ವ್ಯಕ್ತಿಯೂ ಆಗಿದ್ದೇನೆ. ಹೀರೋ ಆಗಿದ್ದಂತೆ ಝೀರೋ ಕೂಡ ಆದ ಪ್ರಸಂಗಗಳೂ ಇಲ್ಲದಿಲ್ಲ. ಪರೀಕ್ಷೆಗಾಗಿ ಪರೀಕ್ಷಾ ವಿದ್ಯಾರ್ಥಿಯು ಪಟ್ಟ ದುಗುಡವನ್ನೇ ಪ್ರತಿ ಪ್ರವಾಸವೂ ನನಗಾಗಿ ಹೊತ್ತು ತಂದಿದೆ. ಪ್ರವಾಸದ ಮುನ್ನಾ ದಿನವೂ ನನಗೆ ನಿದ್ರೆಯಿಲ್ಲ – ನಿಶ್ಚಿತ ಸ್ಥಳ ಮುಟ್ಟಿದ ದಿನವೂ ನಿದ್ರೆಯಿಲ್ಲ. ಬಾಳು ಬರಿದಾಗಿ ಕಂಡಾಗ ಏನಾದರೂ ನೆಪಹೂಡಿ ಪ್ರವಾಸ ಕೈಕೊಳ್ಳುತ್ತೇನೆ. ಜೀವನದಲ್ಲಿ ಇಲ್ಲದ ನವ್ಯತೆಯನ್ನು ಭವ್ಯತೆಯನ್ನು ಬಾಳಿನಲ್ಲಿ ತರಲು ಉಪಕ್ರಮಿಸುತ್ತೇನೆ. ಪ್ರವಾಸವೆಂದರೆ ನನಗೆ ಪ್ರಯಾಸದ ವಿಷಯವಲ್ಲ. ಅದೊಂದು ಸುಖಪ್ರಸಂಗ.

©KTBS Not to be republished



©KTBS Not to be republished

ಬಸ್ಸು ಪ್ರಯಾಣದ ಸ್ವರ್ಗಸುಖ ಸಿಗಬೇಕಾದರೆ ತಪಶ್ಚರ್ಯವನ್ನಂತೂ ಮಾಡಲೇಬೇಕು. ಅದೆಂದರೆ ಬಸ್ಸಿಗಾಗಿ ಕಾಯುವುದು. ಊಟದ ಮನೆಯಲ್ಲಿ ಒಂದೆರಡು ನಿಮಿಷವಾಗಲಿ–ಕೊನೆಗೆ ಗಳಿಗೆಯಾಗಲಿ ತಾಳಬಹುದು. ಕಾಳುಕಡ್ಡಿಯ ಅಂಗಡಿಯ ಮುಂದೆ ತಾಸುಗಟ್ಟಲೆ ರಣಗುಟ್ಟುತ್ತಿರುವ ಸೂರ್ಯನ ಕೃಪಾ ಛತ್ರದ ಕೆಳಗೆ ಆಶ್ರಯ ಪಡೆಯಬಹುದು. ಬಸ್ಸಿಗಾಗಿ ಕಾಯುವುದೆಂದರೆ ಒಂಟಿಗಾಲಿನ ಮೇಲೆ ನಿಂತು ಶಿವನನ್ನು ಕುರಿತು ತಪಶ್ಚರ್ಯವನ್ನು ಗೈದಂತೆಯೇ ಸೈ. ಅಂತೂ ಬಸ್ಸು ಬಂದುಬಿಟ್ಟಿತಲ್ಲ. ಕೈಯಲ್ಲಿ ಟ್ರಂಕನ್ನು ಹಿಡಿದು ಬಸ್ಸಿನೊಂದಿಗೆ ಸ್ಪರ್ಧೆ ಕಟ್ಟುವಂತೆ ಓಡುತ್ತೀರಿ. ಧೂಳೇ ನಿಮಗೆ ಸಿಕ್ಕ ಪ್ರಾಪ್ತಿ. ಆ ಬಸ್ಸು ನೀವು ಹೋಗುವ ಊರಿನದಲ್ಲ. ಅದಕ್ಕೇನಂತೆ ಇಷ್ಟು ಹಾದಿ ನೋಡಿದವರು ಇನ್ನೊಂದು ಅರ್ಧ ತಾಸು ಕೂಡಲಿಕ್ಕಾಗದೇ? ಇನ್ನೊಂದು ಪ್ಲೇಟು ಚುರಮರಿ ಚಿವಡಾ ತಿಂದು ಚಹಾ ಕುಡಿದು ಬಂದು ಕುಳಿತರಾಯ್ತು. ನೂರು ಸಲ ಮೋಸಗೊಳಿಸಿ ಕೊನೆಗೂ ನಿಮ್ಮ ಬಸ್ಸು ಬಂದೇ ಬರುವುದು. ಕಂಡಕ್ಟರು ಉಸ್ಸೆಂದು ಕೆಳಗೆ ಇಳಿಯುವನು “ಈಗ ಯಾರೂ ಬಸ್ಸನ್ನು ಹತ್ತಬೇಡಿ” ಎನ್ನುತ್ತ ಕ್ಯೂ ನಿಲ್ಲುತ್ತದೆ. ಕಂಡಕ್ಟರ ಮರು ಅಪ್ಪಣೆಯಾದ ಕ್ಷಣವೇ ಕ್ಯೂ ಮಾಯವಾಗಿ ಕುರುಕ್ಷೇತ್ರ ಪ್ರಾರಂಭವಾಗುತ್ತದೆ. ತಿಕ್ಕಾಟ, ಗುದ್ದಾಟ, ಚೀರಾಟ ಹೋರಾಟಗಳೆಲ್ಲಾ ನಡೆಯುತ್ತವೆ. ಒಬ್ಬರ ಷರ್ಟು ಹರಿದರೆ, ಇನ್ನೊಬ್ಬರ ಉಸಿರೇ ನಿಂತಿತು. ಮಗುದೊಬ್ಬರ ಬೆರಳೊಂದು ಕತ್ತರಿಸಿಯೇ ಹೋಯಿತು. ಕೂಸಿನ ಚೀರುವಿಕೆಗಾಗಲಿ ಸ್ತ್ರೀಯರ ಆರ್ತ ಸ್ವರಕ್ಕಾಗಲಿ ಯಾರೂ ಮಣಿಯುವುದಿಲ್ಲ. ಅಂತೂ ಒಮ್ಮೆ ಬಸ್ಸನ್ನು ಏರಿದಾಗ ಕೊಲಂಬಸ್ ಅಮೇರಿಕೆಯನ್ನು ಪ್ರಥಮ ಬಾರಿ ಕಂಡಂತೆ, ತೇನಸಿಂಗ್ ಎವರೆಸ್ಟನ್ನು ಏರಿ ನಿಂತಂತೆ ಭಾಸವಾಗಿ ಸಾತ್ವಿಕ

ಆನಂದ ಉಂಟಾಗುವುದು. ಬಸ್ಸು ಬಿಡುವಂತಾದಾಗ ಕೆಳಗೆ ನಿಂತ ಎಲ್ಲರಿಗೂ ಸ್ಥಾನ ಸಿಕ್ಕಿರುವುದು. ಆದರೂ ಈ ಗದ್ದಲ ಏಕೆ ಎಂದು ನೀವು ಕೇಳಬಹುದು. ಈ ಹೋರಾಟವಿಲ್ಲದ ಬಸ್ಸು ಪ್ರಯಾಣ ನೀರಸವಾಗುತ್ತದೆ. ಕುಳಿತು ಕಾಲು ನೋಯುತ್ತವೆ, ಟೊಂಕ ಬಾಗುತ್ತದೆ. ಅದನ್ನು ತಡೆಗಟ್ಟಲು ಮಾನವನು ತಾನಾಗಿಯೇ ಕಂಡುಹಿಡಿದ ಪದ್ಧತಿಯಿದು. ಬಸ್ಸು ಹೊರಟು ನಿಂತಾಗ ಜೀವನದಲ್ಲಿ ಉದಾತ್ತವಾದುದನ್ನು ಸಾಧಿಸಿದೆವು – ಎಂಬ ಭಾವ ಪ್ರತಿಯೊಬ್ಬ ಪ್ರವಾಸಿಗನ ಮೊಗದಲ್ಲಿ ಮೂಡಿದ್ದನ್ನು ಗಮನಿಸಬಹುದು.

ನಾನಾದರೋ ಇಂಥ ಪ್ರಸಂಗಗಳಲ್ಲಿ ಸಾಕಷ್ಟು ನೂಕು ನುಗ್ಗಾಟಗಳಲ್ಲಿ ಸಿಕ್ಕು ಮೊದಲಿಗನಾಗದಿದ್ದರೂ ಮೊದಲಿಗರಲ್ಲಿ ಓರ್ವನಾಗಬೇಕೆನ್ನುವ ತತ್ವದವನು. ಇಷ್ಟು ಗಡಿಬಿಡಿ ಮಾಡಿ ಏರುವುದರಲ್ಲಿ ಒಂದು ಸ್ವಾರ್ಥವಿದೆ. ಅದೇನೆಂದರೆ ಕಿಟಕಿಯ ಹತ್ತಿರದ ಸ್ಥಳ, ಹೊರಗಿನ ಗಾಳಿಯೂ ಬೀಸುತ್ತದೆ. ಒಳಗಿನ ಜನಸಂಪರ್ಕವೂ ತಪ್ಪಿರುವುದಿಲ್ಲ. ಹಾಗೆ ಕಿಟಕಿಯ ಹತ್ತಿರ ಕುಳಿತು ಜನರ ನಡೆನುಡಿಗಳನ್ನು ಗಮನಿಸುವುದು, ಬೇಸರವಾದಾಗ ಹೊರಗಿನ ಪ್ರಕೃತಿಯ ಉಪಾಸಕನಾಗಿ ನಿಲ್ಲುವುದು, ಮಗುದೊಮ್ಮೆ ಮಾತುಕತೆಗಳಲ್ಲಿ ಭಾಗವಹಿಸಿ ಜೋರಾಗಿ ಮಾತನಾಡುವುದು, ಇಡಿಯ ಪ್ರಯಾಣದ ಅವಧಿಯನ್ನು ನಾಟಕದ ಅವಧಿಯೆಂದು ತಿಳಿದು ಪ್ರೇಕ್ಷಕನಾಗಿ ನಿಲ್ಲುವುದು.

ಜನರು ತಮ್ಮ ತಮ್ಮ ಯೋಗ್ಯತಾನುಸಾರ ಸ್ಥಳಗಳನ್ನು ಅಲಂಕರಿಸಿದ ಬಳಿಕ ಟಿಕೆಟ್ಟು ಸಮಾರಂಭ ನಡೆಯುತ್ತದೆ. ಸ್ತ್ರೀ ಪ್ಯಾಸೆಂಜರೊಂದಿಗೆ ದೊಡ್ಡ ಚರ್ಚೆಯೇ ನಡೆಯುತ್ತದೆ. “ಈ ಕೂಸು ನಿಮ್ಮದೇ ಏನ್ರಿ?.” “ಹೌದು.” “ಎಷ್ಟು ವರ್ಷ ಆಗಿವೆ?.” “ಎರಡು ತುಂಬಿ ಮೊನ್ನೆ ಅಮಾವಾಸ್ಯೆಗೆ ಒಂದು ತಿಂಗಳಾಯಿತು.” “ಇಲ್ಲ ಮೂರು ವರ್ಷ ಆಗಿವೆ” ಎಂದು ಅರ್ಧ ಟಿಕೇಟನ್ನು ಪಡೆಯಲು ಸೂಚಿಸುವನು. ಅದಕ್ಕೂ ಒಪ್ಪದಿರಲು, ನಮಸ್ಕಾರ ಮಾಡುತ್ತ ನಿಲ್ಲುವ ಪ್ರಸಂಗಗಳೂ ಇವೆ. ಇನ್ನು ಬಸ್ಸು ಹೊರಡುತ್ತದೆ. ಕಂಡಕ್ಟರನು ತಲೆಗಳನ್ನು ಎಣಿಸುತ್ತಾನೆ. ಒಂದು ಸಂಖ್ಯೆ ಕಡಿಮೆ ಬೀಳುತ್ತದೆ. ಬಸ್ಸನ್ನು ನಿಲ್ಲಿಸಲಾಗುತ್ತದೆ. ಎಲ್ಲರ ಟಿಕೇಟ್ ಪರೀಕ್ಷೆಯಾಗುತ್ತದೆ. ಸಿಕ್ಕುಬೀಳುವವರು ಹಳ್ಳಿಯ ಮುದುಕಮ್ಮ ಅಥವಾ ಪಟ್ಟಣದ ಸುಶಿಕ್ಷಿತ. ಅವರಿಗಿಷ್ಟು ಮಂಗಳಾರತಿ ಆದ ನಂತರ ಬಸ್ಸು ನಾಗಾಲೋಟವನ್ನು ಇಕ್ಕುತ್ತದೆ.

ಬಸ್ಸು ಪ್ರಯಾಣ ಸ್ಫೂರ್ತಿಯ ಉಗಮವೂ ಆಗಬಹುದು. ಬಹುಕಾಲ ಮೌನದಲ್ಲಿದ್ದು ಬೇಜಾರುಗೊಂಡಾಗ ಒಳ್ಳೆಯ ಮಾತುಗಾರ ಸಿಕ್ಕರೆ ತೀರಿತು. ಮಾತಿನ ಸುರಿಮಳೆ; ಚರ್ಚೆಯ ಗಂಗಾ ಪ್ರವಾಹ. ವಿಷಯ ಮುಖ್ಯವಲ್ಲ, ಮಾತೇ ಮುಖ್ಯ. ಭಾರತದ ವಿದೇಶ ನೀತಿಯಿಂದ ಹಿಡಿದು ಹಳ್ಳಿಯ ಗ್ರಾಮ ಪಂಚಾಯಿತಿಯ ಚುನಾವಣೆಯವರೆಗೆ, ಶಿಕ್ಷಣದ ಅಧೋಗತಿಯಿಂದ ಜನರ ನೈತಿಕ ಅಧಃಪತನದವರೆಗೆ ಮಾತನ್ನು ಜಗ್ಗಿಯಾಡಲಾಗುತ್ತದೆ. ಒಂದು ಸಾರೆ ಎಲ್ಲಿಯೋ ಪ್ರಾರಂಭವಾದ ಮಾತು ಮತ್ತೆಲ್ಲಿಯೋ ಮುಗಿಯುತ್ತದೆ. ಆಂಧ್ರನಾಡಿನ ಮುತ್ತುಗಾರನೊಡನೆ ಮಾತುಕತೆ ಹೂಡಿದೆ. ದೇಶದ ಸಮಸ್ಯೆಯ ಮೇಲೆ ನಮ್ಮ ನಮ್ಮ ವೈಯಕ್ತಿಕ ಅಭಿಪ್ರಾಯ ಮಂಡಿಸಿದ ಬಳಿಕ ನಮ್ಮ ಸಮೀಪದ ವಿಷಯವೇ ಬಂತು. “ನೀವು ದೇಶವೆಲ್ಲ ಸುತ್ತಿದ್ದೀರಿ. ಕರ್ನಾಟಕ ಬಗ್ಗೆ ನಿಮ್ಮ ಅಭಿಪ್ರಾಯವೇನು?” ಎಂದು ಪ್ರಾಂತೀಯ ಅಭಿಮಾನದ ಪ್ರಶ್ನೆ ಕೇಳಿದೆ. “ಅದೊಂದು ದರಿದ್ರ ನಾಡು” ಎಂದು ಅವನು ಅಭಿಪ್ರಾಯ ಪಟ್ಟಾಗ ನಾನು ರೊಚ್ಚಿಗೆದ್ದೆ.

©KTBS Not to be republished

ವೀರರ ನಾಡಾದ ಕಲಿಗಳ ನಮ್ಮ ನಾಡಿಗೆ ಅಪಮಾನವೇ ಎಂದು ಕೋಪದಿಂದ ಕುದಿದೆ. ಚರ್ಚೆಯಿಂದ ಗೆದೆಯಲಾಗದೆ, ಇನ್ನು ಮಾರಾಮಾರಿಯಾಗುವ ಸ್ಥಿತಿಯಿತ್ತು. ಸಹಪ್ರಯಾಣಿಕರು ಆ ಕುತ್ತಿನಿಂದ ನಮ್ಮಿಬ್ಬರನ್ನು ಪಾರುಗಾಣಿಸಿದರು. ಹೀಗೆ ಬಸ್ಸು ಪ್ರಯಾಣ ಒಂದೊಂದು ಸಲ ಅನಿರೀಕ್ಷಿತ ಗಂಡಾಂತರಕ್ಕೆ ಈಡೂ ಮಾಡುತ್ತಿರುವುದುಂಟು.


ತೀರಾ ಇತ್ತೀಚಿಗಾದ ಘಟನೆಯಿದು. ರಾತ್ರಿ 9 ಘಂಟೆಯಾಗಿರಬಹುದು. ಬಸ್ಸಿನಿಂದ ಇಳಿಯುತ್ತಲೇ ಮುಂದಿನ ಬಸ್ಸು ಸಿದ್ಧವಾಗಿ ನಿಂತಿತ್ತು. ನನ್ನ ಗಂಟುಗಳನ್ನು ಬಸ್ಸಿನ ಮೇಲೆ ಒಗೆಯಿಸಿ ಇನ್ನೂ ತಡವಿರಬಹುದು ಎನ್ನುವ ಡೌಲಿನಲ್ಲಿ ಚಹಾ ಕುಡಿಯುವ ದುರ್ಬುದ್ಧಿಯಿಂದ ಹೋಟೆಲಿಗೆ ಹೋದೆ. ಅಂದು ಬಸ್ ಸ್ಟ್ಯಾಂಡಿನಲ್ಲಿ ಎರಡು ಮೂರು ಬಸ್ಸುಗಳು ಸಾಲಾಗಿ ನಿಂತಿದ್ದವು. ಯಾವುದೋ ಬಸ್ಸಿನಲ್ಲಿ ಏರಿ ಟಿಕೇಟೊಂದನ್ನು ಪಡೆದೆ. ನನಗೆ ಸಂಶಯವೇನೂ ಬರಲಿಲ್ಲ. ಬಸ್ಸು ಇನ್ನೇನು ಹೊರಡಬೇಕು ಎಂದಾಗ ತಿಳಿದುಬಂತು. ನಾನು ಯಾವ ಊರಿಂದ ಬಂದೆನೋ ಅಲ್ಲಿಗೇ ಹೊರಟಿತ್ತು ಆ ಬಸ್ಸು. ಕಂಡಕ್ಟರನಿಗೆ ಹೇಳಿ ಬಸ್ಸಿನಿಂದ ಲಗುಬಗೆಯಿಂದ ಇಳಿದೆ. ಬಸ್ಸಿನ ನಾಲ್ವತ್ತು ಮುಖಗಳು ನನ್ನನ್ನು ದಿಟ್ಟಿಸಿ ನೋಡುತ್ತಿದ್ದವು, ಅಪಹಾಸ್ಯ ಗೈಯುತ್ತಿದ್ದವು. ನಾನು ತಲೆಯಿಂದ ಬುಡದವರೆಗೂ ಬೆವರಿನಲ್ಲಿ ಮುಳುಗಿಹೋಗಿದ್ದೆ. ಈ ರೀತಿ ಬಸ್ಸಿನಲ್ಲಿ ನಾನು ಹೀರೋ ಆಗಿದ್ದಂತೆ ಝೀರೋ ಕೂಡಾ ಆಗಿ ನಗೆಗೀಡಾದ ಪ್ರಸಂಗಗಳೂ ಇವೆ. ಬಸ್ ಪ್ರಯಾಣದಲ್ಲಿ ಸಾಮಾನ್ಯ ಘಟನೆಗಳೇ ಜರುಗಿದರೆ, ಲಾರಿಯಲ್ಲಿ ಅಸಾಮಾನ್ಯ ಘಟನೆಗಳು ಸಂಭವಿಸುತ್ತವೆ. ಒಂದುಸಾರೆ ಬಸ್ಸು ತಪ್ಪಿತು. ಲಾರಿಯ ಹಾದಿಯನ್ನು ಕಾದು ನಿಂತಾಗ ಮಧ್ಯರಾತ್ರಿಯಾಗಿತ್ತು. ಲಾರಿಯೊಂದು ಬಂದೇ ಬಂತು, ನಾನು ಕುಳಿತುಬಿಟ್ಟೆ. ಲಾಯಿಟಿನ ಬೆಳಕಿನಲ್ಲಿ ನಾನೂ ಡ್ರಾಯವ್ಹರನೂ ಪರಸ್ಪರ ದಿಟ್ಟಿಸಿ ನೋಡಿದೆವು. ಆತನ ನೋಟಕ್ಕೆ ನಡುಗಿಹೋದೆ. ಕೈಯಲ್ಲಿ ಹೊಸದಾಗಿ ಕೊಂಡ ವಾಚು ಇತ್ತು. ಕಿಸೆಯಲ್ಲಿ ೭೦-೭೦ ರೂ. ಇದ್ದವು. ಈ ಹಣದ ಆಸೆಗಾಗಿ ನನ್ನನ್ನು ಕಡಿದು ತುಂಡುಮಾಡಿ, ರೋಡ ಬದಿಗೆ ಒಗೆದರೆ ಏನು ಗತಿ? ಹತ್ತು ನಿಮಿಷಕ್ಕೊಮ್ಮೆ ನನ್ನೆಡೆ ದೃಷ್ಟಿ ಬೀರುವ ವ್ಯಕ್ತಿಯ ಮೇಲೆ ನನ್ನ ವಿಶ್ವಾಸ ಹಾರಿತು. ಎದೆ ಡವ ಡವ ಅನ್ನುತ್ತಿತ್ತು. ನಾನು ಇಳಿಯಬೇಕಾದ ಸ್ಥಳ ಬರುವವರೆಗೂ ಜೀವದಲ್ಲಿ ಜೀವವಿರಲಿಲ್ಲ. ಡ್ರಾಯವ್ಹರನು ನನ್ನನ್ನು ಜೀವಂತ ಬಿಟ್ಟಾಗ ಅವನು ಹೇಳಿದ ಹಣಕ್ಕಿಂತ ಹೆಚ್ಚಿನ ಹಣ ಕೊಟ್ಟೆ. "ಸಲಾಂ ಸಾಬ್" ಎನ್ನುವ ಆತನ ನುಡಿಯನ್ನು ಕೇಳುವ ವ್ಯವಧಾನವಿರದೆ ಓಡಿಯೇ ಬಿಟ್ಟಿದ್ದೆ.

ಬಸ್ಸು ಪ್ರಯಾಣವು ಈ ರೀತಿ ನನ್ನ ಅನುಭವದ ವಲಯವನ್ನು ವಿಸ್ತರಿಸಿದೆ. ಜೀವನದಲ್ಲಿ ಆಸಕ್ತಿಯನ್ನು ಹುಟ್ಟಿಸಿದೆ. ಬರಡು ಬಾಳಿನಲ್ಲಿ ಆಶೆಯ ಚಿಗುರನ್ನೂ ಮೂಡಿಸಿದೆ. ಜೀವನದ ಏಕತಾನತೆಯಲ್ಲಿ ವೈವಿಧ್ಯದ ಬಣ್ಣವನ್ನು ತೀಡಿದೆ. ವಿವಿಧ ವ್ಯಕ್ತಿಗಳನ್ನು ನೋಡುವ, ಮಾತನಾಡಿಸುವ ಸಂದರ್ಭವನ್ನು ಒದಗಿಸಿಕೊಟ್ಟು, ಬಿಡದೆ ಅವರನ್ನು ಅಭ್ಯಸಿಸುವಂತೆ ಮಾಡಿದೆ. ಇಂತು ಪ್ರವಾಸವೆಂದರೆ ನನಗೆ ಮೋಜಿನ ವಿಷಯವಾಗಿದೆ.

* * * *

©KTBS Not to be republished

## ಕೃತಿಕಾರರ ಪರಿಚಯ :



**ವೀರೇಂದ್ರ ಸಿಂಪಿ** ಅವರು ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಚಡಚಣದಲ್ಲಿ ೧೯೩೮ ರಲ್ಲಿ ಜನಿಸಿದರು. ಇವರ ತಂದೆ ಜಾನಪದ ತಜ್ಞರಾದ ಸಿಂಪಿ ಲಿಂಗಣ್ಣನವರು. ಇಂಗ್ಲಿಷ್ ಪ್ರಾಧ್ಯಾಪಕರಾದ ಇವರು ಪ್ರೌಢಶಾಲೆಯಲ್ಲಿ ಇರುವಾಗಲೇ ಪ್ರಬಂಧ ರಚನೆಗೆ ತೊಡಗಿ, ಹಲವಾರು ಪ್ರಬಂಧ ಸಂಕಲನಗಳನ್ನು ಪ್ರಕಟಿಸುವ ಮೂಲಕ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. 'ಕಾಗದದ ಚೂರು', 'ಭಾವ ಮೈದುನ', 'ಸ್ವಚ್ಛಂದ ಮನದ ಸುಳಿದಾಟ', 'ಪರಿಸರ ಸ್ಪಂದನ' ಇವು ಅವರ ಪ್ರಮುಖ ಪ್ರಬಂಧ ಸಂಕಲನಗಳು. ಇವರ 'ಭಾವ ಮೈದುನ' ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಪ್ರಸ್ತುತ 'ಬಸ್ಸು ಪ್ರಯಾಣದ ಸುಖ ದುಃಖಗಳು' ಪ್ರಬಂಧವನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ **'ಆಯ್ದ ಲಲಿತ ಪ್ರಬಂಧಗಳು'** ಕೃತಿಯಿಂದ ಆರಿಸಲಾಗಿದೆ.

## ಅಭ್ಯಾಸ

### I. ಪದಗಳ ಅರ್ಥ :

**ಅಲೆ** – ತಿರುಗಾಡು; ಸುತ್ತಾಡು.
**ಆರ್ತ ಸ್ವರ** – ನೋವಿನ ಧ್ವನಿ; ಸಂಕಟದ ಧ್ವನಿ.
**ಅಧೋಗತಿ** – ಸರ್ವನಾಶ; ದುರ್ಗತಿ; ಪತನ.
**ಅಧಃಪತನ** – ಸರ್ವನಾಶ; ಕೆಳಗೆ ಬೀಳುವುದು.
**ಉದಾತ್ತ** – ಶ್ರೇಷ್ಠ
**ಉಪಕ್ರಮಿಸು** – ಪ್ರಾರಂಭ; ತೊಡಗುವಿಕೆ.
**ಉಪಾಸಕ** – ಆರಾಧಕ; ಭಕ್ತ.
**ಒರತೆ** – ನೀರಿನ ಬುಗ್ಗೆ; ನೀರು ಜಿನುಗುವಿಕೆ.
**ಏಕತಾನತೆ** – ಒಂದೇ ರಾಗ; ಹೇಳಿದ್ದನ್ನೇ ಹೇಳು.
**ಕಿಸೆ** – ಜೇಬು
**ಕೂಪಮಂಡೂಕ** – ಬಾವಿಯೊಳಗಿನ ಕಪ್ಪೆ.
**ಗಂಡಾಂತರ** – ವಿಪತ್ತು; ತೊಂದರೆ.
**ಚಿವಡಾ** – ಅವಲಕ್ಕಿಯ ತಿನಿಸು
**ಚುರಮರಿ** – ಮಂಡಕ್ಕಿಯ ತಿನಿಸು
**ತಪಶ್ಚರ್ಯ** – ವ್ರತ ನಿಯಮಗಳಿಂದ ದೇಹವನ್ನು ದಂಡಿಸುತ್ತಾ ಧ್ಯಾನ ಮಾಡುವುದು.
**ತಾಸು** – ಗಂಟೆ; ಸಮಯ
**ದುಗುಡ** – ವ್ಯಸನ; ಚಿಂತೆ; ಆತಂಕ.
**ನಾಗಾಲೋಟ** – ಅತಿವೇಗದ ಓಟ.
**ಡೌಲು** – ಆಡಂಬರ; ಒಣಹೆಮ್ಮೆ; ಬಡಾಯಿ.
**ಪಾರುಗಾಣಿಸು** – ರಕ್ಷಿಸು; ದಾಟಿಸು.
**ಪ್ರಯಾಸ** – ಆಯಾಸ; ದಣಿವು; ಶ್ರಮ.
**ಪ್ರಾಪ್ತಿ** – ಗಳಿಕೆ; ಲಾಭ; ಸಿಗುವುದು.
**ಮಣಿ** – ಸೋಲು; ಬಾಗು.
**ವ್ಯವಧಾನ** – ತಾಳ್ಮೆ; ಸಮಾಧಾನ; ಸಹನೆ.
**ಷೋಕಿಲಾಲ** – ಮೋಜು ಮಾಡುವವ
**ಸಾತ್ವಿಕ** – ಒಳ್ಳೆಯವ; ಉತ್ತಮ ಗುಣವುಳ್ಳವನು.
**ಸ್ಥಿತಿವಂತ** – ಸಿರಿವಂತ

©KTBS Not to be republished

## II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

೧. ವೀರೇಂದ್ರ ಸಿಂಪಿ ಅವರಿಗೆ ಪ್ರವಾಸವೆಂದರೆ ______________

ಅ) ಪ್ರಯಾಸದ ವಿಷಯ ಆ) ಸುಖಪ್ರಸಂಗ

ಇ) ಷೋಕಿಯ ಪ್ರಸಂಗ ಈ) ದುಗುಡದ ಪ್ರಸಂಗ

೨. ಬಸ್ಸು ಪ್ರಯಾಣಿಕರ ಚರ್ಚೆಯಲ್ಲಿ ________________ ಮುಖ್ಯವಾಗಿರುತ್ತದೆ.

ಅ) ಸಮಸ್ಯೆ ಆ) ಮಾತು

ಇ) ವಿಷಯ ಈ) ಅಭಿಪ್ರಾಯ

೩. ಲೇಖಕರು ಬಸ್ಸಿನಿಂದ ಲಗುಬಗೆಯಿಂದ ಇಳಿದದ್ದು ________________

ಅ) ಚಹಾ ಕುಡಿಯಲು ಆ) ಚುರುಮರಿ ತಿನ್ನಲು

ಇ) ಟಿಕೇಟ್ ಪಡೆಯಲು ಈ) ದಾರಿ ತಪ್ಪಿದುದಕ್ಕೆ

೪. ಲೇಖಕರು ಲಾರಿಯ ಡ್ರಾಯವ್ಹರನಿಗೆ ಹೆದರಿದುದು ______________

ಅ) ರಾತ್ರಿ ಆದುದಕ್ಕೆ ಆ) ಕೈಲಿ ವಾಚು ಇದ್ದುದರಿಂದ

ಇ) ಊರು ದೂರ ಇದ್ದುದರಿಂದ ಈ) ಪ್ರಾಣ ಭಯದಿಂದ

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ವೀರೇಂದ್ರ ಸಿಂಪಿಯವರು ತಾವು ಯಾವ ರೀತಿಯ ಪ್ರಯಾಣಿಗರಲ್ಲ ಎಂದಿದ್ದಾರೆ?

೨. ವೀರೇಂದ್ರ ಸಿಂಪಿ ಅವರು ಪ್ರವಾಸ ಕೈಗೊಳ್ಳುವುದು ಯಾವಾಗ ಎಂದಿದ್ದಾರೆ?

೩. ವೀರೇಂದ್ರ ಸಿಂಪಿ ಅವರು ಪ್ರವಾಸ ಕೈಗೊಳ್ಳುವುದು ಏಕೆ?

೪. ಲೇಖಕರು ಬಸ್ಸಿಗೆ ಕಾಯುವುದು ಯಾವುದಕ್ಕೆ ಸಮಾನ ಎಂದಿದ್ದಾರೆ?

೫. ಲೇಖಕರು ಬಸ್ಸು ಏರಿದುದನ್ನು ಯಾವುದಕ್ಕೆ ಹೋಲಿಸುತ್ತಾರೆ?

೬. ಲೇಖಕರು ಬಸ್ಸು ನುಗ್ಗಾಟದಲ್ಲಿ ಮೊದಲಿಗನಾಗಬೇಕೆಂದು ಏಕೆ ಬಯಸುತ್ತಾರೆ?

೭. ಬಸ್ ಕಂಡಕ್ಟರ್ ಸ್ತ್ರೀ ಪ್ಯಾಸೆಂಜರ್ ಜೊತೆ ಏನೆಂದು ಚರ್ಚಿಸುತ್ತಾನೆ?

೮. ಲೇಖಕರು ಸಹ ಪ್ರಯಾಣಿಕನೊಂದಿಗೆ ರೊಚ್ಚಿಗೆದ್ದದ್ದು ಏಕೆ?

©KTBS Not to be republished

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ವೀರೇಂದ್ರ ಸಿಂಪಿ ಅವರಿಗೆ ತಾವು ಸಂದರ್ಶಿಸಿದ ಸ್ಥಳಗಳ ಬಗ್ಗೆ ಯಾವ ಅಭಿಪ್ರಾಯವಿದೆ?

೨. ವೀರೇಂದ್ರ ಸಿಂಪಿ ಅವರಿಗೆ ಪ್ರಯಾಣದಲ್ಲಿ ಯಾವ ಯಾವ ರೀತಿಯ ಅನುಭವಗಳಾಗಿವೆ?

೩. ಲೇಖಕರು ಬಸ್ಸಿಗೆ ಕಾಯುವ ಪ್ರಸಂಗಗಳನ್ನು ಯಾವ ರೀತಿ ವರ್ಣಿಸಿದ್ದಾರೆ?

೪. ಲೇಖಕರು ಬಸ್ಸು ಏರುವ ಸಂದರ್ಭದಲ್ಲಿ ಯಾವ ರೀತಿಯ ವಾತಾವರಣ ಉಂಟಾಗುತ್ತದೆ ಎಂದಿದ್ದಾರೆ?

೫. ಲೇಖಕರು ಬಸ್ಸಿನ ಕಿಟಕಿ ಬಳಿಯ ಆಸನದಲ್ಲಿ ಕೂರಲು ಬಯಸಿದ್ದುದು ಏಕೆ?

೬. ಬಸ್ಸಿನಲ್ಲಿ ಯಾವ ಯಾವ ವಿಷಯಗಳ ಮೇಲೆ ಮಾತುಕತೆ ನಡೆಯುತ್ತವೆ?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಲೇಖಕರು ಬಸ್ಸು ಪ್ರಯಾಣದಲ್ಲಿ ನಗೆಗೀಡಾದ ಪ್ರಸಂಗ ಯಾವುದು?

೨. ಲೇಖಕರಿಗೆ ಲಾರಿ ಪ್ರಯಾಣದಲ್ಲಿ ಯಾವ ಅನುಭವಗಳಾದವು?

೩. ವೀರೇಂದ್ರ ಸಿಂಪಿ ಅವರಿಗೆ ಬಸ್ಸು ಪ್ರಯಾಣದಲ್ಲಿ ಆದ ಸುಖ ದುಃಖಗಳನ್ನು ಸಂಗ್ರಹಿಸಿ ಬರೆಯಿರಿ.

**ಉ) ಸಂದರ್ಭದೊಡನೆ ವಿವರಿಸಿರಿ.**

೧. "ಈ ಕೂಸು ನಿಮ್ಮದೇ ಏನ್ರೀ?"

೨. "ಕರ್ನಾಟಕದ ಬಗ್ಗೆ ನಿಮ್ಮ ಅಭಿಪ್ರಾಯವೇನು?"

೩. ಬಸ್ಸಿನ ನಲ್ವತ್ತು ಮುಖಗಳು ನನ್ನನ್ನು ದಿಟ್ಟಿಸಿ ನೋಡುತ್ತಿದ್ದವು.

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಿರಿ.**

ಸ್ವೇಚ್ಛಾಚಾರ, ಅಷ್ಟಿಷ್ಟು, ಯೋಗ್ಯತಾನುಸಾರ, ಮಂಗಳಾರತಿ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಪ್ರತ್ಯಕ್ಷ, ಸ್ವರ್ಗ, ನೀರಸ, ಸ್ವಾರ್ಥ, ಅಪಮಾನ, ಅನಿರೀಕ್ಷಿತ, ದುರ್ಬುದ್ಧಿ, ಆಸಕ್ತಿ, ಸಾಮಾನ್ಯ.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

ಸಾತ್ವಿಕ, ಆರ್ತಸ್ವರ, ಏಕತಾನತೆ, ಗಂಡಾಂತರ, ಉಪಾಸಕ, ಉದಾತ್ತ.

©KTBS Not to be republished

**ಈ) ಕೊಟ್ಟಿರುವ ಪದಗಳಿಗೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ನಕಾಶ, ಕ್ಷಣ, ಸ್ಥಾನ, ಮೊಗ, ಆಶೆ, ಪ್ರಯಾಣ.

**ಉ) ಕೊಟ್ಟಿರುವ ವಾಕ್ಯಗಳಲ್ಲಿ ಕರ್ತೃ, ಕರ್ಮ ಹಾಗೂ ಕ್ರಿಯಾ ಪದಗಳನ್ನು ಗುರುತಿಸಿರಿ.**

೧. ಕಂಡಕ್ಟರನು ತಲೆಗಳನ್ನು ಎಣಿಸುತ್ತಾನೆ.

೨. ತೇನಸಿಂಗ್ ಎವರೆಸ್ಟನ್ನು ಏರಿದನು.

**ಊ) ಕೊಟ್ಟಿರುವ ಅನ್ಯ ದೇಶೀಯ ಪದಗಳಿಗೆ ಕನ್ನಡದ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಕಂಡಕ್ಟರ್. ಡ್ರೈವ್ಹರ, ಲಾಯಿಟ, ಝೀರೋ, ಹೀರೋ,

ಟಿಕೇಟ್, ಕ್ಯೂ, ಷರ್ಟು, ಟ್ರಂಕು, ಪ್ಯಾಸೆಂಜರ್.

## IV. ಸೈದ್ಧಾಂತಿಕ ವ್ಯಾಕರಣ :

### ವಿಭಕ್ತಿಗಳು ಪ್ರತ್ಯಯಗಳು :

'ಭೀಮನು ತನ್ನ ಬಲಗಾಲಿನಿಂದ ಚೆಂಡನ್ನು ಒದೆದನು' ಈ ವಾಕ್ಯವು – ಭೀಮ, ತಾನು, ಬಲಗಾಲು, ಚೆಂಡು – ಹೀಗೆ ಕೇವಲ ನಾಮಪ್ರಕೃತಿಗಳನ್ನೇ ಹೇಳಿ ಒದೆದನು ಎಂದಿದ್ದರೆ ಅರ್ಥವಾಗುತ್ತಿರಲಿಲ್ಲ.

'ಭೀಮ, ತಾನು, ಬಲಗಾಲು, ಚೆಂಡು' ಈ ನಾಲ್ಕು ಪ್ರಕೃತಿಗಳಿಗೆ ಪರಸ್ಪರ ವಾಕ್ಯದಲ್ಲಿ ಒಂದು ಸಂಬಂಧವಿದೆ. ಈ ಸಂಬಂಧವನ್ನು ವಿಭಕ್ತಿ ಪ್ರತ್ಯಯಗಳು ಉಂಟುಮಾಡುತ್ತವೆ. ಈ ರೀತಿ ನಾಮಪ್ರಕೃತಿಗೆ ಸೇರುವ ಪ್ರತ್ಯಯಗಳನ್ನು **'ವಿಭಕ್ತಿ ಪ್ರತ್ಯಯಗಳು'** ಎನ್ನುತ್ತಾರೆ. ಅಂದರೆ ನಾಮಪ್ರಕೃತಿಗಳ ಮುಂದೆ ಸೇರಿಕೊಂಡು ಬೇರೆ, ಬೇರೆ ಅರ್ಥವನ್ನು ಉಂಟು ಮಾಡುವ ಪ್ರತ್ಯಯಗಳಿಗೆ 'ವಿಭಕ್ತಿ ಪ್ರತ್ಯಯ' ಎಂದು ಹೆಸರು. ವಿಭಕ್ತಿಗಳಲ್ಲಿ ಏಳು ವಿಧಗಳಿವೆ.

(ನಾಮಪ್ರಕೃತಿ + ವಿಭಕ್ತಿ ಪ್ರತ್ಯಯ = ನಾಮಪದ)

ನಾಮಪದವು ಕ್ರಿಯಾಪದದೊಂದಿಗೆ ಹೊಂದಿರುವ ಸಂಬಂಧವನ್ನು ತಿಳಿಸುವ ಕರ್ತೃ, ಕರ್ಮ, ಕರಣ ಮುಂತಾದವುಗಳನ್ನು ಕಾರಕಾರ್ಥಗಳು ಎಂದು ಕರೆಯಲಾಗುತ್ತದೆ. ಅಂದರೆ, ಕ್ರಿಯಾನಿಮಿತ್ತ. 'ಮಾಡಿಸುವ' ಅಥವಾ 'ಮಾಡಿಸುವ ಪದಾರ್ಥವನ್ನು' ಸೂಚಿಸುವುದೇ **ಕಾರಕ.**

©KTBS Not to be republished

| ವಿಭಕ್ತಿ ಸೂಚಕ | ವಿಭಕ್ತಿಪ್ರತ್ಯಯ | ಕಾರಕಾರ್ಥ | ನಾಮಪದ |
|---|---|---|---|
| ಪ್ರಥಮಾ | ಉ | ಕರ್ತೃ | ಮರವು |
| ದ್ವಿತೀಯಾ | ಅನ್ನು | ಕರ್ಮ | ಮರವನ್ನು |
| ತೃತೀಯಾ | ಇಂದ | ಕರಣ (ಸಾಧನ) | ಮರದಿಂದ |
| ಚತುರ್ಥೀ | ಕೆ, ಗೆ, ಇಕೆ | ಸಂಪ್ರದಾನ (ಕೊಡುವಿಕೆ) | ಮರಕ್ಕೆ |
| ಪಂಚಮೀ | ದೆಸೆಯಿಂದ | ಅಪಾದಾನ (ಅಗಲುವಿಕೆ) | ಮರದ ದೆಸೆಯಿಂದ |
| ಷಷ್ಠೀ | ಅ | ಸಂಬಂಧ | ಮರದ |
| ಸಪ್ತಮೀ | ಅಲ್ಲಿ | ಅಧಿಕರಣ (ಆಧಾರವಾಗಿರುವುದು) | ಮರದಲ್ಲಿ |

ವಿಭಕ್ತಿಗಳು ಏಳು ಇದ್ದರೂ ಕಾರಕ ಆರು ಮಾತ್ರ. ಷಷ್ಠೀ ವಿಭಕ್ತಿ ಪ್ರತ್ಯಯ 'ಅ' ಎಂಬುದು ಕ್ರಿಯೆಗೆ ನೇರವಾಗಿ ಸಂಬಂಧಪಡದಿರುವುದರಿಂದ ಅದನ್ನು ಕಾರಕ ಎಂದು ಕರೆಯಲಾಗುವುದಿಲ್ಲ. 'ರಾಮನ' ಎಂಬ ಷಷ್ಠೀ ವಿಭಕ್ತಿಯಿಂದ ಕೂಡಿದ ಪದದ ಮುಂದೆ ನೇರವಾಗಿ ಕ್ರಿಯಾಪದವನ್ನು ಇರಿಸಲು ಸಾಧ್ಯವಿಲ್ಲ.

## V. ಚಟುವಟಿಕೆಗಳು :

೧. ಪ್ರಸ್ತುತ ಪಾಠದಲ್ಲಿ ಬಳಕೆಯಾಗಿರುವ ಅನ್ಯದೇಶೀಯ ಪದಗಳನ್ನು ಪಟ್ಟಿಮಾಡಿರಿ.
೨. ಬಸ್ಸು ಪ್ರಯಾಣದಲ್ಲಿ ನಿಮಗಾದ ಅನುಭವಗಳನ್ನು ತಮಾಷೆಗಳನ್ನು ಬರೆದು ಶಿಕ್ಷಕರಿಗೆ ತೋರಿಸಿ.
೩. ಪತ್ರಿಕೆಯಲ್ಲಿ ಬರುವ ಲಲಿತ ಪ್ರಬಂಧಗಳನ್ನು ಸಂಗ್ರಹಿಸಿ ಓದಿರಿ.

©KTBS Not to be republished

# ೫. ಉರುಸುಗಳಲ್ಲಿ ಭಾವೈಕ್ಯತೆ

– ದಸ್ತಗೀರ ಅಲ್ಲೀಭಾಯಿ

**ಪಾಠ ಪ್ರವೇಶ :** ನಮ್ಮ ಸಂವಿಧಾನದ ಪ್ರಸ್ತಾವನೆಯ ಮೊದಲ ಸಾಲು ಜಾತ್ಯತೀತತೆಯನ್ನು ಸಾರುತ್ತದೆ. ಭಾರತದಲ್ಲಿನ ಪ್ರತಿಯೊಂದು ಧರ್ಮವೂ ಭಾವೈಕ್ಯತೆಯ ಪ್ರತೀಕವಾಗಿದ್ದು ಶಾಂತಿ, ದಯೆ, ಸತ್ಯ ಹಾಗೂ ಅಹಿಂಸೆಯನ್ನು ಸಾರುತ್ತವೆ. ಭಾರತೀಯರಾದ ನಾವು ಎಲ್ಲಾ ಧರ್ಮಗಳನ್ನು ಪ್ರೀತಿಸಬೇಕು, ಗೌರವಿಸಬೇಕು. ಸತ್ಯ, ಶಾಂತಿ, ದಯೆ, ಅಹಿಂಸೆ, ಶುದ್ಧತೆ ಇವುಗಳ ಸಮನ್ವಯವೇ ನಿಜವಾದ ಧರ್ಮ. ಸಕಲ ಧರ್ಮಗಳು ತಮ್ಮದೇ ಆದ ಸಂಪ್ರದಾಯ, ಹಬ್ಬ ಹಾಗೂ ಆಚರಣೆಗಳನ್ನು ಹೊಂದಿರುತ್ತವೆ. ಅಂತಹ ಆಚರಣೆಗಳಲ್ಲಿ ಹಿಂದೂ ಮುಸಲ್ಮಾನರು ಕೂಡಿ ಸಂಭ್ರಮಿಸುವ ಜಾತ್ರೆ ಹಾಗೂ ಉರುಸುಗಳು ಭಾವೈಕ್ಯತೆಯ ಪ್ರತೀಕವಾಗಿವೆ. ನಾಗರಿಕ ಸಮಾಜದಲ್ಲಿ ಬಾಳುತ್ತಿರುವ ನಾವು ಧರ್ಮಾಂಧತೆಯನ್ನು ತೊರೆದು ಪರಸ್ಪರ ಗೌರವಿಸುವಂತಾಗಬೇಕು. ಮತೀಯ ಸಾಮರಸ್ಯ ಹಾಗೂ ಭ್ರಾತೃತ್ವ ಭಾವನೆಯಿಂದ ಮಾತ್ರ ಭವ್ಯ ಸಮಾಜ ಉದಯಿಸಲು ಸಾಧ್ಯ.

ಭಾರತೀಯರು ವಿವಿಧ ಹಬ್ಬಗಳನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಆಚರಿಸುವಂತೆ ಜಾತ್ರೆಗಳನ್ನು ಮತ್ತು ಉರುಸುಗಳನ್ನು ಆಚರಿಸುತ್ತಾರೆ. ಉರುಸುಗಳು ಹಿಂದು ಸಂಸ್ಕೃತಿ ಮತ್ತು ಮುಸ್ಲಿಂ ಸಂಸ್ಕೃತಿಗಳ ಮಧುರ ಮಿಲನದಿಂದ ಹುಟ್ಟಿ ಬೆಳೆದು ಬಂದವುಗಳಾಗಿವೆ. ಪ್ರಾದೇಶಿಕವಾಗಿ ಪ್ರಚಲಿತವಿರುವ ಉರುಸುಗಳ ಆಚರಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಭಾವೈಕ್ಯದ ಹೆಗ್ಗುರುತುಗಳು ಸ್ಪಷ್ಟವಾಗಿ ಗೋಚರಿಸದಿರವು. ಕೆಲವೊಂದು ಉರುಸುಗಳು ಜಾತ್ರೆಗಳಾಗಿ, ಕೆಲವೊಂದು ಜಾತ್ರೆಗಳು ಉರುಸುಗಳಾಗಿ ಬಳಕೆಯಲ್ಲಿವೆ. ಆದರೆ ಜಾತ್ರೆ ಮತ್ತು ಉರುಸುಗಳು ಹಿಂದೂ–ಮುಸ್ಲಿಂ ಭಾವೈಕ್ಯದ ಪವಿತ್ರ ಕ್ಷೇತ್ರಗಳಾಗಿವೆಯೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಅಜ್ಮೇರಿನ ಹಖ್ವಾಜಾ ಮೊಯಿನುದ್ದೀನ್ ಚಿಸ್ತಿ, ದಿಲ್ಲಿಯ ಹಶೇಖ ನಿಜಾಮುದ್ದೀನ್ ಔಲಿಯಾರವರ ಉರುಸುಗಳಲ್ಲಿ ಮುಸ್ಲೀಮರಂತೆ ಹಿಂದೂಗಳು ಉತ್ಸಾಹದಿಂದ ಪಾಲ್ಗೊಂಡು ಹರಕೆ ಸಲ್ಲಿಸುತ್ತಾರೆ. ತೆಬರ್ರುಕ್ (ಪ್ರಸಾದ) ಸ್ವೀಕರಿಸಿ ಪುನೀತರಾದೆವೆಂದು ತೃಪ್ತಿಗೊಳ್ಳುತ್ತಾರೆ.


ಮಕಾನಪುರದ ಜಿಂದೇ ಷಾ ಮದಾರ ಉರುಸಿನಲ್ಲಿ ಹಿಂದೂ–ಮುಸ್ಲೀಮರು ಚಿಕ್ಕಮಕ್ಕಳಿಗೆ ಅಂಟಿದ ರೋಗ ರುಜಿನಗಳಿಂದ ಮುಕ್ತಗೊಳಿಸಲು ಬಂಗಾರ ಅಥವಾ ಬೆಳ್ಳಿಯ ಹಾರವನ್ನು ಕೊರಳಲ್ಲಿ ಹಾಕಲು ಹಿಂದೆಮುಂದೆ ನೋಡುವುದಿಲ್ಲ. ಉರುಸಿನ ದಿನ ನಡೆಯುವ ಕೆಂಡ ತುಳಿಯುವ ಸಂಪ್ರದಾಯ ಹಿಂದೂ ಸಂಸ್ಕೃತಿಯ ಗಾಢ ಪ್ರಭಾವದಿಂದ ಬಂದುದಾಗಿದೆ.

©KTBS Not to be republished

ಮುಂಬಯಿಯ ಹಾಜಿಮಲಂಗ ಬಾಬಾ ದರಗಾದ ಆಡಳಿತವನ್ನು ಒಂದು ಬ್ರಾಹ್ಮಣ ಕುಟುಂಬ ನಡೆಸುತ್ತದೆ. ದರಗಾದಲ್ಲಿ ಮುಸ್ಲಿಂ ಸಂಪ್ರದಾಯದ ಝಿಯಾರತ್‌ನಂತೆ ಒಮ್ಮೆ ಫಾತೆಹಾ ನಡೆದರೆ ಇನ್ನೊಂದು ಹೊತ್ತಿನಲ್ಲಿ ಹಿಂದುಗಳು ಲೋಬಾನದ ಹೊಗೆ ಹಾಕಿ ಪೂಜೆ ಮಾಡುತ್ತಾರೆ.

ಗುಲಬರ್ಗಾದ ಖ್ವಾಜಾ ಬಂದಾನವಾಜರ ದರಗಾ ಧರ್ಮ ಸಮನ್ವಯ ದೃಷ್ಟಿಗೆ ಪುರಾವೆಯಾಗಿದೆ. ಉರುಸಿನ ಹಿಂದಿನ ದಿನ ನಡೆಯುವ ಸಂದಲ್ ಮೆರವಣಿಗೆಯಲ್ಲಿ ಮಷಾಲ್ (ದೀವಟಿಗೆ) ಹಿಡಿಯುವ ಹಕ್ಕು ಹಿಂದು ಭಕ್ತರದಾಗಿದೆ. ಉರುಸಿನ ದಿನ ಹಿಂದುಗಳು ಮುಸ್ಲೀಮರೊಂದಿಗೆ ಶಾಮೀಲಾಗಿ ಭಕ್ತಿ ಭಾವಾವೇಶದಿಂದ ಹರಕೆ ಸಲ್ಲಿಸುವುದನ್ನು ನೋಡಿದಾಗ ಮೈಮನ ಪುಳಕಿತವಾಗದಿರವು.

ಮುಳುಬಾಗಿಲ ಪ್ರಾಂತದ ಹ ಬಾಬಾ ಹೈದರಲಿ ಶಾ ಅವರ ಉರುಸಿನಲ್ಲಿ ಪ್ರದರ್ಶನಗೊಳ್ಳುವ ಕತ್ತಿವರಸೆ, ದೊಣ್ಣೆವರಸೆ, ಕುಸ್ತಿ, ಕವ್ವಾಲಿ ಕಾರ್ಯಕ್ರಮಗಳು ಕೋಮು ಸಾಮರಸ್ಯದ ಪ್ರತೀಕಗಳಾಗಿವೆ. ಗ್ಯಾರವಿ ತಿಂಗಳಿನಲ್ಲಿ ನಡೆಯುವ ಹ ಮೆಹಬೂಬ ಸುಬಹಾನಿಯವರ ಉರುಸಿನಲ್ಲಿ ಜನಪದ ಕಲೆಗಳ ಮಹಾಪೂರವೇ ಹರಿದುಬರುವುದನ್ನು ನೋಡಬಹುದು. ರಿವಾಯಿತ ಪದ ಮತ್ತು ಹೆಜ್ಜೆ ಕುಣಿತ ಸ್ಪರ್ಧೆಗಳು ಹಿಂದೂ ಮುಸ್ಲೀಮರನ್ನು ಒಂದುಗೂಡಿಸುವ ಪ್ರಮುಖ ಕೊಂಡಿಯಾಗಿವೆ.



ಲಕ್ಷ್ಮೀಶ್ವರದ ದೂಧ ಪೀರಾರ ಉರುಸಿನಲ್ಲಿ ಹೊರಡುವ ಸಂದಲ್ ಮೆರವಣಿಗೆ ಹಿಂದೂ ಬಾಂಧವರ ಮನೆಯಿಂದ ಪ್ರಾರಂಭವಾಗುವುದು ಭಾವೈಕ್ಯದ ಪ್ರತೀಕವಾಗಿದೆ. ಇಳಕಲ್ಲಿನ ಮುರ್ತುಜಾ ಖಾದ್ರಿಯವರ ಉರುಸಿಗೆ ಸೇರುವ ಮುರ್ನಾಲ್ಕು ಲಕ್ಷ ಜನರಲ್ಲಿ ಹಿಂದುಗಳ ಸಂಖ್ಯೆ ಹೆಚ್ಚಿನದಾಗಿದೆ. ಉರುಸು ನಡೆಸುವ ದರ್ಗಾ ಸಮಿತಿಯ ಅಧ್ಯಕ್ಷರು, ಸದಸ್ಯರು, ಹಿಂದೂಗಳೇ ಆಗಿರುವುದು ಮತ್ತು ಉರುಸಿನ ದಿನ ಸಲ್ಲಿಸುವ ಗಂಧ ಪುಷ್ಪಾದಿಗಳ ಸೇವೆಯೂ ಗೌಡ, ಕುಲಕರ್ಣಿ, ಚವ್ಹಾಣ ಮನೆತನದವರದಾಗಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಯಮನೂರಿನ ಚಾಂಗದೇವರ ಜಾತ್ರೆ, ಶಿರಹಟ್ಟಿಯ ಫಕೀರಸ್ವಾಮಿ ಜಾತ್ರೆ, ಗುಲಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ತಿಂಥಿಣಿಯ ಮೋನಪ್ಪಯ್ಯನ ಜಾತ್ರೆ ಮತ್ತು ಬೆಳಗಾಂವ

©KTBS Not to be republished

ಜಿಲ್ಲೆಯ ಗೋಕಾಕ ತಾಲೂಕಿನ ಸಾವಳಗಿ ಜಾತ್ರೆ ಮುಂತಾದವು ಹಿಂದೂಗಳಿಗೆ ತಮ್ಮ ಬದುಕಿನ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಪುಣ್ಯಕ್ಷೇತ್ರಗಳಾಗಿರುವಂತೆ ಮುಸ್ಲೀಮರಿಗೂ ಆಗಿರುವುದು ಇವುಗಳ ವೈಶಿಷ್ಟ್ಯ.

ಹೀಗೆ ಹಿಂದೂ–ಮುಸ್ಲೀಮರನ್ನು ಒಂದುಗೂಡಿಸುವ, ಮತೀಯ ಸಾಮರಸ್ಯವನ್ನು ಗಟ್ಟಿಗೊಳಿಸುವ, ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಬರುವ ಉರುಸುಗಳು ಆದರ್ಶ ಭಾರತದ ಏಳಿಗೆಗೆ ಅನಿವಾರ್ಯವಾದ ಮುಖ್ಯ ಸೂತ್ರಗಳಾಗಿವೆಯೆಂದರೆ ಚಿನ್ನಕ್ಕೆ ಕುಂದಣ ಕೂಡಿಸಿದಂತಾಗುತ್ತದೆ.

* * * *

## ಕೃತಿಕಾರರ ಪರಿಚಯ :



**ದಸ್ತಗೀರ ಅಲ್ಲೀಭಾಯಿ** ಅವರು ಧಾರವಾಡ ಜಿಲ್ಲಾ, ನವಲಗುಂದ ತಾಲ್ಲೂಕು, ಸೊಟಕನಾಳ ಗ್ರಾಮದಲ್ಲಿ ೧೯೫೨ ರಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ದಸ್ತಗೀರಸಾಬ ಅಬ್ದುಲ್ ಅಜೀಜಸಾಬ ಅಲ್ಲೀಭಾಯಿ. ಕನ್ನಡದಲ್ಲಿ ಎಂ.ಎ. ಹಾಗೂ ಪಿಹೆಚ್.ಡಿ. ಪದವಿಯನ್ನು ಪಡೆದ ಪ್ರತಿಭಾನ್ವಿತರು. ಕನ್ನಡ ಪ್ರಾಧ್ಯಾಪಕರಾಗಿ, ಸಂಶೋಧನಾ ಮಾರ್ಗದರ್ಶಕರಾಗಿ ಅನನ್ಯ ಕೆಲಸ ಮಾಡಿದ್ದಾರೆ.

ಇವರು 'ಸಕಾಲಿಕ', 'ನೆನೆ ನೆನೆದು', 'ದಣಿವು ಕಾಣದ ಪದಗಳು', '**ಮೊ**ಹರಂ ಪದಗಳು', 'ಹೆಜ್ಜೆ ಪದಗಳು', 'ಕಥಾ ಸಂಚಯ' 'ಉತ್ತರ ಕರ್ನಾಟಕದ ಜನಪದ ಒಡಪುಗಳು' ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರ ಕೃತಿಗಳನ್ನು ಪದವಿಗಳಿಗೆ ಪಠ್ಯವಾಗಿ ಇಡಲಾಗಿದೆ. ಪ್ರಸ್ತುತ ಗದ್ಯ ಭಾಗವನ್ನು **'ಮುಸ್ಲೀಮರ ಹಬ್ಬ ಮತ್ತು ಉರುಸುಗಳು'** ಕೃತಿಯಿಂದ ಆರಿಸಲಾಗಿದೆ.

## ಟಿಪ್ಪಣಿಗಳು :

**೧. ಉರುಸು** : ಮಹಮ್ಮದೀಯ ಸಾಧುಗಳ ಪುಣ್ಯತಿಥಿ ಹಾಗೂ ಜಾತ್ರೆ. ಕರ್ನಾಟಕದ ಪ್ರತಿಯೊಂದು ದರ್ಗಾ (ಗೋರಿ) ಗಳಲ್ಲಿ ಧಾರ್ಮಿಕ ಜಾತ್ರೆ ನಡೆಯುತ್ತದೆ. ಇದು ಎಲ್ಲಾ ಮುಸ್ಲಿಂ ಬಾಂಧವರನ್ನು ಒಗ್ಗೂಡಿಸುವ ಉತ್ಸವವಾಗಿದೆ.

**೨. ದರಗಾ** : ಮುಸಲ್ಮಾನ ಸಂತರ ಗೋರಿ ಇರುವ ಪವಿತ್ರ ಸ್ಥಳವಾಗಿದೆ. ಇಲ್ಲಿ ಪ್ರತಿದಿನ ಫಾತೆಹಾ (ಪೂಜೆ) ನಡೆಯುತ್ತದೆ. ಇಲ್ಲಿಗೆ ಅನ್ಯ ಧರ್ಮೀಯರು ತಮ್ಮ ಕಷ್ಟಪರಿಹಾರಗಳಿಗೆ ಹರಕೆ ತೀರಿಸಲು ಬರುತ್ತಾರೆ.

©KTBS Not to be republished

೩. ಕವ್ವಾಲಿ : ಮುಸ್ಲಿಂ ಧರ್ಮದಲ್ಲಿ ದರಗಾಗಳ ಮುಂದೆ ನಡೆಸುವ ಸಾಂಸ್ಕೃತಿಕ ಕಾರ್ಯಕ್ರಮವಾಗಿದೆ. ಮಹಮ್ಮದೀಯ ಸಾಧು ಸಂತರ ಗೋರಿಗಳ ಎದುರು ಗಂಧದ ಮೆರವಣಿಗೆ ಹೋಗುವ ಸಂದರ್ಭದಲ್ಲಿ ಅತ್ಯಂತ ಭಕ್ತಿ ಭಾವದಿಂದ ಹಾಡುವ ಗೀತೆಗಳು.

## ಅಭ್ಯಾಸ

## I. ಪದಗಳ ಅರ್ಥ :

**ಉರುಸು** – ಮಹಮ್ಮದೀಯ ಸಾಧುಗಳ ಪುಣ್ಯತಿಥಿ.

**ಕೂಲಂಕಷ** – ಸಮಗ್ರವಾದ

**ಕುಂದಣ** – ಚಿನ್ನದಲ್ಲಿ ಹರಳು ಕೂಡಿಸುವ ಕೆಲಸ.

**ಝಿಯಾರತ್** – ದರ್ಶನ; ಭೇಟಿ.

**ದರಗಾ** – ಮುಸಲ್ಮಾನ ಸಂತರ ಗೋರಿ ಇರುವ ಪವಿತ್ರ ಸ್ಥಳ.

**ಭಾವೈಕ್ಯತೆ** – ಒಂದೇ ಭಾವನೆ

**ಮಷಾಲ್** – ದೀವಟಿಗೆ; ಪಂಜು.

**ಶಾಮೀಲು** – ಒಂದಾಗು

**ಕವ್ವಾಲಿ** – ಮಹ್ಮದೀಯ ಸಾಧುಗಳ ಮೇಲೆ ಹಾಡುವ ಭಕ್ತಿ ಹಾಗೂ ಶೌರ್ಯಗೀತೆಗಳು.

**ಗ್ಯಾರವಿ** – ಇಸ್ಲಾಂ ಮಾಸದ ಹೆಸರು.

**ತಬರ್ರುಕ್** – ಪ್ರಸಾದ

**ಪುರಾವೆ** – ಸಾಕ್ಷಿ; ರುಜುವಾತು.

**ಫಾತೆಹಾ** – ಮುಸಲ್ಮಾನ ಸಂತರ ಅನುಗ್ರಹಕ್ಕೆ ನಡೆಸುವ ಪೂಜೆ.

**ಮಹಾಪೂರ** – ದೊಡ್ಡ ಪ್ರವಾಹ

**ಸಂದಲ್** – ಶ್ರೀಗಂಧದ ಮೆರವಣಿಗೆ

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಉರುಸುಗಳಲ್ಲಿ ಯಾವ ಧಾರ್ಮಿಕ ಸಂಸ್ಕೃತಿಯ ಮಿಲನವಿದೆ?

೨. ಉರುಸುಗಳು ಯಾವುದರ ಹೆಗ್ಗುರುತು?

೩. ಅಜ್ಮೀರ್ ಮತ್ತು ದಿಲ್ಲಿಯ ದರಗಾದ ವಿಶೇಷತೆಗಳೇನು?

೪. ಮಕಾನಪುರದ ಉರುಸಿನಲ್ಲಿ ಕೆಂಡ ತುಳಿಯುವ ಸಂಪ್ರದಾಯ ಹೇಗೆ ಆಚರಣೆಗೆ ಬಂದಿತು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಮುಂಬಯಿ ಹಾಜಿಮಲಂಗ ದರಗಾದಲ್ಲಿ ಹಿಂದೂ ಮುಸ್ಲೀಂ ಸೌಹಾರ್ದತೆ ಯಾವ ರೀತಿ ಇದೆ?

೨. ಗುಲಬರ್ಗಾದ ಖ್ವಾಜಾ ಬಂದಾನವಾಜರ ದರಗಾದ ವಿಶೇಷತೆಗಳೇನು?

೩. ಮುಳುಬಾಗಿಲ ಪ್ರಾಂತದ ಉರುಸಿನಲ್ಲಿ ಪ್ರದರ್ಶನಗೊಳ್ಳುವ ಕಾರ್ಯಕ್ರಮಗಳಾವುವು?

೪. ಇಳಕಲ್ಲಿನ ಮುರ್ತುಜಾ ಖಾದ್ರಿಯವರ ಉರುಸಿನಲ್ಲಿ ಹಿಂದೂ ಭಕ್ತರಿಗೆ ಏನೆಲ್ಲಾ ಗೌರವದ ಸ್ಥಾನಗಳು ಲಭಿಸಿವೆ?

©KTBS Not to be republished

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಉರುಸುಗಳು ಹಿಂದೂ ಹಾಗೂ ಮುಸಲ್ಮಾನರ ಭಾವೈಕ್ಯತೆಯ ಸಂಕೇತವಾಗಿವೆ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿ.

೨. ಹಿಂದುಗಳೊಂದಿಗೆ ಮುಸ್ಲಿಮರೂ ಸೇರಿಕೊಂಡು ಆಚರಿಸುವ ಉತ್ತರ ಕರ್ನಾಟಕದ ಜಾತ್ರೆಗಳಾವುವು? ಮತ್ತು ಅವುಗಳ ವಿಶೇಷತೆಗಳೇನು?

**ಈ) ಸಂದರ್ಭದೊಡನೆ ವಿವರಿಸಿರಿ.**

೧. ಸಂದಲ್ ಮೆರವಣಿಗೆಯಲ್ಲಿ ಮಷಾಲ್ ಹಿಡಿಯುವ ಹಕ್ಕು ಹಿಂದು ಭಕ್ತರದಾಗಿದೆ.

೨. ಚಿನ್ನಕ್ಕೆ ಕುಂದಣ ಕೂಡಿಸಿದಂತಾಗುತ್ತದೆ.

## III. ಭಾಷಾಭ್ಯಾಸ :

**ಅ. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಿರಿ.**

ಭಾವೈಕ್ಯ, ಲಕ್ಷ್ಮೀಶ್ವರ, ಒಂದುಗೂಡಿಸು, ಮೂರ್ನಾಲ್ಕು.

**ಆ. ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಧರ್ಮ, ಉತ್ಸಾಹ, ಗೋಚರ, ಪುಣ್ಯ.

**ಇ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ಭಾವೈಕ್ಯತೆ, ಪುಳಕಿತ, ಪುನೀತ, ಹೆಗ್ಗುರುತು.

## IV. ಸೈದ್ಧಾಂತಿಕ ವ್ಯಾಕರಣ :

### ಕ್ರಿಯಾಪದ :

ಕ್ರಿಯಾಪದಗಳು ಭಾಷೆಯಲ್ಲಿ ಪ್ರಮುಖ ಸ್ಥಾನ ಪಡೆಯುತ್ತವೆ. ಕರ್ತೃವಿನ ಕಾರ್ಯ ತಿಳಿಸುವುದು ಕ್ರಿಯಾಪದ. ಅಂದರೆ ಒಂದು ಕ್ರಿಯೆಯ ಪೂರ್ಣ ಅರ್ಥವನ್ನು ಕೊಡುವ ಪದಗಳನ್ನು 'ಕ್ರಿಯಾಪದ' ಎಂದು ಕರೆಯಲಾಗುತ್ತದೆ. ಕ್ರಿಯಾಪದವು ಕರ್ತೃವಿನ ಲಿಂಗ ಮತ್ತು ವಚನಗಳಿಗೆ ಅನುಗುಣವಾಗಿ ವರ್ತಿಸುತ್ತದೆ.

**ಉದಾ :** ಮಾಡುತ್ತಾನೆ, ಮಾಡಿದನು, ಮಾಡುವನು, ಮಾಡಲಿ, ಮಾಡನು – ಈ ಎಲ್ಲಾ ಕ್ರಿಯಾಪದಗಳ ಮೂಲರೂಪ 'ಮಾಡು' ಆಗಿದೆ. ಇಂಥ ಕ್ರಿಯಾಪದದ ಮೂಲರೂಪವನ್ನು **'ಕ್ರಿಯಾಪ್ರಕೃತಿ'** ಅಥವಾ **'ಧಾತು'** ಎನ್ನುವರು. ಧಾತುಗಳಲ್ಲಿ ಎರಡು ವಿಧ. ಅವುಗಳೆಂದರೆ,

©KTBS Not to be republished

೧. **ಮೂಲಧಾತುಗಳು** : ಮಾಡು, ತಿನ್ನು, ಹೋಗು, ಬರು, ಓದು, ಓಡು, ಮುಚ್ಚು, ನೋಡು, ಒಪ್ಪು, ಏರು, ಇಳಿ, ಬೀಳು, ಬರೆ, ಹಿಗ್ಗು, ತೂಗು, ಮಲಗು, ಏಳು, ನಡೆ, ಈಜು, ಮುಚ್ಚು, ಬೆಳಗು – ಇತ್ಯಾದಿ.

೨. **ಪ್ರತ್ಯಯಾಂತ ಧಾತು ಅಥವಾ ಸಾಧಿತಧಾತುಗಳು :** ನಾಮಪ್ರಕೃತಿ ಹಾಗೂ ಅನುಕರಣ ಶಬ್ದಗಳ ಮೇಲೆ 'ಇಸು' ಪ್ರತ್ಯಯ ಸೇರಿದಾಗ ಅವು ಪ್ರತ್ಯಯಾಂತ ಧಾತು ಅಥವಾ ಸಾಧಿತ ಧಾತು ಎಂದು ಕರೆಸಿಕೊಳ್ಳುತ್ತವೆ.

| ಉದಾ: | **ಪ್ರಕೃತಿ** | + | **'ಇಸು' ಪ್ರತ್ಯಯ** | = | **ಸಾಧಿತ ಧಾತು** | – | **ಕ್ರಿಯಾಪದ** |
|---|---|---|---|---|---|---|---|
| | ಕನ್ನಡ | + | ಇಸು | = | ಕನ್ನಡಿಸು | – | ಕನ್ನಡಿಸಿದನು. |
| | ಧಗಧಗ | + | ಇಸು | = | ಧಗಧಗಿಸು | – | ಧಗಧಗಿಸುತ್ತದೆ. |
| | ದುಃಖ | + | ಇಸು | = | ದುಃಖಿಸು | – | ದುಃಖಿಸುವನು. |

**ಸಕರ್ಮಕ ಮತ್ತು ಅಕರ್ಮಕ ಧಾತುಗಳು :**

ಗಣೇಶನು ಹಣ್ಣನ್ನು ತಿಂದನು. – ಈ ವಾಕ್ಯದಲ್ಲಿ 'ಗಣೇಶನು' ಎಂಬುದು 'ಕರ್ತೃಪದ', 'ಹಣ್ಣನ್ನು' ಎಂಬುದು 'ಕರ್ಮಪದ', 'ತಿಂದನು' ಎಂಬುದು 'ಕ್ರಿಯಾಪದ' ಆಗಿದೆ. ಗಣೇಶನು ಏನನ್ನು ತಿಂದನು? ಎಂದು ಪ್ರಶ್ನಿಸಿದರೆ 'ಹಣ್ಣನ್ನು' ಎಂಬ ಉತ್ತರ ಬರುತ್ತದೆ. ಹೀಗೆ ಕ್ರಿಯಾಪದವನ್ನು ಆಧಾರವಾಗಿಟ್ಟುಕೊಂಡು ಏನನ್ನು ಎಂದು ಪ್ರಶ್ನಿಸಿದಾಗ ಕರ್ಮಪದ ಬರಬೇಕು. ಆದರೆ ಕೆಲವು ಕ್ರಿಯಾಪದಗಳು ಕರ್ಮಪದ ಇಲ್ಲದೆ ಬಳಕೆಯಾಗುತ್ತವೆ. ಉದಾ : ರಹೀಮ ಓಡಿದನು. ಇಲ್ಲಿ ರಹೀಮ ಏನನ್ನು ಓಡಿದನು ಎಂದು ಪ್ರಶ್ನಿಸಿದರೆ ಉತ್ತರ ಸಿಗುವುದಿಲ್ಲ. ಹೀಗಾಗಿ, ಕರ್ಮಪದವನ್ನು ಅಪೇಕ್ಷಿಸುವ ಧಾತುಗಳನ್ನು **'ಸಕರ್ಮಕ ಧಾತುಗಳು'** ಎಂತಲೂ, ಕರ್ಮಪದವನ್ನು ಅಪೇಕ್ಷಿಸದ ಧಾತುಗಳನ್ನು **'ಅಕರ್ಮಕ ಧಾತುಗಳು'** ಎಂತಲೂ ಕರೆಯಲಾಗುತ್ತದೆ. ಈ ಕೆಳಗಿನ ಉದಾಹರಣೆಗಳನ್ನು ಗಮನಿಸಿ.

೧. **ಸಕರ್ಮಕ ಧಾತುಗಳು** : ರಕ್ಷಿಸು, ಕಟ್ಟು, ಓದು, ಮಾಡು, ಉಣ್ಣು, ಕತ್ತರಿಸು, ತೆರೆ, ಸೇರು, ಬಿಡು – ಈ ಎಲ್ಲಾ ಧಾತುಗಳ ಮುಂದೆ 'ಏನನ್ನು' ಎಂದು ಪ್ರಶ್ನೆ ಹಾಕಿಕೊಂಡರೆ ಯಾವುದಾದರೊಂದು ಉತ್ತರ (ಕರ್ಮಪದ) ಸಿಗುತ್ತದೆ.

೨. **ಅಕರ್ಮಕ ಧಾತುಗಳು** : ಮಲಗು, ಓಡು, ಹುಟ್ಟು, ಹೋಗು, ಏಳು, ಸೋರು, ನಾಚು – ಈ ಎಲ್ಲಾ ಧಾತುಗಳ ಮುಂದೆ 'ಏನನ್ನು' ಎಂದು ಪ್ರಶ್ನೆ ಹಾಕಿಕೊಂಡರೆ ಕರ್ಮಪದ ಇರುವುದಿಲ್ಲ.

ಕ್ರಿಯಾಪದಗಳಲ್ಲಿ ಇನ್ನೂ ಹಲವು ರೂಪಗಳಿವೆ. ಅವುಗಳನ್ನು ಈಗ ತಿಳಿಯೋಣ.

©KTBS Not to be republished

**೧. ವಿಧ್ಯರ್ಥಕ (ವಿಧಿ + ಅರ್ಥ) ಕ್ರಿಯಾಪದ :**

ಆಶೀರ್ವಾದ, ಅಪ್ಪಣೆ, ಆಜ್ಞೆ, ಹಾರೈಕೆ ಇವುಗಳನ್ನು ತೋರುವಾಗ ಧಾತುಗಳಿಗೆ ಆಖ್ಯಾತ ಪ್ರತ್ಯಯಗಳು ಸೇರಿ ವಿಧ್ಯರ್ಥಕ ಕ್ರಿಯಾಪದಗಳು ಆಗುತ್ತವೆ.

ಉದಾ : ದೇವರು ನಿನಗೆ ಒಳ್ಳೆಯದು **ಮಾಡಲಿ.**
ಲಕ್ಷ್ಮೀ ಪಾಠವನ್ನು ಗಟ್ಟಿಯಾಗಿ **ಓದಲಿ.**
ಅವರಿಗೆ **ಜಯವಾಗಲಿ.**
ಅವನು ಹಾಳಾಗಿ **ಹೋಗಲಿ.**

(ದಪ್ಪಕ್ಷರಗಳಲ್ಲಿ ಅಡಿಗೆರೆದಿರುವ ಪದಗಳು ವಿಧ್ಯರ್ಥಕ ಕ್ರಿಯಾಪದಗಳು.)

**೨. ನಿಷೇಧಾರ್ಥಕ ಕ್ರಿಯಾಪದಗಳು :**

ಕ್ರಿಯೆಯು ನಡೆಯಲಿಲ್ಲ ಎಂಬರ್ಥ ತೋರುವಾಗ ಧಾತುಗಳ ಮೇಲೆ ಆಖ್ಯಾತ ಪ್ರತ್ಯಯಗಳು ಸೇರಿದಾಗ ನಿಷೇಧಾರ್ಥಕ ಕ್ರಿಯಾಪದಗಳು ಉಂಟಾಗುತ್ತವೆ.

ಉದಾ : ಅವನು ಅನ್ನವನ್ನು **ತಿನ್ನನು.**
ಅವರು ಊರಿಂದ ಇಂದು **ಬಾರರು.**
ಅವಳು ನನ್ನ ಮಾತು **ಕೇಳಳು.**

(ದಪ್ಪಕ್ಷರಗಳಲ್ಲಿ ಅಡಿಗೆರೆದಿರುವ ಪದಗಳು ನಿಷೇಧಾರ್ಥಕ ಕ್ರಿಯಾಪದಗಳು.)

**೩. ಸಂಭಾವನಾರ್ಥಕ ಕ್ರಿಯಾಪದಗಳು :**

ಕ್ರಿಯೆಯು ನಡೆಯುವಿಕೆಯಲ್ಲಿ 'ಸಂಶಯ' ಅಥವಾ 'ಊಹೆ' ತೋರುವಲ್ಲಿ ಧಾತುಗಳ ಮೇಲೆ ಆಖ್ಯಾತ ಪ್ರತ್ಯಯಗಳು ಸೇರಿದಾಗ ಸಂಭಾವನಾರ್ಥಕ ಕ್ರಿಯಾಪದಗಳೆನಿಸುತ್ತವೆ.

ಉದಾ : ಅವನು ನಾಳೆ **ಬಂದಾನು.**
ಚಿನ್ನದ ಬೆಲೆ ಮೇಲಕ್ಕೆ **ಏರೀತು**
ಅನ್ನವನ್ನು ಆತ **ತಿಂದಾನು.**
ಅವನು ಪರೀಕ್ಷೆಯಲ್ಲಿ ಪಾಸು **ಆದಾನು.**

(ದಪ್ಪಕ್ಷರಗಳಲ್ಲಿ ಅಡಿಗೆರೆದಿರುವ ಪದಗಳು ಸಂಭಾವನಾರ್ಥಕ ಕ್ರಿಯಾಪದಗಳು.)

## V. ಚಟುವಟಿಕೆಗಳು :

೧. ನಿಮ್ಮ ಊರಿನ ಹತ್ತಿರವಿರುವ ದರಗಾಗಳಿಗೆ ಭೇಟಿನೀಡಿ, ಅಲ್ಲಿಯ ಆಚರಣೆಗಳನ್ನು ತಿಳಿಯಿರಿ.
೨. ಸ್ಥಳೀಯ ಪ್ರದೇಶಗಳಲ್ಲಿ ನಡೆಯುವ ಉರುಸಿನ ವಿಶೇಷತೆಗಳನ್ನು ಅಧ್ಯಾಪಕರೊಂದಿಗೆ ಚರ್ಚಿಸಿ.
೩. ಹಿಂದೂ–ಮುಸಲ್ಮಾನರು ಸೇರಿ ಆಚರಿಸುವ ಆಚರಣೆಗಳ ಚಿತ್ರಗಳನ್ನು ಸಂಗ್ರಹಿಸಿ ಪ್ರದರ್ಶಿಸಿ.

©KTBS Not to be republished

# ೬. ಪಾಂಡಿತ್ಯದ ಡಿ.ಎಲ್. ನರಸಿಂಹಾಚಾರ್

– ಎಂ. ಎಂ. ಕಲಬುರ್ಗಿ

**ಪಾಠ ಪ್ರವೇಶ :** 'ವಿದ್ವಾನ್ ಸರ್ವತ್ರ ಪೂಜ್ಯತೆ' ಎಂಬಂತೆ ಪಾಂಡಿತ್ಯಕ್ಕೆ ವ್ಯಾಪಕ ಪುರಸ್ಕಾರವಿದೆ. ವಿದ್ವತ್ತನ್ನು ಗಳಿಸಲು ನಿರಂತರವಾದ ಆಸಕ್ತಿ, ತಾಳ್ಮೆ ಮತ್ತು ಪರಿಶ್ರಮಗಳು ಅಗತ್ಯ. ಪಾಂಡಿತ್ಯಗಳಿಕೆಯ ಹಾದಿಯಲ್ಲಿನ ಪಯಣ ದೀರ್ಘವಾದುದು. ಇಲ್ಲಿ ನಡೆದಷ್ಟು ದಾರಿಯಿದೆ, ಪಡೆದಷ್ಟು ಭಾಗ್ಯವಿದೆ.

ನಮ್ಮ ನಾಡಿನ ಅಗ್ರಗಣ್ಯ ವಿದ್ವಾಂಸರಲ್ಲಿ ಡಾ. ಡಿ.ಎಲ್. ನರಸಿಂಹಾಚಾರ್ಯರೂ ಒಬ್ಬರು. ಪಾಂಡಿತ್ಯಕ್ಕೆ ಮತ್ತೊಂದು ಹೆಸರೇ ಡಿ.ಎಲ್.ಎನ್. ಇವರ ನಿಷ್ಕಲ್ಮಶ ಮನಸ್ಸು, ಪಂಡಿತ ಪರಂಪರೆಯನ್ನು ರೂಪಿಸಿದ ಬಗೆ, ವೃತ್ತಿನಿಷ್ಠೆ ಮತ್ತು ಕನ್ನಡ ಸಾಹಿತ್ಯಕ್ಕೆ ಇವರು ಸಲ್ಲಿಸಿದ ಉತ್ಕೃಷ್ಟ ಸೇವೆಯನ್ನು ಲೇಖಕರು ಪರಿಚಯಿಸಿದ್ದಾರೆ.

©KTBS Not to be republished

ಡಿ.ಎಲ್.ಎನ್. ಅವರನ್ನು ನೋಡಿ, ತೀ.ನಂ.ಶ್ರೀ ಅವರ ಮರಣ ದುಃಖವನ್ನು ಮರೆಯುತ್ತಿದ್ದ ಕನ್ನಡ ಸಾಹಿತ್ಯ ಪ್ರಪಂಚ ೦೮.೦೫.೭೧ ರಂದು ಬಂದ ಡಿ.ಎಲ್.ಎನ್. ಅವರ ನಿಧನ ವಾರ್ತೆಯಿಂದ ನಿಜಕ್ಕೂ ತತ್ತರಿಸಿ ಹೋಗಿದೆ.



ಬಿ.ಎಂ.ಶ್ರೀ., ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿಗಳ ಕಮ್ಮಟದಲ್ಲಿ ರೂಪುಗೊಂಡು ಕುವೆಂಪು, ಡಿ.ಕೆ.ಭೀಮಸೇನರಾವ್, ಕೆ.ವೆಂಕಟರಾಮಪ್ಪ, ಎನ್. ಅನಂತರಂಗಾಚಾರ್ ಮೊದಲಾದವರ ಜತೆಯಲ್ಲಿ ವಿದ್ಯಾರ್ಥಿ ಜೀವನವನ್ನು ಕಳೆದು, ಸಂಶೋಧನ ವಿದ್ಯಾರ್ಥಿಯೆಂದು, ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ದ ಕನ್ನಡ ಪಂಡಿತರೆಂದು, ಮೈಸೂರಿನ ಮಹಾರಾಜಾ ಕಾಲೇಜು, ಯುವರಾಜಾ ಕಾಲೇಜು, ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರೆಂದು, ಪರಿಷತ್ತು ಕೈಕೊಂಡ ನಿಘಂಟುವಿನ ಸಂಪಾದಕರೆಂದು ಬಹುಮುಖವಾಗಿ ದುಡಿದವರು ಡಿ.ಎಲ್. ಎನ್. ತಮ್ಮ ಜೀವಿತದ ಅವಧಿಯಲ್ಲಿ ಕನ್ನಡ, ಇಂಗ್ಲಿಷ್, ಸಂಸ್ಕೃತ, ತಮಿಳು, ತೆಲುಗು, ಪ್ರಾಕೃತ ಮೊದಲಾದ ಭಾಷೆಗಳನ್ನು ಕೈವರ್ತಿಸಿಕೊಂಡು, ಹಲವು ಶಾಸ್ತ್ರ – ಹಲವು ಸಾಹಿತ್ಯಗಳ ಪರಿವಾರವನ್ನು ಕಟ್ಟಿಕೊಂಡು ಕನ್ನಡದ ಕಣದಲ್ಲಿ ಇವರು ಮನದಣಿಯೆ ದುಡಿದರು. ಜಾಗತಿಕ ವಿದ್ವಾಂಸರ ಸಾಲಿನಲ್ಲಿ ನಿಲ್ಲಬಹುದಾದ ವಿದ್ವತ್ತನ್ನು ಸಂಪಾದಿಸಿದರು.

**ಕನ್ನಡದ ದಿಗ್ಗಜ:**

ಅಧಿಕಾರದ ಬಲ, ಸ್ವಪಕ್ಷಗಳ ಬೆಂಬಲ, ದುಡ್ಡಿನ ದೌಲತ್ತು, ಮೋಹಕ ಮಾತುಗಾರಿಕೆ ಇವಾವೂ ಇಲ್ಲದೆ ಕೇವಲ ಪಾಂಡಿತ್ಯದ ಸಂಪತ್ತಿನಿಂದ ಜನತೆಯ ಗಮನ, ಗೌರವಗಳನ್ನು ಗಳಿಸಿದವರು ಡಿ.ಎಲ್.ಎನ್.

"ಡಿ.ಎಲ್.ಎನ್. ಎಂದರೆ ಪಾಂಡಿತ್ಯ, ಪಾಂಡಿತ್ಯವೆಂದರೆ ಡಿ.ಎಲ್.ಎನ್. ಹಳಗನ್ನಡ ಭಾಷೆ ಸಾಹಿತ್ಯದ ವಿಷಯಕ್ಕಂತೂ ಹಲವರು ಹೇಳುವಂತೆ ನಾನೂ ಬಲ್ಲಂತೆ ಅವರೊಂದು ಜಂಗಮ ಬೃಹತ್ಕೋಶ! ಹಳಗನ್ನಡದಲ್ಲಿ ಅವರಿಗಿಂತಲೂ ನಿಷ್ಣಾತರಾದ ವಿದ್ವಾಂಸರನ್ನು ಸದ್ಯದಲ್ಲಿ ಕಾಣುವುದು ಅಶಕ್ಯವೆಂದೇ ನನ್ನ ಭಾವನೆ" ಕನ್ನಡದ ಇನ್ನೊಂದು ದಿಗ್ಗಜ ತೀ.ನಂ.ಶ್ರೀ. ಹೇಳಿದ ಮಾತಿದು. ಇದು ಪ್ರಶಂಸೆಯಲ್ಲ, ಸರಿಯಾದ ವಿಮರ್ಶೆಯೆಂದು ನನ್ನಂತೆ ಎಲ್ಲರ ಅಭಿಪ್ರಾಯ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಮುಖ್ಯಸ್ಥ ಪೀಠವನ್ನೇರುವ ಭಾಗ್ಯ ಅವರದಾಗದಿದ್ದರೂ ಪೀಠವೇರಿದವರನ್ನೂ, ಪೀಠ ಏರಬೇಕಾದವರನ್ನೂ ಸಿದ್ಧಗೊಳಿಸಿದವರು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪಾಂಡಿತ್ಯದ ಭದ್ರಬುನಾದಿ ಹಾಕಿದವರು ಡಿ.ಎಲ್.ಎನ್. ೧೧ ಗ್ರಂಥ, ೭ ಮುನ್ನುಡಿ, ೧೨ ವಿಮರ್ಶಾ ಲೇಖನ, ೭೦ ಇತರ ಲೇಖನ – ಇದು ಡಿ.ಎಲ್.ಎನ್. ಸಾಹಿತ್ಯ ಸಂಪತ್ತು. ಅವರ ಈ ಕೃಷಿ ಮೊತ್ತದಲ್ಲಿ ಕಡಿಮೆಯೆಂದು ವಾದಿಸುವವರು ಸತ್ತ್ವದಲ್ಲಿ ಹಿರಿದೆಂದು ಒಪ್ಪಿಕೊಳ್ಳಲೇಬೇಕು. ಇತ್ತೀಚೆಗೆ ಬಂದ ನೂರಾರು ಪುಸ್ತಕಗಳು, ಅವರು ವರ್ಗದಲ್ಲಿ ನೀಡಿದ ಉಪನ್ಯಾಸದ ವಿಸ್ತೃತ ರೂಪಗಳೆಂದು ಅವರ ಶಿಷ್ಯರೇ ಅಭಿಮಾನಪಟ್ಟು ಹೇಳುವುದರಿಂದ ಅವರ ಸಾಹಿತ್ಯ ಕೃಷಿಯನ್ನು ಪುಸ್ತಕ ಸಂಖ್ಯೆಯಲ್ಲಿ ನೋಡದೆ, ಶಿಷ್ಯ ಸಂಖ್ಯೆಯಲ್ಲಿ ನೋಡುವುದು ನ್ಯಾಯವೆಂದು ತೋರುತ್ತದೆ. ಹಾಗೆ ನೋಡಿದರೆ, ಒಂದು ಇಡೀ ಪುಸ್ತಕದಿಂದ ಸಾಧ್ಯವಾಗದ ಬೆಳಕು ಅವರ ಒಂದು ಲೇಖನ ಒದಗಿಸುವುದರಿಂದ ಅವರ ಕೃಷಿ ಸಣ್ಣದಲ್ಲವೆಂದೇ ನನ್ನ ಭಾವನೆ.

**ವ್ಯಕ್ತಿತ್ವ ವಿಶೇಷ:**

ಡಿ.ಎಲ್.ಎನ್. ಅವರ ವ್ಯಕ್ತಿ ವಿಶೇಷತೆಯನ್ನು ಸಂಪಾದಕ, ಶಾಸ್ತ್ರಜ್ಞ, ಸಂಶೋಧಕ, ವಿಮರ್ಶಕ, ಪ್ರಾಧ್ಯಾಪಕ ಎಂದು ಬಿಡಿಸಿ ಹೇಳಬಹುದು.

ವಡ್ಡಾರಾಧನೆ ಅವರ ಸಂಪಾದನ ಸಾಮರ್ಥ್ಯಕ್ಕೆ ಒಂದು ಪರಮ ನಿದರ್ಶನ. ಅದರೊಂದಿಗೆ ನಡೆಸಿದ ೪೦ ವರ್ಷಗಳ ಅನುಸಂಧಾನದಿಂದಾಗಿ ಇತ್ತೀಚೆಗೆ ಸುದೀರ್ಘ ಪ್ರಸ್ತಾವನೆ, ಪರಿಪೂರ್ಣ ಪರಿಶಿಷ್ಟಗಳೊಂದಿಗೆ ಅದು ಮೊದಲಿನ ಮೂರುಪಟ್ಟು ಗಾತ್ರ ಪಡೆದು ಹೊರಬಂದಿತು. ಕನ್ನಡಕ್ಕೆ ಒಂದು ಅಪೂರ್ವ ಗದ್ಯ ಗ್ರಂಥ ಅಪೂರ್ವ ಶುದ್ಧಿಯಲ್ಲಿ ಲಭಿಸಿತು. ಈ ದಾರಿಯಲ್ಲಿ ಪಂಪರಾಮಾಯಣ ಸಂಗ್ರಹ, ಸುಕುಮಾರ ಚರಿತಂ, ಸಿದ್ಧರಾಮ ಚಾರಿತ್ರ ಮೊದಲಾದ ಗ್ರಂಥಗಳು ಪರಿಷ್ಕರಣ ಹೊಂದಿ ಪ್ರಕಟಗೊಂಡವು. ಈ ಸಂಸ್ಕರಣ ಪ್ರಸಂಗದಲ್ಲಿ ಅವರ ಬುದ್ಧಿ, ಮನಸ್ಸು ಯಾವ ರೀತಿ ದುಡಿಯುತ್ತಿದೆಯೆಂಬುದಕ್ಕೆ 'ಮಾನಸೋಲ್ಲಾಸದಲ್ಲಿ ಕನ್ನಡ ಛಂದಸ್ಸು' ಎಂಬ ಲೇಖನವನ್ನು ನೋಡಬೇಕು.

©KTBS Not to be republished

ಎಲ್ಲ ಕ್ಷೇತ್ರಗಳಲ್ಲಿಯೂ ಎದ್ದು ಕಾಣುವ ಡಿ.ಎಲ್.ಎನ್. ಅವರ ಶಾಸ್ತ್ರಮತಿ 'ಕನ್ನಡ ಗ್ರಂಥಸಂಪಾದನೆ' ಎಂಬ ಕೃತಿಯಲ್ಲಿ ಸಂಪೂರ್ಣ ಪ್ರಕಟಗೊಂಡಿದೆ. ಗ್ರಂಥ ಸಂಪಾದನೆಯ ವಿಧಾನಗಳನ್ನು ಕನ್ನಡಕ್ಕೆ ಅನ್ವಯಿಸಿ ಬರೆದ ಈ ಶಾಸ್ತ್ರಕೃತಿ ಕನ್ನಡದಲ್ಲಿ ಪ್ರಥಮ ಸಾಹಸ, ಪ್ರಥಮ ಸಾಧನೆ. ಅದರ ಪುಟಪುಟಗಳಲ್ಲಿ ಡಿ.ಎಲ್.ಎನ್. ಅವರ ಪ್ರಕಟಿತ, ಅಪ್ರಕಟಿತ ಕೃತಿಗಳ ಅಧ್ಯಯನದ ವ್ಯಾಪ್ತಿಯನ್ನು, ಸಾಹಿತ್ಯ ವ್ಯಾಸಂಗದ ಉದ್ದಗಲಗಳನ್ನು ಅರಿಯಬಹುದು.

ಸಂಶೋಧನೆ ಡಿ.ಎಲ್.ಎನ್. ಅವರ ಉಸಿರು. ಸಾಹಿತ್ಯ, ಶಾಸ್ತ್ರ, ಇತಿಹಾಸಗಳಲ್ಲೆಲ್ಲ ಇದು ಮಿಂಚಿನಂತೆ ಕಾರ್ಯಮಾಡಿದೆ. ಸಂಪಾದಿತ ಕೃತಿಗಳ ಮುನ್ನುಡಿಗಳೂ, ಪೊನ್ನನ 'ಭುವನೈಕ ರಾಮಾಭ್ಯುದಯ', ಕುಮುದೇಂದು ರಾಮಾಯಣ, ಧವಳ ಎಂಬ ಹಾಡಿನ ಸ್ವರೂಪ ಇತ್ಯಾದಿ ಲೇಖನಗಳೂ ಅವರ ಸಾಹಿತ್ಯ ಸಂಶೋಧನೆಯ ಅಮೃತ ಫಲಗಳು. ಪಾಂಡಿತ್ಯಕ್ಕೆ ಸಂಬಂಧಪಟ್ಟ ಅವರ ಸಂಶೋಧನ ಶಕ್ತಿಯ ಉಜ್ವಲ ಉದಾಹರಣೆ 'ಶಬ್ದವಿಹಾರ' ಎಂಬ ಚಿಕ್ಕ ಕೃತಿ. ಒಂದು ಶಬ್ದವನ್ನು ಹಿಡಿದುಕೊಂಡು ರೆಂಬೆ, ಕಾಂಡಗುಂಟ ಇಳಿದು, ಹಲವು ಬೇರುಗಳಲ್ಲಿ ಹರಿದಾಡಿ, ಮೂಲ ಬೇರನ್ನು ಮುಟ್ಟಿ ಹೇಳುವ ಅವರ ಸಾಹಸ ಇನ್ನೊಬ್ಬರಿಗೆ ಅಸಾಧ್ಯವೆಂಬ ಭಾವನೆಯನ್ನು ಹುಟ್ಟಿಸುತ್ತದೆ. ಒಂದೊಂದು ಶಬ್ದ ಯಾವ ಜಿಲ್ಲೆಯ ಯಾವ ಊರಿನ ಯಾವ ಸ್ಥಳದ ಶಾಸನದಲ್ಲಿದೆ; ಯಾವ ಕವಿಯ ಯಾವ ಕಾವ್ಯದ ಯಾವ ಸಂದರ್ಭದಲ್ಲಿದೆ ಎಂದು ನಾಲಗೆಯ ತುದಿಯಲ್ಲಿ ನೆನಪಿಸಿಕೊಳ್ಳುವ, ಅಗಲಿಹೋದ ಅವುಗಳ ಸಂಬಂಧಿ ಪದಗಳನ್ನು ಅನ್ಯಭಾಷೆಗಳಿಂದ ಬೆರಳ ತುದಿಯಲ್ಲಿ ಎತ್ತಿ ತರುವ ಅವರ ಕೂರ್ಮ ಸಾಹಸ ಒಂದು ಲೀಲೆಯೆಂದೇ ಹೇಳಬೇಕು.

ಡಿ.ಎಲ್.ಎನ್. ಅವರ ವಿಮರ್ಶೆ ಪಕ್ಷ ಪಂಗಡಗಳ ಸಂಘರ್ಷಣೆಯಲ್ಲ, ನ್ಯಾಯಾಧೀಶನ ತೀರ್ಮಾನ. ಅವರ ದೃಷ್ಟಿಯಲ್ಲಿ ಪಂಪ, ಹರಿಹರ, ಕುಮಾರವ್ಯಾಸರು ಕನ್ನಡದ ಮಹಾಕವಿಗಳು. ಹರಿಹರ ಅವರ ಮೆಚ್ಚಿನ ಕವಿ. ಪುಷ್ಪದಂತ ಪುರಾಣ, ಅಗ್ಗಳದೇವ, ರುದ್ರಭಟ್ಟ, ಕುಮಾರವ್ಯಾಸನ ಕರ್ಣ ಮೊದಲಾದ ಲೇಖನಗಳು ಅವರ ನ್ಯಾಯದೃಷ್ಟಿಗೆ ನಿದರ್ಶನಗಳು. ಈ ಕಾಲದಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ರೂಪಿಸಬಲ್ಲ ಮಹಾಶಿಲ್ಪಿ ಅವರೊಬ್ಬರೇ ಎಂದು ಎಲ್ಲರ ಭಾವನೆಯಾಗಿತ್ತು. ಅವರ ನಿಧನ ಎಲ್ಲರನ್ನೂ ನಿರಾಶೆಗೊಳಿಸಿತು.

**ಕಾರ್ಯತತ್ಪರತೆ:**

ಪಾಂಡಿತ್ಯ, ಸಂಶೋಧನೆಗಳ ಕಾಡಿನಲ್ಲಿ ಆನೆಯಂತೆ ನಡೆದ ಅವರ ಬರೆವಣಿಗೆ ಶುಷ್ಕವಾಗಿರದೆ ರಸವತ್ತಾಗಿದ್ದಿತು. 'ಹಚ್ಚನೆಯ ಹುಲ್ಲುಗಾವಲ ಹರವಿನಲ್ಲಿ ಸ್ವೇಚ್ಛೆಯಾಗಿ ತಿರುಗಾಡುತ್ತ, ಸೊಂಪಾಗಿ ಕಾಣುವೆಡೆಗಳಲ್ಲಿ ತಂಗಿ, ಹಿಡಿಹುಲ್ಲನ್ನು ಕಬಳಿಸುವ ಹಸುವಿನಂತೆ ಇದೆ ನನ್ನ ವ್ಯಾಸಂಗದ ಹವ್ಯಾಸ. ನನ್ನ ಕೊಠಡಿಯ ಆರಾಮ ಕುರ್ಚಿಯ ಮೇಲೆ ಮಲಗಿ, ಕೈಗೆ ಎಟುಕಿದ ಪುಸ್ತಕ ತೆರೆದು, ಓದುತ್ತ ಓದುತ್ತ, ಇಹದ ತಾಪತ್ರಯ ದೂರ ಸರಿದಂತೆಲ್ಲ ತನ್ಮಯತೆಯ ಮಡುವಿನಲ್ಲಿ ಮೆಲ್ಲ ಮೆಲ್ಲನೆ ಮುಳುಗಿ ಬಿಡುತ್ತೇನೆ.

©KTBS Not to be republished

ಪಕ್ಕದ ಮೇಜಿನ ಮೇಲೆ ಇರುವ ಗಂಧದ ಕಡ್ಡಿಗಳು ಉಗುಳುವ ಹೊಗೆ, ಸುರುಳಿ ಸುರುಳಿಯಾಗಿ ಅಂಕು ಡೊಂಕಾಗಿ ಮೇಲೆ ಹರಡಿ, ಕೊಠಡಿಯ ಪರಿಮಿತಾಕಾಶದಲ್ಲಿ ಕರಗಿ ಹೋಗುವಂತೆ ನಾನೂ ಬಾರಿಬಾರಿಗೆ ಕರಗಿಹೋಗಬೇಕೆಂಬ ಹಂಬಲ ನನಗೆ ಹಿರಿದಾಗಿದೆ.' ಈ ಬರೆವಣಿಗೆಯಲ್ಲಿ ಹರಿಹರನ ಗದ್ಯತನವಿದೆ. ಸಾವಿರಾರು ಕೆಟ್ಟ ಪದ್ಯಗಳನ್ನು ಬರೆದವನನ್ನು ಕವಿಯೆನ್ನುವುದಕ್ಕಿಂತ ಇಂಥ ಗದ್ಯ ಬರೆದವನನ್ನು ಕವಿಯೆನ್ನುವುದು ಲೇಸು. ಕೇವಲ ಪದ್ಯ ಬರೆದ ಮಾತ್ರಕ್ಕೆ ರಾಷ್ಟ್ರಮಟ್ಟದ ಗೌರವ ನೀಡುವಂತೆ, ಇಂಥ ವಿದ್ವತ್ಪೂರ್ಣ ವ್ಯವಸಾಯ ಗೆಯ್ದವರಿಗೂ ನೀಡುವುದು ನ್ಯಾಯ.


ಡಿ.ಎಲ್.ಎನ್. ಅವರು ಪ್ರಥಮ ವರ್ಗದ ಪ್ರಾಧ್ಯಾಪಕರೆಂದು ಅವರ ಶಿಷ್ಯಕೋಟಿಯ ಒಮ್ಮತದ ಅಭಿಪ್ರಾಯ. ೬೦ ನಿಮಿಷಕ್ಕೆ ಬದಲು ೪೫ ನಿಮಿಷಕ್ಕೆ ಸಾಲುವಷ್ಟು ಪಾಠ ಸಾಮಗ್ರಿ ತಮ್ಮ ಹತ್ತಿರ ಇದ್ದರೆ ಅವರು ವರ್ಗ ನಡೆಸುತ್ತಿರಲಿಲ್ಲ. ಉದ್ವೇಗ, ಅಂದಾಜು, ಆತ್ಮವಂಚನೆ, ಅಪ್ರಾಮಾಣಿಕತೆ ಇವು ಒಮ್ಮೆಯೂ ವರ್ಗದಲ್ಲಿ ಸುಳಿಯಲಿಲ್ಲ. ವಿದ್ಯಾರ್ಥಿಗಳಲ್ಲಿ ವ್ಯಾಸಂಗದ ಹವ್ಯಾಸ ಬೆಳೆಸಿ, ಹಸಿವನ್ನು ಹಿಂಗಿಸುವ ದಾರಿ ತೋರಿಸಿ, ಆ ದಾರಿಯಲ್ಲಿ ಎಡವಿದಾಗ ಎತ್ತಿ ನಿಲ್ಲಿಸಿ ಮುನ್ನಡೆಸಿದರು. ಇದನ್ನು ನೆನಪಿಟ್ಟು ಅವರ ವಿದ್ಯಾರ್ಥಿಗಳು, ಮಿತ್ರರು ಜ್ಞಾನೋಪಾಸಕ, ಹೊಸಬೆಳಕು, ಉಪಾಯನ ಎಂಬ ಅಭಿನಂದನಾ ಗ್ರಂಥಗಳನ್ನು ಅರ್ಪಿಸಿ, ನಾಡಜನತೆ ಬೀದರ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರೆಂದು ಆರಿಸಿ ಕೃತಜ್ಞತೆಗಳನ್ನು ಸಲ್ಲಿಸಿದರು.

ಇವುಗಳಿಗಿಂತ ಡಿ.ಎಲ್.ಎನ್. ಅವರ ದೊಡ್ಡ ಆಸ್ತಿಯೆಂದರೆ ದೊಡ್ಡ ಮನಸ್ಸು. ತಮ್ಮ ನಿಲುವಿಗೆ ತಕ್ಕ ಅಧಿಕಾರ ಸಿಗಲಿಲ್ಲವೆಂದು ಒಮ್ಮೆಯೂ ಅವರು ತುಟಿ ಬಿಚ್ಚಲಿಲ್ಲ, ಮನದಲ್ಲಿ ಆ ಭಾವನೆಯನ್ನು ಮೂಡಿಸಿಕೊಳ್ಳಲಿಲ್ಲ. ಇವರು ಸಂಪಾದಿಸಿದ 'ಶಬ್ದಮಣಿ ದರ್ಪಣ'ವನ್ನು ವಿಮರ್ಶಿಸುತ್ತ ನಾನು ಬರೆದ ಒಂದೆರಡು ಮಾತುಗಳು ಡಿ.ಎಲ್.ಎನ್. ಅವರಿಗೆ ನೋವನ್ನುಂಟು ಮಾಡಿದವು – ಎಂದು ಗೆಳೆಯರಿಂದ ತಿಳಿದಾಗ ನನಗೆ ನೋವಾಯಿತು. ಅವರು ತಮ್ಮ ಮುಂದಿನ ಆವೃತ್ತಿಯಲ್ಲಿ ಬರೆದ 'ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ. ಮಲ್ಲಿನಾಥ ಕಲಬುರ್ಗಿ ಎಂ.ಎ. ಅವರು ದರ್ಪಣಾವಲೋಕನ ಎಂಬ ಹೆಸರಿನಲ್ಲಿ ಎರಡು ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಸೂತ್ರ, ವೃತ್ತಿ, ಟೀಕೆಗಳಲ್ಲಿ ಹಂಚಿಹೋಗಿರುವ ಸಾಹಿತ್ಯಗಳನ್ನೆಲ್ಲ ಅವರು ತುಂಬ ಶ್ರಮವಹಿಸಿ ಕಂಡುಹಿಡಿದಿದ್ದಾರೆ. ಇವರ ಲೇಖನಗಳು ಕಾರಣವಾಗಿ ಶಬ್ದಮಣಿ ದರ್ಪಣದ ಈ ಮುದ್ರಣ ಅವರ ಹಿಂದಿನ ಮುದ್ರಣಕ್ಕಿಂತ ಹೆಚ್ಚು ಸಮರ್ಪಕವಾಗಿದೆಯೆಂದು ಭಾವಿಸುತ್ತೇನೆ' ಎಂಬ ನಿರ್ವಿಕಾರ ಬರೆವಣಿಗೆಯನ್ನು ಓದಿದಾಗಲಂತೂ ನನ್ನನ್ನೇ ನಾನು ಹಳಿದುಕೊಂಡೆ, ಮನದಲ್ಲಿಯೇ ಅವರ ಕ್ಷಮೆ ಕೇಳಿಕೊಂಡೆ.

©KTBS Not to be republished

* * * *

## ಕೃತಿಕಾರರ ಪರಿಚಯ :



**ಡಾ. ಮಲ್ಲಪ್ಪ ಮಡಿವಾಳಪ್ಪ ಕಲಬುರ್ಗಿ** ಅವರು ೧೯೩೮ ರಲ್ಲಿ ವಿಜಯಪುರ ಜಿಲ್ಲೆ, ಸಿಂದಗಿ ತಾಲ್ಲೂಕಿನ ಗುಬ್ಬೇವಾಡದಲ್ಲಿ ಜನಿಸಿದರು. ಇವರು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಅಧ್ಯಾಪಕರಾಗಿ ಹಾಗೂ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಸೇವೆ ಸಲ್ಲಿಸಿದ್ದಾರೆ. ನಮ್ಮ ನಾಡಿನ ಖ್ಯಾತ ಸಂಶೋಧಕರು ಮತ್ತು ವಿದ್ವಾಂಸರಲ್ಲಿ ಒಬ್ಬರಾಗಿದ್ದಾರೆ.

ಇವರು 'ಮಾರ್ಗ', 'ಶಾಸನಗಳಲ್ಲಿ ಶಿವಶರಣರು', 'ಕನ್ನಡ ಹಸ್ತಪ್ರತಿ ಶಾಸ್ತ್ರ', 'ಚೆನ್ನಬಸವಣ್ಣನವರ ವಚನ ಮಹಾಸಂಪುಟ', 'ಕವಿರಾಜಮಾರ್ಗದ ಪರಿಸರದ ಸಾಹಿತ್ಯ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಪಂಪ ಪ್ರಶಸ್ತಿ ಲಭಿಸಿವೆ. ಇವರು ೨೦೧೫ ರಂದು ನಿಧನ ಹೊಂದಿದರು. ಪ್ರಸ್ತುತ ಲೇಖನವನ್ನು ಅವರ **'ಮಾರ್ಗ-ಸಂಪುಟ ೧'** ಕೃತಿಯಿಂದ ಆರಿಸಿದೆ.

©KTBS Not to be republished

## ಅಭ್ಯಾಸ

### I. ಪದಗಳ ಅರ್ಥ :

**ಅನುಸಂಧಾನ** – ಪರಿಶೀಲನೆ

**ಉಜ್ವಲ** – ಪ್ರಕಾಶಮಾನ; ಶ್ರೇಷ್ಠವಾದ.

**ಕಮ್ಮಟ** – ಟಂಕಸಾಲೆ; ನಾಣ್ಯ ಮುದ್ರಿಸುವ ಕೇಂದ್ರ

**ಕೂರ್ಮ** – ಆಮೆ

**ಜ್ಞಾನೋಪಾಸಕ** – ಜ್ಞಾನವನ್ನು ಆರಾಧಿಸುವವನು

**ತನ್ಮಯತೆ** – ಮಗ್ನತೆ; ಮೈಮರೆ; ತಲ್ಲೀನತೆ.

**ದೌಲತ್ತು** – ಅಹಂಕಾರ; ಅಧಿಕಾರದ ದರ್ಪ.

**ಪರಿವಾರ** – ಬಳಗ

**ಲೀಲೆ** – ಆಟ

**ಸಂಶೋಧನೆ** – ಅನ್ವೇಷಣೆ; ಹುಡುಕಾಟ.

**ಶುಷ್ಕ** – ಒಣಗಿದ; ತೇವ ರಹಿತ.

**ಹರವು** – ವೈಶಾಲ್ಯ; ವಿಸ್ತಾರ.

**ಹಳಿ** – ನಿಂದಿಸು; ತೆಗಳು.

**ಅಶಕ್ಯ** – ಸಾಧ್ಯವಿಲ್ಲ

**ಉಪಾಯನ** – ಕಾಣಿಕೆ; ಉಡುಗೊರೆ.

**ಕಾರ್ಯತತ್ಪರತೆ** – ಕೆಲಸದಲ್ಲಿ ಶ್ರದ್ಧೆ ತೋರುವುದು.

**ಜಂಗಮ** – ಚಲಿಸುವ; ಚಲನೆಯುಳ್ಳ.

**ತತ್ತರಿಸು** – ನಡುಗು; ಕಂಪಿಸು.

**ತಾಪತ್ರಯ** – ತೊಂದರೆ

**ನಿರ್ವಿಕಾರ** – ವಿಕಾರವಿಲ್ಲದ

**ಮನದಣಿ** – ತೃಪ್ತಿಯಾಗು

**ಸಂಘರ್ಷಣೆ** – ಹೋರಾಟ; ತಿಕ್ಕಾಟ.

**ಸತ್ತ್ವ** – ತಿರುಳು; ಸಾರ.

**ಶಿಲ್ಪಿ** – ರೂವಾರಿ; ತೇವರಹಿತ.

**ಹವ್ಯಾಸ** – ಚಟ; ಗೀಳು.

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಕನ್ನಡ ಸಾಹಿತ್ಯದಲ್ಲಿ ಡಿ.ಎಲ್.ಎನ್. ಯಾರ ಸ್ಥಾನವನ್ನು ತುಂಬಿದ್ದರು?

೨. ಡಿ.ಎಲ್.ಎನ್. ಎಷ್ಟರಲ್ಲಿ ಜನಿಸಿದರು?

೩. ಯಾರ ಕಮ್ಮಟದಲ್ಲಿ ಡಿ.ಎಲ್.ಎನ್. ಅವರ ವ್ಯಕ್ತಿತ್ವ ರೂಪುಗೊಂಡಿತು?

೪. ವಿದ್ಯಾರ್ಥಿ ಜೀವನದಲ್ಲಿ ಡಿ.ಎಲ್.ಎನ್. ಅವರ ಸಹಪಾಠಿಗಳು ಯಾರು?

೫. ಡಿ.ಎಲ್.ಎನ್. ರಚಿಸಿರುವ ಶಾಸ್ತ್ರಗ್ರಂಥ ಯಾವುದು?

೬. ಯಾವ ಕವಿಯನ್ನು ಡಿ.ಎಲ್.ಎನ್. ಅವರು ಮೆಚ್ಚಿದ್ದರು?

೭. ಡಿ.ಎಲ್.ಎನ್. ಅವರ ವಿಮರ್ಶಾ ಲೇಖನಗಳಾವುವು?

೮. ಡಿ.ಎಲ್.ಎನ್. ಅವರ ಸಾಹಿತ್ಯ ಸಂಶೋಧನೆಯ ಅಮೃತ ಫಲಗಳಾವುವು?

೯. ಯಾವ ಅಭಿನಂದನಾ ಗ್ರಂಥವನ್ನು ಡಿ.ಎಲ್.ಎನ್. ಅವರಿಗೆ ಅರ್ಪಿಸಲಾಗಿದೆ?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಯಾವ ಯಾವ ಸಂಸ್ಥೆಗಳಲ್ಲಿ ಡಿ.ಎಲ್.ಎನ್. ಅವರು ಸೇವೆ ಸಲ್ಲಿಸಿದ್ದಾರೆ?

೨. ತೀ.ನಂ.ಶ್ರೀ. ಅವರು ಡಿ.ಎಲ್.ಎನ್. ಅವರ ಪಾಂಡಿತ್ಯದ ಬಗ್ಗೆ ಏನು ಹೇಳಿದ್ದಾರೆ?

೩. ಕಲಬುರ್ಗಿಯವರು ಡಿ.ಎಲ್.ಎನ್. ಅವರ ಸಾಹಿತ್ಯ ಸೇವೆಯ ಬಗ್ಗೆ ಏನೆಂದು ಅಭಿಪ್ರಾಯಪಟ್ಟಿದ್ದಾರೆ?

೪. ಡಿ.ಎಲ್.ಎನ್. ಸಂಪಾದಿಸಿದ ಮಹತ್ವದ ಕೃತಿಗಳಾವುವು?

೫. ಡಿ.ಎಲ್.ಎನ್. ಅವರ 'ಕನ್ನಡ ಗ್ರಂಥ ಸಂಪಾದನೆ' ಕೃತಿಯ ವಿಶೇಷತೆಗಳೇನು?

೬. ಡಿ.ಎಲ್.ಎನ್. ಅವರಲ್ಲಿ ಸಂಶೋಧನಾ ಶಕ್ತಿ ಯಾವ ರೀತಿ ಇತ್ತು?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ತಮ್ಮ ವ್ಯಾಸಂಗದ ಹವ್ಯಾಸದ ಬಗ್ಗೆ ಡಿ.ಎಲ್.ಎನ್. ಅವರು ಹೇಳಿರುವ ಮಾತುಗಳಾವುವು?

೨. ಪ್ರಾಧ್ಯಾಪಕರಾಗಿ ಡಿ.ಎಲ್.ಎನ್. ಅವರು ಯಾವ ರೀತಿ ಸೇವೆ ಸಲ್ಲಿಸಿದರು?

೩. ಡಿ.ಎಲ್.ಎನ್. ಅವರದು ದೊಡ್ಡ ಮನಸ್ಸು ಎಂಬುದು ಹೇಗೆ ಗೊತ್ತಾಗುತ್ತದೆ?

**ಈ) ಸಂದರ್ಭದೊಡನೆ ಸ್ಪಷ್ಟೀಕರಿಸಿರಿ.**

೧. ಡಿ.ಎಲ್.ಎನ್. ಎಂದರೆ ಪಾಂಡಿತ್ಯ, ಪಾಂಡಿತ್ಯ ಎಂದರೆ ಡಿ.ಎಲ್.ಎನ್.

೨. ಅವರ ದೊಡ್ಡ ಆಸ್ತಿಯೆಂದರೆ ದೊಡ್ಡ ಮನಸ್ಸು.

೩. ಮನದಲ್ಲಿಯೇ ಅವರ ಕ್ಷಮೆ ಕೇಳಿಕೊಂಡೆ.

©KTBS Not to be republished

## III. ಭಾಷಾಭ್ಯಾಸ :

**ಅ) ಕೆಳಗೆ ನೀಡಿರುವ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಮರಣ, ಗೌರವ, ಜಂಗಮ, ಹಿರಿದು, ನ್ಯಾಯ, ಬೆಳಕು, ವಿಶೇಷ, ಪರಿಪೂರ್ಣ, ಶುದ್ಧಿ, ಶಕ್ತಿ, ಅಸಾಧ್ಯ, ಮುಳುಗು, ನೋವು, ಅಶಕ್ಯ.

**ಆ) ಕೆಳಗಿನ ಪದಗಳಿಗೆ ತದ್ಭವ ರೂಪಗಳನ್ನು ಬರೆಯಿರಿ.**

ದುಃಖ, ಕಾರ್ಯ, ವಿದ್ಯಾ, ಕಾವ್ಯ.

**ಇ) ಕೆಳಗೆ ನೀಡಿರುವ ಪದಗಳನ್ನು ಬಿಡಿಸಿ, ಸಂಧಿಯನ್ನು ಹೆಸರಿಸಿರಿ.**

ವಿದ್ಯಾರ್ಥಿ, ಹಳೆಗನ್ನಡ, ಉದ್ದಗಲ, ರಾಮಾಭ್ಯುದಯ, ಭುವನೈಕ, ಹುಲ್ಲುಗಾವಲು, ನೆನಪಿಟ್ಟು, ಜ್ಞಾನೋಪಾಸಕ, ದರ್ಪಣಾವಲೋಕನ, ಮನದಣಿ, ದಿಗ್ಗಜ, ಮಾನಸೋಲ್ಲಾಸ.

**ಈ) ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

ತತ್ತರಿಸಿ ಹೋಗು, ಸಂಶೋಧನೆ, ಬುನಾದಿ, ನಿರಾಶೆಗೊಳಿಸು, ಮುನ್ನಡೆಸು, ಜ್ಞಾನೋಪಾಸಕ.

**ಉ) ಕೆಳಗಿನ ಪದಗಳಿಗೆ ಅನ್ಯಲಿಂಗ ರೂಪವನ್ನು ಬರೆಯಿರಿ.**

ಸಂಶೋಧಕ, ಕವಿ, ವಿಮರ್ಶಕಿ, ದುಡಿದನು, ಲೇಖಕ.

**ಊ) ಇವುಗಳ ವಚನವನ್ನು ಬದಲಾಯಿಸಿ ಬರೆಯಿರಿ.**

ಲೇಖನ, ಕೃತಿ, ನಿದರ್ಶನಗಳು, ಕ್ಷೇತ್ರಗಳು, ಅಧ್ಯಾಪಕ.

**ಋ) ಕೆಳಗೆ ನೀಡಿದ ಕ್ರಿಯಾಪದಗಳ ಧಾತುವನ್ನು ಗುರುತಿಸಿ ಬರೆಯಿರಿ.**

ತೋರುತ್ತದೆ, ಬಿಡುತ್ತೇನೆ, ಸಲ್ಲಿಸಿದರು, ಕಂಡುಹಿಡಿದಿದ್ದಾರೆ.

**ಎ) ಕೆಳಗಿನ ಪದಗಳಿಗೆ ನಾನಾರ್ಥವನ್ನು ಬರೆಯಿರಿ.**

ಹಳಿ, ಕಳೆ, ಕಣ, ಕಾಡು.

© KTBS Not to be republished

# IV. ಸೈದ್ಧಾಂತಿಕ ವ್ಯಾಕರಣ :

## ಕಾಲಗಳು

ನಿಮಗೆ ತಿಳಿದಿರುವಂತೆ ಕಾಲಗಳಲ್ಲಿ ಮೂರು ವಿಧ.

೧. ಭೂತಕಾಲ

೨. ವರ್ತಮಾನ ಕಾಲ

೩. ಭವಿಷ್ಯತ್ ಕಾಲ

ಕೆಲಸ ಅಥವಾ ಕ್ರಿಯೆ ಯಾವ ಕಾಲದಲ್ಲಿ ನಡೆಯಿತು ಎಂಬುದನ್ನು ವಾಕ್ಯದಲ್ಲಿನ 'ಕ್ರಿಯಾಪದ' ನಿರ್ಧರಿಸುತ್ತದೆ. ಕ್ರಿಯಾಪದದ ಮೂಲ ರೂಪವನ್ನು 'ಧಾತು' ಎಂದು ಕರೆಯುತ್ತೇವೆ. ಧಾತುವಿಗೆ 'ಕಾಲಸೂಚಕ ಪ್ರತ್ಯಯ' ಹಾಗೂ 'ಆಖ್ಯಾತ ಪ್ರತ್ಯಯ' ಸೇರಿ 'ಕ್ರಿಯಾಪದ' ಆಗುತ್ತದೆ. ಕ್ರಿಯಾಪದದಲ್ಲಿ ಕಾಲಸೂಚಕ ಪ್ರತ್ಯಯಗಳು ಮೂರೂ ಕಾಲದಲ್ಲಿ ಯಾವ ರೀತಿ ಬಳಕೆಯಾಗುತ್ತವೆ ಎಂಬುದನ್ನು ವಿವರವಾಗಿ ತಿಳಿಯೋಣ.

**೧. ವರ್ತಮಾನ ಕಾಲ :**

ವರ್ತಮಾನ ಕಾಲವು ಕ್ರಿಯೆಯು ನಡೆಯುತ್ತಿರುವುದನ್ನು ಸೂಚಿಸುತ್ತದೆ. ಅಂದರೆ ಕ್ರಿಯೆಯು ಪ್ರಸ್ತುತ ಕಾಲದಲ್ಲಿ ನಡೆದರೆ ಅದು ವರ್ತಮಾನ ಕಾಲ ಅನಿಸುತ್ತದೆ. ಈ ಕೆಳಗಿನ ಉದಾಹರಣೆಯನ್ನು ಗಮನಿಸಿ.

"ಮೇರಿ ಶಾಲೆಗೆ ಹೋಗುತ್ತಾಳೆ"

ಇಲ್ಲಿ ಮೇರಿ ಶಾಲೆಗೆ ಹೋಗುವ ಕ್ರಿಯೆಯು ವರ್ತಮಾನ ಕಾಲದಲ್ಲಿ ನಡೆಯುತ್ತಿರುವುದನ್ನು ಸೂಚಿಸುತ್ತದೆ. ವರ್ತಮಾನ ಕಾಲದ ಕ್ರಿಯಾಪದಗಳು ಹೇಗೆ ಆಗುತ್ತವೆ ಎಂಬುದನ್ನು ಗಮನಿಸಿ.

| | **ಧಾತು** | + | **ಕಾಲಸೂಚಕ ಪ್ರತ್ಯಯ** | + | **ಅಖ್ಯಾತ ಪ್ರತ್ಯಯ** | **= ಕ್ರಿಯಾಪದ** |
|---|---|---|---|---|---|---|
| **೧. ಪ್ರಥಮ ಪುರುಷ** | | | | | | |
| ಪುಲ್ಲಿಂಗ | ನೋಡು | + | ಉತ್ತ | + | ಆನೆ | = ನೋಡುತ್ತಾನೆ |
| ಸ್ತ್ರೀಲಿಂಗ | ನೋಡು | + | ಉತ್ತ | + | ಆಳೆ | = ನೋಡುತ್ತಾಳೆ |
| ನಪುಂಸಕಲಿಂಗ | ನೋಡು | + | ಉತ್ತ | + | ಅದೆ | = ನೋಡುತ್ತದೆ |
| **೨. ಮಧ್ಯಮ ಪುರುಷ** | ನೋಡು | + | ಉತ್ತ | + | ಈಯ | = ನೋಡುತ್ತೀಯ |
| **೩. ಉತ್ತಮ ಪುರುಷ** | ನೋಡು | + | ಉತ್ತ | + | ಏನೆ | = ನೋಡುತ್ತೇನೆ |

ಇಲ್ಲಿ **'ಉತ್ತ'** ಎಂಬುದು ವರ್ತಮಾನ ಕಾಲವನ್ನು ಸೂಚಿಸುವ ಪ್ರತ್ಯಯ ಎಂಬುದನ್ನು ನೆನಪಿಡಿ.

©KTBS Not to be republished

## ೨. ಭೂತಕಾಲ :

ಭೂತಕಾಲವು ಈ ಹಿಂದೆ ನಡೆದು ಹೋದ ಕ್ರಿಯೆಯನ್ನು ಸೂಚಿಸುತ್ತದೆ. ಅಂದರೆ ಆ ಕ್ರಿಯೆಯು ಮುಗಿದು ಹೋಗಿದ್ದರೆ ಅದು ಭೂತಕಾಲವೆನಿಸುತ್ತದೆ. ಈ ಕೆಳಗಿನ ಉದಾಹರಣೆಯನ್ನು ಗಮನಿಸಿ.

**"ಸಲೀಮನು ಶಾಲೆಗೆ ಹೋದನು"** ಇಲ್ಲಿ ಸಲೀಮನು ಶಾಲೆಗೆ ಹೋಗಿರುವ ಕ್ರಿಯೆಯು ಭೂತ ಕಾಲದಲ್ಲಿ ನಡೆದಿರುವುದನ್ನು ಸೂಚಿಸುತ್ತದೆ. ಭೂತಕಾಲದ ಕ್ರಿಯಾಪದಗಳು ಹೇಗೆ ಆಗುತ್ತವೆ ಎಂಬುದನ್ನು ಗಮನಿಸಿ.

| | **ಧಾತು** | **+** | **ಕಾಲಸೂಚಕ ಪ್ರತ್ಯಯ** | **+** | **ಆಖ್ಯಾತ ಪ್ರತ್ಯಯ** | **= ಕ್ರಿಯಾಪದ** |
|---|---|---|---|---|---|---|
| **೧. ಪ್ರಥಮ ಪುರುಷ** | | | | | | |
| ಪುಲ್ಲಿಂಗ | ನೋಡು | + | ದ | + | ಅನು | = ನೋಡಿದನು |
| ಸ್ತ್ರೀಲಿಂಗ | ನೋಡು | + | ದ | + | ಅಳು | = ನೋಡಿದಳು |
| ನಪುಂಸಕಲಿಂಗ | ನೋಡು | + | ದ | + | ಇತು | = ನೋಡಿತು |
| **೨. ಮಧ್ಯಮ ಪುರುಷ** | ನೋಡು | + | ದ | + | ಎ | = ನೋಡಿದೆ |
| **೩. ಉತ್ತಮ ಪುರುಷ** | ನೋಡು | + | ದ | + | ಎನು | = ನೋಡಿದೆನು |

ಇಲ್ಲಿ **'ದ'** ಎಂಬುದು ಭೂತ ಕಾಲವನ್ನು ಸೂಚಿಸುವ ಪ್ರತ್ಯಯ ಎಂಬುದನ್ನು ನೆನಪಿಡಿ.

## ೩. ಭವಿಷ್ಯತ್ ಕಾಲ:

ಭವಿಷ್ಯತ್ ಕಾಲವು ಮುಂದೆ ನಡೆಯುವ ಕ್ರಿಯೆಯನ್ನು ವಿವರಿಸುವ ಕಾಲವಾಗಿದೆ. ಅಂದರೆ ಕ್ರಿಯೆ ಮುಂದೆ ಜರುಗುವುದನ್ನು ಸೂಚಿಸುತ್ತದೆ. ಈ ಕೆಳಗಿನ ಉದಾಹರಣೆಯನ್ನು ಗಮನಿಸಿ.

"ರಾಮನು ಶಾಲೆಗೆ ಹೋಗುವನು"

ಇಲ್ಲಿ ರಾಮನು ಶಾಲೆಗೆ ಹೋಗುವ ಕ್ರಿಯೆಯು ಭವಿಷ್ಯತ್ ಕಾಲದಲ್ಲಿ ನಡೆಯುವುದನ್ನು ಸೂಚಿಸುತ್ತದೆ. ಭವಿಷ್ಯತ್ ಕಾಲದ ಕ್ರಿಯಾಪದಗಳು ಹೇಗೆ ಆಗುತ್ತವೆ ಎಂಬುದನ್ನು ಗಮನಿಸಿ.

| | **ಧಾತು** | **+** | **ಕಾಲಸೂಚಕ ಪ್ರತ್ಯಯ** | **+** | **ಆಖ್ಯಾತ ಪ್ರತ್ಯಯ** | **= ಕ್ರಿಯಾಪದ** |
|---|---|---|---|---|---|---|
| **೧. ಪ್ರಥಮ ಪುರುಷ** | | | | | | |
| ಪುಲ್ಲಿಂಗ | ನೋಡು | + | ವ | + | ಅನು | = ನೋಡುವನು |
| ಸ್ತ್ರೀಲಿಂಗ | ನೋಡು | + | ವ | + | ಅಳು | = ನೋಡುವಳು |
| ನಪುಂಸಕಲಿಂಗ | ನೋಡು | + | ವ | + | ಅದು | = ನೋಡುವುದು |
| **೨. ಮಧ್ಯಮ ಪುರುಷ** | ನೋಡು | + | ವ | + | ಇ | = ನೋಡುವಿ |
| **೩. ಉತ್ತಮ ಪುರುಷ** | ನೋಡು | + | ವ | + | ಎನು | = ನೋಡುವೆನು |

©KTBS Not to be republished

ಇಲ್ಲಿ **'ವ'** ಎಂಬುದು ಭವಿಷತ್ ಕಾಲವನ್ನು ಸೂಚಿಸುವ ಪ್ರತ್ಯಯ ಎಂಬುದನ್ನು ನೆನಪಿಡಿ. ಹೀಗೆ ಕನ್ನಡ ವ್ಯಾಕರಣದಲ್ಲಿ 'ಕಾಲ'ವನ್ನು ಮೂರು ಬಗೆಗಳಲ್ಲಿ ಗುರುತಿಸಲಾಗಿದೆ.

**ಕಾಲ ಪಲ್ಲಟ :**

ವಾಕ್ಯದಲ್ಲಿ ಒಂದು ನಿರ್ದಿಷ್ಟ ಕಾಲದ ಪ್ರಯೋಗವು ಮತ್ತೊಂದು ಕಾಲದ ಅರ್ಥವನ್ನು ಸೂಚಿಸುವುದೇ ಕಾಲಪಲ್ಲಟ.

**ಉದಾ :** ನಮ್ಮಣ್ಣನು ನಾಳೆ ಬರುತ್ತಾನೆ.

ಈ ವಾಕ್ಯದಲ್ಲಿ 'ಬರುತ್ತಾನೆ' ಎಂಬುದು ವರ್ತಮಾನ ಕಾಲದಲ್ಲಿದೆ. ಆದರೆ 'ನಾಳೆ' ಎನ್ನುವ ಶಬ್ದ ಭವಿಷ್ಯತ್ ಕಾಲವನ್ನು ಸೂಚಿಸುತ್ತಿದೆ. ವ್ಯಾಕರಣದ ನಿಯಮಗಳನುಸಾರ ಈ ವಾಕ್ಯವು 'ನಮ್ಮಣ್ಣನು ನಾಳೆ ಬರುವನು' ಎಂದು ಪ್ರಯೋಗವಾಗಬೇಕಿತ್ತು. ಹೀಗೆ ನಿರ್ದಿಷ್ಟ ಕಾಲದಲ್ಲಿ ಪ್ರಯೋಗವಾಗಬೇಕಾದ ಕ್ರಿಯಾಪದ ಬೇರೊಂದು ಕಾಲದಲ್ಲಿ ಪ್ರಯೋಗವಾಗುವುದನ್ನು 'ಕಾಲಪಲ್ಲಟ' ಎಂದು ಕರೆಯಲಾಗುತ್ತದೆ.

## V. ಚಟುವಟಿಕೆಗಳು :

೧. 'ಜ್ಞಾನೋಪಾಸಕ' ಅಭಿನಂದನಾ ಗ್ರಂಥವನ್ನು ಓದಿರಿ.
೨. ಹಳೆಗನ್ನಡ ಕವಿಗಳು ಮತ್ತು ಅವರ ಕೃತಿಗಳ ಪಟ್ಟಿ ತಯಾರಿಸಿರಿ.
೩. ಈ ಭಾಗದಲ್ಲಿ ಉಲ್ಲೇಖಿಸಲಾಗಿರುವ ವಿದ್ವಾಂಸರ ಭಾವಚಿತ್ರಗಳನ್ನು ಸಂಗ್ರಹಿಸಿ ಆಲ್ಬಂ ತಯಾರಿಸಿ.


©KTBS Not to be republished

# ೭. ಐನ್‌ಸ್ಟೀನ್ ಮತ್ತು ದೇವರು

– ಎಚ್. ನರಸಿಂಹಯ್ಯ

**ಪಾಠ ಪ್ರವೇಶ :** ಅನಾದಿ ಕಾಲದಿಂದ ಮನುಷ್ಯನನ್ನು ಚಿಂತನೆಗೆ ಹಚ್ಚಿದ ವಿಷಯಗಳಲ್ಲಿ 'ದೇವರು' ಎಂಬ ವಿಷಯವೂ ಒಂದು. ದೇವರ ಬಗ್ಗೆ ಏಕಾಭಿಪ್ರಾಯವಿಲ್ಲ. ದೇವರನ್ನು ನಂಬುವ ಆಸ್ತಿಕರಿರುವಂತೆ ನಂಬದ ನಾಸ್ತಿಕರೂ ಇದ್ದಾರೆ. ದೇವರನ್ನು ನಂಬುವವರಲ್ಲಿಯೂ ಕೂಡ ದೇವರ ರೂಪ, ಗುಣ, ಸ್ವಭಾವಗಳ ಬಗ್ಗೆ ಭಿನ್ನಾಭಿಪ್ರಾಯವಿದೆ.

ಉನ್ನತ ಬೌದ್ಧಿಕ, ವೈಚಾರಿಕ ನಿಲುವು ಹೊಂದಿರುವ ಗಣ್ಯರು ದೇವರ ಬಗೆಗಿನ ಅವರ ಕಲ್ಪನೆಗಳು ಕುತೂಹಲಕಾರಿಯಾದುದು. ವಿಶ್ವವಿಖ್ಯಾತ ವಿಜ್ಞಾನಿಯೂ, ಶ್ರೇಷ್ಠ ಮಾನವತಾವಾದಿಯೂ ಆದ ಆಲ್ಬರ್ಟ್ ಐನ್‌ಸ್ಟೀನರು ನಂಬುವ ದೇವರು ಮತ್ತು ಬದುಕಿನ ಸಾರ್ಥಕತೆಯನ್ನು ಅವರು ಕಂಡುಕೊಂಡ ಬಗೆ ಈ ಭಾಗದ ವಸ್ತುವಾಗಿದೆ.



ಐನ್‌ಸ್ಟೀನ್ ಅವರು ಅತಿಶ್ರೇಷ್ಠ ವಿಜ್ಞಾನಿಗಳಲ್ಲಿ ಒಬ್ಬರು ಮಾತ್ರವಲ್ಲ, ನಿಜವಾದ ಮಾನವತಾವಾದಿಯೂ ಹೌದು. ವಿಜ್ಞಾನ ಮತ್ತು ಧರ್ಮ ಹಾಗೂ ಧರ್ಮಸಂಬಂಧೀ ವಿಷಯಗಳ ನಡುವೆ ವಾಗ್ವಾದಗಳು ಹುಟ್ಟಿಕೊಂಡಾಗಲೆಲ್ಲ, ಕಟ್ಟಾ ಧಾರ್ಮಿಕರು ಕೂಡ ವಿಜ್ಞಾನವು ಅಪ-ರಿಪೂರ್ಣವೆಂಬ ತಮ್ಮ ನಿಲುವಿನ ಸಮರ್ಥನೆಗೆಂದು ಅವರ ಹೆಸರನ್ನು ಎಳೆದು ತರುತ್ತಾರೆ. ಅವರ ಹೇಳಿಕೆಗಳನ್ನು ಉದ್ಧರಿಸುವುದರ ಮೂಲಕ, ಅವರು ಆಳವಾದ ಧಾರ್ಮಿಕ ನಂಬಿಕೆಗಳಿದ್ದ ವ್ಯಕ್ತಿಯೆನ್ನುವುದನ್ನು ಸ್ಥಾಪಿಸಲು ಪ್ರಯತ್ನಿಸುತ್ತಾರೆ. ಹಾಗೆ, ಪದೇಪದೇ ಉದ್ಧರಿಸಲಾಗುವ ಒಂದು ಮಾತೆಂದರೆ 'ಧರ್ಮವಿಲ್ಲದ ವಿಜ್ಞಾನ ಕುಂಟು ಮತ್ತು ವಿಜ್ಞಾನವಿಲ್ಲದ ಧರ್ಮ ಕುರುಡು' ಎನ್ನುವುದು.

ಆದರೆ ಧರ್ಮ ಎಂದರೇನು? ಐನ್‌ಸ್ಟೀನ್‌ರ ಪ್ರಕಾರ ಧರ್ಮದ ಪರಿಕಲ್ಪನೆ ಯಾವ ರೀತಿಯದು? ನಮಗೆ ಈ ವಿಷಯಗಳ ತಿಳಿವಳಿಕೆ ಅಗತ್ಯವಾದುದು. ಏಕೆಂದರೆ ಧರ್ಮವನ್ನು ಕುರಿತ ಹಲವು ನಿರ್ವಚನಗಳಿವೆ. ಅಷ್ಟೇ ಅಲ್ಲ, ಧರ್ಮದ ಬಗ್ಗೆ ಪರಸ್ಪರ ವಿಭಿನ್ನವಾದ ಸಿದ್ಧಾಂತಗಳೂ ಇವೆ.

ನಮಗೆ ತಿಳಿದಿರುವಂತೆ ಎಲ್ಲ ಸಾಂಪ್ರದಾಯಿಕವಾದ ಧರ್ಮಗಳ ಕೇಂದ್ರದಲ್ಲಿ ದೇವರ ಪರಿಕಲ್ಪನೆಯಿದೆ. ದೇವರು ಮತ್ತು ಅದರ ಮುಂದುವರಿಕೆಯಾಗಿ ಧರ್ಮವನ್ನು ಕುರಿತಂತೆ ಐನ್‌ಸ್ಟೀನ್ ಅವರ ವಿಚಾರಗಳು ಈ ಹೇಳಿಕೆಯಿಂದ ಸಾಕಷ್ಟು ಸ್ಪಷ್ಟವಾಗುತ್ತವೆ.

©KTBS Not to be republished

'ಕೆಟ್ಟದಕ್ಕೆ ಶಿಕ್ಷೆ ಕೊಟ್ಟು, ಒಳ್ಳೆಯದಕ್ಕೆ ಪ್ರತಿಫಲ ನೀಡುವ ಮತಧರ್ಮ ಶಾಸ್ತ್ರಗಳ ದೇವರಲ್ಲಿ ನನಗೆ ನಂಬಿಕೆಯಿಲ್ಲ. ನಾನು ಜಗತ್ತಿನಲ್ಲಿರುವ ಎಲ್ಲ ವಸ್ತುಗಳ ಕ್ರಮಬದ್ಧ ಸಂಯೋಜನೆ ಹಾಗೂ ಸಮನ್ವಯಗಳ ಮೂಲಕವೇ ತನ್ನ ಇರುವಿಕೆಯನ್ನು ತೋರಿಸಿಕೊಳ್ಳುವ ಸ್ಪಿನೋಜಾನ ದೇವರನ್ನು ನಂಬುತ್ತೇನೆ. ಮನುಷ್ಯ ಜೀವಿಗಳ ವರ್ತನೆ ಹಾಗೂ ಭವಿಷ್ಯದ ಬಗ್ಗೆ ತಲೆ ಕೆಡಿಸಿಕೊಳ್ಳುವ ದೇವರನ್ನು ನಾನು ನಂಬುವುದಿಲ್ಲ.' ಸ್ಪಿನೋಜಾ ಒಬ್ಬ ಡಚ್ ತತ್ತ್ವಜ್ಞಾನಿ. ದೇವರು ಮತ್ತು ಧರ್ಮಕ್ಕೆ ಸಂಬಂಧಿಸಿದಂತೆ ಅವನ ಅಸಾಂಪ್ರದಾಯಿಕ ದೃಷ್ಟಿಕೋನಕ್ಕಾಗಿ ಆಮಸ್ಟರ್‌ಡಂನ ಸಿನಗಾಗ್‌ರವರು ಅವನಿಗೆ ಹಿಂಸೆ ಕೊಟ್ಟು ಅವನನ್ನು ಮತದಿಂದ ಹೊರಹಾಕಿದ್ದರು. ಜೀವಮಾನ ಪರ್ಯಂತ ಅವನನ್ನು ಪೀಡಿಸಿದರು. ಐನ್‌ಸ್ಟೀನ್ ಅವರ ಮೇಲಿನ ಹೇಳಿಕೆಯಿಂದ ಅವರ ಕಲ್ಪನೆಯ ದೇವರಿಗೂ ಮನುಷ್ಯನ ವ್ಯವಹಾರಗಳಿಗೂ ಯಾವುದೇ ಸಂಬಂಧವಿಲ್ಲವೆಂಬ ಸಂಗತಿಯು ಸ್ಪಷ್ಟವಾಗಿ ಮನದಟ್ಟಾಗುತ್ತದೆ. ಅವರ ಪ್ರಕಾರ ಧರ್ಮವು ಯಾವುದೇ ದೈವೀ ಅಧಿಕಾರವನ್ನು ಅವಲಂಬಿಸದೆ ಸಂಪೂರ್ಣವಾಗಿ ನೈತಿಕವಾಗಿತ್ತು. ಸಹಜವಾಗಿಯೇ ಈ ಮಾತುಗಳು ಬಹಳ ಮುಖ್ಯವಾದವು. ದೇವರನ್ನು ಒಂದೇ ಸಮನೆ ತಮ್ಮ ವಾಣಿಜ್ಯ ವ್ಯವಹಾರಗಳಿಗೆ ಬಳಸುತ್ತಾ ಬಂದಿರುವ ಜನರಿಗೆ ಐನ್‌ಸ್ಟೀನ್‌ರ ಹೆಸರೆತ್ತುವ ಯಾವ ಅಧಿಕಾರವೂ ಇಲ್ಲ. ದೇವರ, ಧರ್ಮಗಳನ್ನು ಕುರಿತು ತಮ್ಮ ಒರಟು ಒರಟಾದ, ಅಪಾಯಕಾರಿ ಸಿದ್ಧಾಂತಗಳ ಸಮರ್ಥನೆಗೆ, ಆ ಮಹಾವಿಜ್ಞಾನಿಯ ಹೆಸರನ್ನು ಉಪಯೋಗಿಸಿಕೊಳ್ಳುವುದು ಅನ್ಯಾಯವೂ ಹೌದು.

ನಾನು ಈ ಪತ್ರವನ್ನು ಐನ್‌ಸ್ಟೀನ್‌ರ ಬದುಕನ್ನು ರೂಪಿಸಿದ ಎರಡು ಹೇಳಿಕೆಗಳ ಮೂಲಕ ಮುಗಿಸಿದರೆ ಅನುಚಿತವಾಗಲಾರದೆಂದು ತಿಳಿಯುತ್ತೇನೆ.

'ಸಾಮಾನ್ಯ ಮನುಷ್ಯರು ಸಾಧಿಸ ಬಯಸುವ ಆದರ್ಶಗಳಾದ ಆಸ್ತಿಪಾಸ್ತಿ, ಸುಖಭೋಗ ಮತ್ತು ಬಹಿರಂಗದ ಯಶಸ್ಸುಗಳು ಮೊದಲಿನಿಂದಲೂ ಬಹಳ ತುಚ್ಛವೆಂದು ನನಗೆ ತೋರಿದೆ.'


'ಯಶಸ್ಸನ್ನು ಸಂಪಾದಿಸಿದ ಮನುಷ್ಯನಾಗಲು ಪ್ರಯತ್ನಿಸಬೇಡ. ಮೌಲ್ಯಗಳಿಗೆ ಬೆಲೆಕೊಡುವ ಮನುಷ್ಯನಾಗು.'

ಆಳವಾದ ಒಳನೋಟಗಳನ್ನು ನೀಡುವ ಈ ಹೇಳಿಕೆಗಳು ಸಾಮಾನ್ಯವಾಗಿ ಎಲ್ಲ ಮನುಷ್ಯರಿಗೆ ಅದರಲ್ಲೂ ವಿಶೇಷವಾಗಿ ನಮ್ಮ ರಾಜಕಾರಣಿಗಳಿಗೆ ಬಹಳ ಮುಖ್ಯವೆಂದು ನಾನು ತಿಳಿಯುತ್ತೇನೆ.

* * * *

©KTBS Not to be republished

## ಕೃತಿಕಾರರ ಪರಿಚಯ :



**ಡಾ. ಎಚ್. ನರಸಿಂಹಯ್ಯ** ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ೧೯೨೦ ರಲ್ಲಿ ಜನಿಸಿದರು. ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ ಇವರು ಬೆಂಗಳೂರಿನ ಬಸವನಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಾಪಕ, ಪ್ರಾಧ್ಯಾಪಕ ಮತ್ತು ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯದ ಉಪಕುಲಪತಿಗಳೂ ಆಗಿದ್ದರು. ಇವರಿಗೆ ಗುಲ್ಬರ್ಗ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ ಲಭಿಸಿವೆ.'ಹೋರಾಟದ ಹಾದಿ' ಎಂಬುದು ಇವರ ಆತ್ಮಕಥೆ.


ಪ್ರಸ್ತುತ ಲೇಖನವನ್ನು ಎಚ್. ನರಸಿಂಹಯ್ಯನವರ **'ತೆರೆದ ಮನ'** ಕೃತಿಯಿಂದ ಆರಿಸಿದೆ.

## ಟಿಪ್ಪಣಿಗಳು :

**೧. ಆಲ್ಬರ್ಟ್ ಐನ್‌ಸ್ಟೀನ್ :**

ಇಪ್ಪತ್ತನೇ ಶತಮಾನದ ಒಬ್ಬ ವಿಶ್ವವಿಖ್ಯಾತ ವಿಜ್ಞಾನಿ. ಜರ್ಮನಿಯ ಉಲ್ಮ್ ನಗರದಲ್ಲಿ ೧೮೭೯ ರಲ್ಲಿ ಜನಿಸಿದ ಇವರು ಯಹೂದಿ ಎಂಬ ಕಾರಣಕ್ಕಾಗಿ ದೇಶಭ್ರಷ್ಟರಾಗಬೇಕಾಯಿತು. ಅಮೇರಿಕಾದಲ್ಲಿ ತಮ್ಮ ಸಂಶೋಧನಾ ಕಾರ್ಯವನ್ನು ಮುಂದುವರಿಸಿದ ಐನ್‌ಸ್ಟೀನರು ತಮ್ಮ ಸಾಪೇಕ್ಷ ಸಿದ್ಧಾಂತವನ್ನು ೧೯೦೫ ರಲ್ಲಿ ಮಂಡಿಸಿದರು. ೧೯೨೧ ರಲ್ಲಿ ಇವರಿಗೆ ನೊಬೆಲ್ ಪ್ರಶಸ್ತಿ ದೊರೆಯಿತು. ಶ್ರೇಷ್ಠ ವಿಜ್ಞಾನಿ ಮತ್ತು ಮಾನವತಾವಾದಿ ಆಗಿದ್ದ ಐನ್‌ಸ್ಟೀನರು ೧೯೫೫ ರಲ್ಲಿ ನಿಧನರಾದರು.

**೨. ಸ್ಪಿನೋಜಾ :**



ಡಚ್ ತತ್ತ್ವಜ್ಞಾನಿಯಾದ ಈತನ ಪೂರ್ಣ ಹೆಸರು ಬೆನೆಡಿಕ್ಟ್ – ಡಿ – ಸ್ಪಿನೋಜಾ. ಇವನು ಪ್ರತಿಪಾದಿಸಿದ ತತ್ತ್ವವು ವಿಶ್ವ ದೇವತಾ ತತ್ತ್ವದ ಅದ್ವೈತವಾದ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಈತನ ಪ್ರಕಾರ ದೇವರು ಪ್ರೀತಿಸುವುದಿಲ್ಲ ಮತ್ತು ದ್ವೇಷಿಸುವುದಿಲ್ಲ. ಒಟ್ಟಾರೆ ವಸ್ತು ಸ್ಥಿತಿಯಂತೆ ನಿಸರ್ಗ ಮತ್ತು ದೇವರು ಮಾನವನ ಊಹೆಯ ಮಿತಿಯನ್ನು ಮೀರಿದುದಾಗಿವೆ.

©KTBS Not to be republished

# ಅಭ್ಯಾಸ

## I. ಪದಗಳ ಅರ್ಥ :

**ಅಪರಿಪೂರ್ಣ** – ಪೂರ್ಣವಲ್ಲದ

**ಉದ್ಧರಿಸು** – ಉದಾಹರಿಸು; ಇತರರು ಹೇಳಿದ ಮಾತನ್ನು ಎತ್ತಿ ಹೇಳುವುದು.

**ಕಟ್ಟಾ** – ಪಕ್ಕಾ

**ತುಚ್ಛ** – ನೀಚ; ನಿಂದನೀಯ.

**ನಿಲುವು** – ಅಭಿಪ್ರಾಯ

**ನಿರ್ವಚನ** – ವಿವರಣೆ; ವ್ಯಾಖ್ಯಾನ.

**ಪರಿಕಲ್ಪನೆ** –ಒಂದು ವಿಷಯದ ಖಚಿತ ಚಿಂತನೆ.

**ಮೌಲ್ಯ** – ಬೆಲೆ; ಅಮೂಲ್ಯ ಗುಣ.

**ವರ್ತನೆ** – ನಡತೆ; ರೂಢಿ.

**ವಾಗ್ವಾದ** – ಚರ್ಚೆ

**ಸಂಯೋಜನೆ** – ಕೂಡಿಸುವಿಕೆ

**ಸಮನ್ವಯ** – ಹೊಂದಾಣಿಕೆ

## II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಗಳಿಂದ ಸೂಕ್ತವಾದುದನ್ನು ಆಯ್ದು ಬರೆಯಿರಿ.**

೧. ಐನ್‌ಸ್ಟೀನ್ ಶ್ರೇಷ್ಠ ___________ ಆಗಿದ್ದರು.

ಅ) ತತ್ವಜ್ಞಾನಿ ಬ) ವಿಜ್ಞಾನಿ ಕ) ಧರ್ಮಗುರು ಡ) ರಾಜಕಾರಣಿ

೨. ಐನ್‌ಸ್ಟೀನ್ ಅವರ ಪ್ರಕಾರ ಮನುಷ್ಯ ಬೆಲೆ ಕೊಡಬೇಕಾದುದು ___________

ಅ) ಸುಖಭೋಗಕ್ಕೆ ಬ) ಆಸ್ತಿಪಾಸ್ತಿಗೆ ಕ) ಮೌಲ್ಯಗಳಿಗೆ ಡ) ಯಶಸ್ಸಿಗೆ

೩. ಐನ್‌ಸ್ಟೀನ್ ಪ್ರಕಾರ ಧರ್ಮ ___________ ಅವಲಂಬಿಸಿದೆ.

ಅ) ದೇವರನ್ನು ಬ) ವಾಣಿಜ್ಯ ವ್ಯವಹಾರವನ್ನು ಕ) ಶಾಸ್ತ್ರಗಳನ್ನು ಡ) ನೈತಿಕತೆಯನ್ನು

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಧಾರ್ಮಿಕ ವ್ಯಕ್ತಿಗಳು ಐನ್‌ಸ್ಟೀನ್ ಅವರನ್ನು ಏನೆಂದು ಪರಿಭಾವಿಸುತ್ತಾರೆ?

೨. ಧರ್ಮ ಮತ್ತು ವಿಜ್ಞಾನದ ಬಗ್ಗೆ ಐನ್‌ಸ್ಟೀನ್ ನೀಡಿರುವ ಪ್ರಸಿದ್ಧ ಹೇಳಿಕೆ ಯಾವುದು?

೩. ಐನ್‌ಸ್ಟೀನ್ ದೇವರಿಗೆ ಸಂಬಂಧಿಸಿದಂತೆ ಯಾರ ವಿಚಾರಗಳನ್ನು ನಂಬಿದ್ದರು?

೪. ಸ್ಪಿನೋಜಾ ಯಾರು? ಅವರು ಹಿಂಸೆಗೊಳಗಾದದ್ದು ಏಕೆ?

೫. ಐನ್‌ಸ್ಟೀನ್ ಅವರ ಹೆಸರೆತ್ತುವ ಅಧಿಕಾರ ಯಾರಿಗೆ ಇಲ್ಲವೆಂದು ಲೇಖಕರು ಹೇಳುತ್ತಾರೆ?

©KTBS Not to be republished

ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

೧. ದೇವರು ಮತ್ತು ಧರ್ಮದ ಬಗ್ಗೆ ಐನ್‌ಸ್ಟೀನ್ ಅವರ ನಂಬಿಕೆಗಳೇನು?

೨. ಐನ್‌ಸ್ಟೀನ್ ಅವರ ಹೆಸರನ್ನು ಯಾವ ವಿಚಾರಗಳಿಗೆ ಬಳಸಿಕೊಳ್ಳುವುದು ಅನ್ಯಾಯವಾಗುತ್ತದೆ?

೩. ಮನುಷ್ಯನ ಯಾವ ಆದರ್ಶಗಳು ಐನ್‌ಸ್ಟೀನ್ ಅವರಿಗೆ ತುಚ್ಛ ಅನಿಸಿದವು?

ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.

೧. ದೇವರು ಮತ್ತು ಧರ್ಮದ ಬಗ್ಗೆ ಐನ್‌ಸ್ಟೀನ್ ಅವರ ನಂಬಿಕೆಗಳಿಂದ ಸ್ಪಷ್ಟಗೊಳ್ಳುವ ವಿಚಾರಗಳೇನು?

೨. ಐನ್‌ಸ್ಟೀನ್ ಅವರ ಬದುಕನ್ನು ರೂಪಿಸಿದ ಎರಡು ಹೇಳಿಕೆಗಳಾವುವು? ಅವುಗಳನ್ನು ವಿವರಿಸಿ.

ಉ) ಸಂದರ್ಭದೊಡನೆ ಸ್ವಷ್ಟೀಕರಿಸಿರಿ.

೧. 'ಧರ್ಮವಿಲ್ಲದ ವಿಜ್ಞಾನ ಕುಂಟು ಮತ್ತು ವಿಜ್ಞಾನವಿಲ್ಲದ ಧರ್ಮ ಕುರುಡು.'

೨. 'ಮನುಷ್ಯ ಜೀವಿಗಳ ವರ್ತನೆ ಹಾಗೂ ಭವಿಷ್ಯದ ಬಗ್ಗೆ ತಲೆಕೆಡಿಸಿಕೊಳ್ಳುವ ದೇವರನ್ನು ನಾನು ನಂಬುವುದಿಲ್ಲ.'

೩. 'ಮೌಲ್ಯಗಳಿಗೆ ಬೆಲೆಕೊಡುವ ಮನುಷ್ಯನಾಗು.'

## III. ಭಾಷಾಭ್ಯಾಸ :

ಅ) ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿರಿ.

ಶತಮಾನೋತ್ಸವ, ಮಾತ್ರವಲ್ಲ, ವಾಗ್ವಾದ, ಹೇಳಿಕೆಯಿಂದ, ದೇವರಲ್ಲಿ, ಮನದಟ್ಟು.

ಆ) ಕೆಳಗೆ ನೀಡಿರುವ ಪದಗಳನ್ನು ಸ್ವಂತವಾಕ್ಯಗಳಲ್ಲಿ ಬರೆಯಿರಿ.

ನಂಬಿಕೆ, ಅವಲಂಬಿಸು, ಅಧಿಕಾರ, ಆದರ್ಶ, ಮನದಟ್ಟಾಗು, ಉದ್ಧರಿಸು.

ಇ) ಕೆಳಗಿನ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಹೆಸರಿಸಿರಿ.

ವಿಜ್ಞಾನಿಗಳಲ್ಲಿ, ಹೆಸರನ್ನು, ದೇವರ, ಅವರಿಗೆ, ಮತದಿಂದ, ಕಲ್ಪನೆಯ, ಬದುಕನ್ನು, ಧರ್ಮಕ್ಕೆ.

ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.

ಧರ್ಮ, ಅಪರಿಪೂರ್ಣ, ಅಗತ್ಯ, ಸ್ಪಷ್ಟ, ಶಿಕ್ಷೆ, ನಂಬಿಕೆ, ಹಿಂಸೆ,
ಸಹಜ, ಯಶಸ್ಸು, ಒರಟು, ಅನ್ಯಾಯ, ಅನುಚಿತ, ಬಹಿರಂಗ.

©KTBS Not to be republished

ಉ) ಪದೇ ಪದೇ – ಇಂತಹ ಐದು ದ್ವಿರುಕ್ತಿಗಳನ್ನು ಬರೆಯಿರಿ.

## IV. ಸೈದ್ಧಾಂತಿಕ ವ್ಯಾಕರಣ :

### ದ್ವಿರುಕ್ತಿ – ಜೋಡುನುಡಿ – ಅವ್ಯಯ :

ನಾವು ಮಾತನಾಡುವ, ಬರೆಯುವ ಸಂದರ್ಭಗಳಲ್ಲಿ ಕೆಲವು ಪದಗಳನ್ನು ವಿಶಿಷ್ಟ ರೀತಿಯಲ್ಲಿ ಬಳಸುತ್ತೇವೆ. ಅವು ನಮ್ಮ ಅಂತರಂಗದ ಭಾವನೆಗಳನ್ನು ಸ್ಪಷ್ಟಪಡಿಸುವುದರೊಂದಿಗೆ ಭಾಷೆಯ ಸೊಬಗನ್ನೂ ಹೆಚ್ಚಿಸುತ್ತವೆ. ಅಂತಹ ಪದಗಳಲ್ಲಿ ಹಲವು ವಿಧಗಳಿವೆ. ಇಲ್ಲಿ ದ್ವಿರುಕ್ತಿ, ಜೋಡುನುಡಿ ಹಾಗೂ ಅವ್ಯಯಗಳನ್ನು ಮಾತ್ರ ಪರಿಚಯಿಸಲಾಗಿದೆ.

### ದ್ವಿರುಕ್ತಿ :

ಹೌದುಹೌದು, ಮನೆಮನೆ, ನಿಲ್ಲುನಿಲ್ಲು, ಬನ್ನಿಬನ್ನಿ, ಬೇಡಬೇಡ, ಓಡುಓಡು – ಹೀಗೆ ಒಂದೇ ಪದ ಎರಡು ಸಾರಿ ಬಳಕೆಯಾದರೆ ಅದನ್ನು 'ದ್ವಿರುಕ್ತಿ' ಎನ್ನುತ್ತಾರೆ.

'ದ್ವಿ' ಎಂದರೆ 'ಎರಡು', 'ಉಕ್ತಿ' ಎಂದರೆ 'ಹೇಳು', 'ದ್ವಿರುಕ್ತಿ' ಎಂದರೆ 'ಎರಡುಬಾರಿ ಹೇಳು' ಎಂದು ಅರ್ಥ. ಸಾಮಾನ್ಯವಾಗಿ ಉತ್ಸಾಹ, ಅವಸರ, ದುಃಖ, ಇತ್ಯಾದಿ ಸಂದರ್ಭಗಳಲ್ಲಿ ಭಾವನೆಗಳ ತೀವ್ರತೆಯನ್ನು ವ್ಯಕ್ತಪಡಿಸುವಾಗ ದ್ವಿರುಕ್ತಿಗಳು ಬಳಕೆಯಾಗುತ್ತವೆ.

ಕೆಲವೊಮ್ಮೆ ದ್ವಿರುಕ್ತಿಯಲ್ಲಿನ ಎರಡು ಪದಗಳು ಕೂಡಿದಾಗ ಮೊದಲ ಪದ ರೂಪಾಂತರಗೊಳ್ಳುವುದುಂಟು.

**ಉದಾ :** ಕಡೆ + ಕಡೆ = ಕಟ್ಟಕಡೆ. ಮೊದಲು + ಮೊದಲು = ಮೊತ್ತಮೊದಲು.
ಕೆಳಗೆ + ಕೆಳಗೆ = ಕೆಳಕೆಳಗೆ. ಹೊಸದು + ಹೊಸದು = ಹೊಚ್ಚಹೊಸದು.
ತುದಿ + ತುದಿ = ತುತ್ತತುದಿ, ತುಟ್ಟತುದಿ. ಒಂದು + ಒಂದು = ಒಂದೊಂದು.
ಬಯಲು + ಬಯಲು = ಬಟ್ಟಬಯಲು ಮೆಲ್ಲನೆ + ಮೆಲ್ಲನೆ = ಮೆಲ್ಲಮೆಲ್ಲನೆ
ಹಸಿರು + ಹಸಿರು = ಹಚ್ಚಹಸಿರು ಬಡಿ + ಬಡಿ = ಬಗ್ಗುಬಡಿ
ನಡುವೆ + ನಡುವೆ = ನಟ್ಟನಡುವೆ ನುರಿ + ನುರಿ = ನುಗ್ಗುನುರಿ.

### ಜೋಡುನುಡಿ :

ದ್ವಿರುಕ್ತಿಯಂತೆಯೇ ಬೇರೊಂದು ಬಗೆಯ ಶಬ್ದಗಳನ್ನು ಭಾಷೆಯಲ್ಲಿ ಪ್ರಯೋಗಿಸಲಾಗುತ್ತದೆ. ಅವುಗಳನ್ನು ಜೋಡುನುಡಿಗಳೆಂದು ಕರೆಯುತ್ತಾರೆ. ಅರ್ಥವಿರುವ ಪದದೊಂದಿಗೆ ಸಮಾನಾರ್ಥ, ವಿರುದ್ಧಾರ್ಥ ಇಲ್ಲವೇ ಅರ್ಥರಹಿತ ಪದಗಳನ್ನು ಜೋಡಿಸಿ ಬಳಸುವುದುಂಟು. ಇವುಗಳನ್ನೇ **'ಜೋಡುನುಡಿ'** ಎಂದು ಕರೆಯಲಾಗುತ್ತದೆ. ಪ್ರಾಸಕ್ಕಾಗಿ ಭಾಷೆಯ ಸೊಗಸನ್ನು ಹೆಚ್ಚಿಸಲು ಇವನ್ನು

©KTBS Not to be republished

ಬಳಸಿದಂತೆ ತೋರುತ್ತದೆ.

ಅರ್ಥದ ತಿಳಿವಳಿಕೆಯ ದೃಷ್ಟಿಯಿಂದ ಸಮಾನಾರ್ಥಕ ಜೋಡುನುಡಿ, ಪೂರಕಾರ್ಥಕ ಜೋಡುನುಡಿ, ವಿರುದ್ಧಾರ್ಥಕ ಜೋಡುನುಡಿ ಮತ್ತು ಅಸ್ಪಷ್ಟವಾದ ಜೋಡು ನುಡಿಗಳೆಂದು ವಿಭಜಿಸಬಹುದು.

| **ಸಮಾನಾರ್ಥಕ ಜೋಡುನುಡಿ** | **ಪೂರಕಾರ್ಥಕ ಜೋಡುನುಡಿ** | **ವಿರುದ್ಧಾರ್ಥಕ ಜೋಡುನುಡಿ** | **ಅಸ್ಪಷ್ಟಾರ್ಥಕ ಜೋಡುನುಡಿ** |
|---|---|---|---|
| ಅವಳಿಜವಳಿ | ಅಕ್ಕಪಕ್ಕ | ಕಾಡುನಾಡು | ಅರೆಬರೆ |
| ಅಂದಚಂದ | ಅಚ್ಚುಮೆಚ್ಚು | ಆದಿ ಅಂತ್ಯ | ಅಡ್ರಾ ಬಡ್ರಾ |
| ಎಡರು ತೊಡರು | ಆಚಾರವಿಚಾರ | ಕನಸುನನಸು | ಅಡ್ಡಾ ದಿಡ್ಡಿ |
| ಉಡುಗೆತೊಡುಗೆ | ಆಸ್ತಿ ಅಂತಸ್ತು | ನೋವುನಲಿವು | ಕೂಲಿನಾಲಿ |
| ಕಪ್ಪಕಾಣಿಕೆ | ಓದುಬರೆಹ | ಬೇವುಬೆಲ್ಲ | ಹುಳುಹುಪ್ಪಟೆ |
| ಗೆಡ್ಡೆಗೆಣಸು | ಕನಸುಮನಸು | ಪಂಡಿತ ಪಾಮರ | ತಲೆಗಿಲೆ |
| ತಳಬುಡ | ಕಾಡುಮೇಡು | ಬೆಳಗುಬೈಗು | ಮುಸರೆಗಿಸರೆ |

## ಅವ್ಯಯಗಳು :

೧. ನೀನು **ಮೆಲ್ಲಗೆ** ಹೋಗು.

೨. ಅವಳು **ಮೆಲ್ಲಗೆ** ಓದಿದಳು.

೩. ಅವರು **ಮೆಲ್ಲಗೆ** ನಕ್ಕರು.

೪. ಅದು **ಮೆಲ್ಲಗೆ** ನಡೆಯಿತು.

ಮೇಲಿನ ಎಲ್ಲಾ ವಾಕ್ಯಗಳಲ್ಲಿ ಬಂದಿರುವ 'ಮೆಲ್ಲಗೆ' ಎಂಬ ಪದವು ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕ ಲಿಂಗಗಳಲ್ಲೂ, ಏಕವಚನ, ಬಹುವಚನಗಳಲ್ಲೂ ಯಾವ ವ್ಯತ್ಯಾಸವನ್ನೂ ಹೊಂದದೆ ಬಳಕೆಯಾಗಿದೆ. 'ಮೆಲ್ಲಗೆ' ಎಂಬುದರ ಮೇಲೆ ಯಾವ ವಿಧವಾದ ಪ್ರತ್ಯಯಗಳೂ ಸೇರುವುದಿಲ್ಲ. ಹೀಗೆ ಲಿಂಗ, ವಚನ, ವಿಭಕ್ತಿಗಳಿಂದ ಯಾವ ವ್ಯತ್ಯಾಸವನ್ನೂ ಹೊಂದದ ಅನೇಕ ಶಬ್ದಗಳನ್ನು ಭಾಷೆಯಲ್ಲಿ ಬಳಸುತ್ತೇವೆ. ಸುಮ್ಮನೆ, ನೆಟ್ಟನೆ, ಪಕ್ಕನೆ, ಮೆಲ್ಲಗೆ, ಸುತ್ತಲೂ, ಹೌದು, ತರುವಾಯ, ಇಲ್ಲ – ಇಂತಹ ಶಬ್ದಗಳನ್ನು 'ಅವ್ಯಯ' ಎಂದು ಕರೆಯುತ್ತಾರೆ. ಇದರ ಸೂತ್ರವನ್ನು ಹೀಗೆ ಹೇಳಬಹುದು.

**'ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ, ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೆ, ಏಕರೂಪವಾಗಿರುವ ಶಬ್ದಗಳನ್ನು 'ಅವ್ಯಯ' ಎಂದು ಕರೆಯಲಾಗುತ್ತದೆ'.**

©KTBS Not to be republished

## ಅವ್ಯಯದ ವಿಧಗಳು :

| ಕ್ರ.ಸಂ. | ಅವ್ಯಯದ ವಿಧಗಳು | ಉದಾಹರಣೆಗಳು |
|---|---|---|
| ೧. | ಸಾಮಾನ್ಯ ಅವ್ಯಯ | ಚೆನ್ನಾಗಿ, ನೆಟ್ಟಗೆ, ತಟ್ಟನೆ, ಬಿಮ್ಮನೆ, ಸುಮ್ಮನೆ, ಬೇಗನೆ, ಹಾಗೆ. |
| ೨. | ಅನುಕರಣ ಅವ್ಯಯಗಳು | ಜುಳುಜುಳು, ಪಟಪಟ, ಧಗಧಗ, ಸುಯ್ಯನೆ, ದಡದಡ, ಢಣಢಣ, |
| ೩. | ಭಾವ ಸೂಚಕ ಅವ್ಯಯಗಳು | ಎಲಾ! ಅಯ್ಯೋ! ಅಕಟಕಟಾ! ಆಹಾ! ಭಲಾ! ಥೂ! ಅಬ್ಬಾ! |
| ೪. | ಕ್ರಿಯಾರ್ಥಕ ಅವ್ಯಯಗಳು | ಉಂಟು, ಬೇಕು, ಬೇಡ, ಅಹುದು, ಸಾಕು, ಇಲ್ಲ, ಅಲ್ಲ, ಹೌದು. |
| ೫. | ಸಂಬಂಧಾರ್ಥಕ ಅವ್ಯಯಗಳು | ಮತ್ತು, ಅಥವಾ, ಆದ್ದರಿಂದ, ಆದುದರಿಂದ, ಅಲ್ಲದೆ, ಹಾಗಾದರೆ. |
| ೬. | ಕೃದಂತ ಅವ್ಯಯ | ಇರಲು, ಇರಲಾಗಿ. (ಬರುತ್ತಿರಲು, ಬರುತ್ತಿರಲಾಗಿ) |
| ೭. | ತದ್ಧಿತಾಂತ ಅವ್ಯಯ | ಅಂತೆ, ತನಕ, ವರೆಗೆ, ಮಟ್ಟಿಗೆ. (ರಾಮನಂತೆ, ಮನೆತನಕ....) |
| ೮. | ಅವಧಾರಣಾರ್ಥಕ ಅವ್ಯಯ | ಅದೇ, ಇದೇ, ನಾನೇ – ಇವುಗಳಲ್ಲಿರುವ 'ಏ' ಕಾರ. |

## ಅನುಕರಣಾವ್ಯಯ:

ನಾವು ಕೇಳಿದ ಯಾವುದೇ ಧ್ವನಿಯನ್ನು ಯಥಾವತ್ತಾಗಿ ಅನುಕರಿಸಿ ಹೇಳುವ ಶಬ್ದಗಳೇ ಅನುಕರಣಾವ್ಯಯಗಳು.

ಉದಾಹರಣೆ : ಬೆಂಕಿಯು **ಧಗಧಗ** ಉರಿಯಿತು.

ಕಲ್ಲು **ರೊಯ್ಯನೆ** ಹಾರಿ ಬಂತು.

ನಾಯಿ **ಬೌಬೌ** ಎಂದು ಬೊಗಳಿತು.

ಧಗಧಗ, ರೊಯ್ಯನೆ, ಬೌಬೌ – ಇಂತಹ ಅರ್ಥವಿಲ್ಲದ ಧ್ವನಿ ವಿಶೇಷಗಳನ್ನು ಅನುಕರಣೆ ಮಾಡಿ ಹೇಳಿದ ಶಬ್ದಗಳನ್ನು ಅನುಕರಣಾವ್ಯಯಗಳು ಎನ್ನುತ್ತಾರೆ. ಇದೇರೀತಿ ಪಟಪಟ, ಚಟಪಟ, ಕರಕರ, ಗುಡುಗುಡು, ತಟತಟ, ಜುಳುಜುಳು, ಸುಯ್ಯನೆ – ಇತ್ಯಾದಿಗಳು ಅನುಕರಣಾವ್ಯಯಗಳಾಗಿವೆ.

## V. ಚಟುವಟಿಕೆಗಳು :

೧. ಐನ್‌ಸ್ಟೀನ್‌ರ ಬದುಕು ಮತ್ತು ಸಾಧನೆಯ ಬಗ್ಗೆ ವಿಷಯ ಸಂಗ್ರಹಣೆ ಮಾಡಿರಿ.

೨. ಖ್ಯಾತ ವಿಜ್ಞಾನಿಗಳ ಚಿತ್ರ ಸಂಪುಟವನ್ನು ತಯಾರಿಸಿರಿ.

೩. ಎಚ್. ನರಸಿಂಹಯ್ಯನವರ ಆತ್ಮಕಥೆ 'ಹೋರಾಟದ ಹಾದಿ' ಕೃತಿಯನ್ನು ಓದಿರಿ.

©KTBS Not to be republished

# ೮. ಭೀಷ್ಮ ಪ್ರತಿಜ್ಞೆ

– ಎ. ಆರ್. ಕೃಷ್ಣಶಾಸ್ತ್ರೀ

**ಪಾಠ ಪ್ರವೇಶ :** ಭಾರತೀಯ ಮಹಾಕಾವ್ಯಗಳಲ್ಲಿ ಒಂದಾದ ಮಹಾಭಾರತದ ಕಥೆಯನ್ನು ಕೇಳದವರಿಲ್ಲ. ಇದರಲ್ಲಿ ಬರುವ ಒಂದೊಂದು ಪಾತ್ರವೂ ವಿಶೇಷವಾದ ಗುಣಗಳಿಂದ ಕೂಡಿದ್ದು ಓದುಗರ ಮೇಲೆ ಪ್ರಭಾವ ಬೀರಿ, ಜೀವನ ಮೌಲ್ಯಗಳನ್ನು ಮನವರಿಕೆ ಮಾಡಿಕೊಡುತ್ತವೆ. ಅರ್ಜುನನ ಪರಾಕ್ರಮ, ದುರ್ಯೋಧನನ ಛಲ, ಕರ್ಣನ ತ್ಯಾಗ, ಭೀಮನ ಸಾಹಸ, ಭೀಷ್ಮನ ಪ್ರತಿಜ್ಞೆ ಓದುಗರಲ್ಲಿ ಸಂಚಲನವನ್ನುಂಟುಮಾಡುತ್ತವೆ. ಮಹಾಭಾರತದಲ್ಲಿ ಭೀಷ್ಮನ ಪಾತ್ರ ಬಹು ಮುಖ್ಯವಾದುದು. ಆತನ ತ್ಯಾಗ, ಪ್ರತಿಜ್ಞೆ, ಬದ್ಧತೆ ಹಾಗೂ ಉದಾತ್ತಗುಣಗಳನ್ನು ಮಕ್ಕಳಿಗೆ ಪರಿಚಯಿಸುವುದು ಇಲ್ಲಿನ ಆಶಯವಾಗಿದೆ.

ಶಂತನು ಧರ್ಮಾತ್ಮನೆಂದೂ ಸತ್ಯವಂತನೆಂದೂ ಹೆಸರುಗೊಂಡು ಹಸ್ತಿನಾಪುರದಲ್ಲಿ ರಾಜ್ಯವಾಳುತ್ತಿದ್ದನು. ಅವನು ನೋಡುವುದಕ್ಕೆ ಚಂದ್ರನಂತೆ ಸುಂದರನಾಗಿದ್ದರೂ, ತೇಜಸ್ಸಿನಲ್ಲಿ ಸೂರ್ಯನಂತೆಯೂ, ವೇಗದಲ್ಲಿ ವಾಯುವಿನಂತೆಯೂ ಇದ್ದನು. ಕೋಪಬಂದಾಗ ಯಮನಂತಿದ್ದರೂ ತಾಳ್ಮೆಯಲ್ಲಿ ಭೂಮಿಯಂತೆ ಇದ್ದನು. (ಹೀಗೆ ರಾಜ್ಯವಾಳುತ್ತ ಅವನು ಮೂವತ್ತಾರು ವರ್ಷ ಸ್ತ್ರೀ ಸೌಖ್ಯವನ್ನಪೇಕ್ಷಿಸದೆ ಕಾಡಿನಲ್ಲಿಯೇ ಹೆಚ್ಚಾಗಿ ಓಡಾಡಿಕೊಂಡು ಇರುತ್ತಿದ್ದನು.) ದೇವವ್ರತನೂ (ಭೀಷ್ಮ) ತಂದೆಯಂತೆಯೇ ರೂಪವಂತನಾಗಿ ನಡೆನುಡಿಗಳಲ್ಲಿ ಅವನನ್ನೇ ಹೋಲುತ್ತ, ಅವನಂತೆಯೇ ವಿದ್ಯಾವಂತನೂ ಶಸ್ತ್ರಾಸ್ತ್ರ ನಿಪುಣನೂ ಬಲಶಾಲಿಯೂ ಸತ್ವಶಾಲಿಯೂ ಆದನು. ಆಗ ಅವನನ್ನು ಶಂತನುವು ಯುವರಾಜನಾಗಿ ಮಾಡಿದನು.

ದೇವವ್ರತನು ತನ್ನ ನಡೆನುಡಿಗಳಿಂದ ತಂದೆಗೂ ರಾಷ್ಟ್ರಕ್ಕೂ ಅಚ್ಚುಮೆಚ್ಚಾದನು. ಹೀಗೆ ನಾಲ್ಕು ವರ್ಷಗಳು ಕಳೆದವು. ಅನಂತರ ಒಂದು ದಿನ ಶಂತನುವು ಯಮುನಾ ನದಿಯ ಹತ್ತಿರ ಕಾಡಿನಲ್ಲಿ ಸಂಚರಿಸುತ್ತಿದ್ದಾಗ ಒಂದು ಅಪೂರ್ವವಾದ ಸುವಾಸನೆ ಸುಳಿದುಬಂತು. ಅದು ಯಾತರದ್ದು ಎಂದು ಹುಡುಕುತ್ತ ಹೋಗಲು ದಿವ್ಯ ಸುಂದರಿಯಾಗಿದ್ದ ಒಬ್ಬ ಬೆಸ್ತರ ಹುಡುಗಿಯನ್ನು ಕಂಡು "ನೀನು ಯಾರು? ಇಲ್ಲಿ ಏನು ಮಾಡುತ್ತಿರುವೆ?" ಎಂದು ಪ್ರಶ್ನೆಮಾಡಿದನು. ಅದಕ್ಕೆ ಅವಳು "ನಾನು ಬೆಸ್ತರ ಅರಸನ ಮಗಳು; ಧರ್ಮಾರ್ಥವಾಗಿ ದೋಣಿ ನಡೆಸುತ್ತೇನೆ. ಇದು ನಮ್ಮ ತಂದೆ ನನಗೆ ವಹಿಸಿಕೊಟ್ಟಿರುವ ಕೆಲಸ" ಎಂದಳು. ರೂಪ ಮಾಧುರ್ಯ ಪರಿಮಳಗಳಿಂದೊಡಗೂಡಿ ದೇವಸುಂದರಿಯಂತಿದ್ದ ಆ ಬೆಸ್ತರ ಹುಡುಗಿಯ ಮೇಲೆ ಶಂತನುವಿಗೆ ಆಸೆಯಾಯಿತು. ಆದ್ದರಿಂದ ಆ ಹುಡುಗಿಯ ತಂದೆಯನ್ನು ಕಂಡು ಅವಳನ್ನು ತನಗೆ ಕೊಡಬೇಕೆಂದು ಕೇಳಿದನು. ಅವನು "ಮಹಾರಾಜ! ಹೆಣ್ಣಾಗಿ ಹುಟ್ಟಿದ ಮೇಲೆ ಅವಳನ್ನು ಒಬ್ಬ ವರನಿಗೆ ಕೊಟ್ಟೇಕೊಡಬೇಕು. ನೀನು ಅವಳನ್ನು ನಿನ್ನ ಧರ್ಮಪತ್ನಿಯಾಗಿ ಮಾಡಿಕೊಳ್ಳುವೆಯಾದರೆ ಪರಮ ಸಂತೋಷ. ನಿನಗೆ ಸದೃಶನಾದ ವರನು ಮತ್ತಾರು ಸಿಕ್ಕಿಯಾನು! ಆದರೆ ನನ್ನ ಮನಸ್ಸಿನಲ್ಲಿ ಒಂದು ಕೋರಿಕೆ ಇದೆ. ಅದನ್ನು ನೆರವೇರಿಸುವುದಾಗಿ ನೀನು ಪ್ರತಿಜ್ಞೆ ಮಾಡುವುದಾದರೆ ಆಗಬಹುದು;

© KTBS Not to be republished

ನೀನು ಸತ್ಯವಂತ; ಆಡಿದ ಮಾತನ್ನು ನಡೆಸುತ್ತೀಯೆ” ಎಂದನು. ಶಂತನುವು “ನಿನ್ನ ಅಪೇಕ್ಷೆಯೇನೆಂದು ಮೊದಲು ತಿಳಿಸಿದರೆ ಆಮೇಲೆ ಯೋಚಿಸುತ್ತೇನೆ; ಒಪ್ಪತಕ್ಕುದಾದರೆ ಒಪ್ಪುತ್ತೇನೆ. ಅಲ್ಲದ್ದಾದರೆ ಇಲ್ಲ” ಎನ್ನಲು, ದಾಶರಾಜನು “ಮಹಾರಾಜ! ನಿನಗೆ ಇವಳ ಹೊಟ್ಟೆಯಲ್ಲಿ ಹುಟ್ಟುವ ಮಗನು ನಿನ್ನ ಕಾಲಾನಂತರ ರಾಜನಾಗಬೇಕು; ಇದೇ ನನ್ನ ಕೋರಿಕೆ!” ಎಂದನು. ರಾಜನಿಗೆ ಇದು ಒಪ್ಪಿಗೆಯಾಗಲಿಲ್ಲ. ಆದ್ದರಿಂದ ಅವನು ಆ ಹುಡುಗಿಯನ್ನೇ ಚಿಂತಿಸುತ್ತ, ಮನಸ್ಸಿನಲ್ಲಿ ಕೊರಗುತ್ತ ಊರಿಗೆ ಹಿಂದಿರುಗಿದನು. ಹೀಗೆ ಕೊರಗುತ್ತ ಚಿಂತಾಮಗ್ನನಾಗಿದ್ದ ತಂದೆಯನ್ನು ಕಂಡು ದೇವವ್ರತನು “ಅಪ್ಪಾ! ನಿನಗೆ ಎಲ್ಲವೂ ಕ್ಷೇಮವಾಗಿದೆ; ರಾಜರು ವಿಧೇಯರಾಗಿದ್ದಾರೆ. ಹೀಗಿದ್ದರೂ ಏಕೆ ಏನೋ ಯೋಚನೆ ಮಾಡುತ್ತ ಕೊರಗುತ್ತಿದ್ದೀಯೆ? ಯಾರೊಡನೆಯೂ ಮಾತನಾಡುವುದಿಲ್ಲ?” ಎಂದು ಕೇಳಿದನು. ಅದಕ್ಕೆ ಶಂತನುವು “ಮಗು! ನಾನು ಚಿಂತಾಮಗ್ನನಾಗಿದ್ದೇನೆಂದು ನೀನು ಹೇಳಿದ್ದು ನಿಜ; ನಮ್ಮ ಈ ಹಿರಿಯಮನೆತನಕ್ಕೆ ನೀನು ಒಬ್ಬನೇ ಮಗ; ಮನುಷ್ಯರು ಮರ್ತ್ಯರು, ನಿತ್ಯರಲ್ಲ. ನಿನಗೇನಾದರೂ ವಿಪತ್ತು ಸಂಭವಿಸಿದರೆ ನಮ್ಮ ಕುಲವು ನಿಂತುಹೋಗುತ್ತದೆ; ನೀನೇನೋ ಒಬ್ಬನಾದರೂ ನೂರು ಮಕ್ಕಳಿಗಿಂತ ಹೆಚ್ಚಾದವನೇಯೆ; ನನಗೂ ಸುಮ್ಮಸುಮ್ಮನೆ ಮತ್ತೆ ಹೆಂಡತಿಯನ್ನು ಕಟ್ಟಿಕೊಳ್ಳುವುದಕ್ಕೆ ಇಷ್ಟವಿಲ್ಲ; ಸಂತತಿ ನಷ್ಟವಾಗಬಾರದೆಂಬುದಿಷ್ಟೇ ನನ್ನ ಕೋರಿಕೆ; ನೀನು ಎಲ್ಲಾದರೂ ಕ್ಷೇಮವಾಗಿರು ಮಗು! ಆದರೆ ‘ಒಬ್ಬ ಮಗ ಮಗನಲ್ಲ’ ಎಂದು ಧರ್ಮಬಲ್ಲವರು ಹೇಳುತ್ತಾರೆ. ನೀನೋ ಶೂರ; ಅವಮರ್ಯಾದೆಯನ್ನು ಸಹಿಸದವನು; ಮೂರು ಹೊತ್ತೂ ಶಸ್ತ್ರಗಳಲ್ಲಿಯೇ ಕೈ ಇಟ್ಟುಕೊಂಡಿರುವವನು. ಇಂಥವನಿಗೆ ಶಸ್ತ್ರದಿಂದಲೇ ಕೊನೆ. ಆದ್ದರಿಂದ ನೀನೇನಾದರೂ ಶಾಂತನಾಗಿ ಬಿಟ್ಟರೆ ಏನುಗತಿ ಎಂದು ಕಳವಳಕ್ಕೆ ಸಿಕ್ಕಿದ್ದೇನೆ. ಇದೇ ಮಗು ನನ್ನ ಚಿಂತೆಗೆ ಕಾರಣ!” ಎಂದು ಉತ್ತರಕೊಟ್ಟನು.



Not to be republished ©KTBS

ದೇವವ್ರತನು ಮಹಾಬುದ್ಧಿಶಾಲಿ; ಆದ್ದರಿಂದ ಅರ್ಥವೇನು ಎಂದು ಯೋಚಿಸುತ್ತ ತನ್ನ ತಂದೆಗೆ ಆಪ್ತನಾಗಿದ್ದ ವೃದ್ಧ ಮಂತ್ರಿಯ ಹತ್ತಿರಕ್ಕೆ ಹೋಗಿ ಅವನನ್ನು ತನ್ನ ತಂದೆಯ ಚಿಂತೆಗೆ ಕಾರಣವೇನೆಂದು ಕೇಳಿದನು. ಅವನಿಂದ ನಿಜವಾದ ಸಂಗತಿ ತಿಳಿಯಲು ದೇವವ್ರತನು ಹಿರಿಯರಾಗಿದ್ದ ಕ್ಷತ್ರಿಯರನ್ನು ಕರೆದುಕೊಂಡು ದಾಶರಾಜನಲ್ಲಿಗೆ ಹೋಗಿ ತನ್ನ ತಂದೆಗೆ ಹೆಣ್ಣು ಕೊಡಬೇಕೆಂದು ಕೇಳಿದನು. ದಾಶರಾಜನು ಅವರನ್ನು ಆದರದಿಂದ ಬರಮಾಡಿಕೊಂಡು ಸತ್ಕರಿಸಿ, ಕುಳ್ಳಿರಿಸಿ, ದೇವವ್ರತನನ್ನು ಕುರಿತು "ಅಯ್ಯಾ ಶಂತನುವಿನ ಪುತ್ರ ಶ್ರೇಷ್ಠನಾದ ನೀನೇ ಆತನ ವಿಚಾರವಾಗಿ ಮಾತನಾಡಲು ಅಧಿಕಾರವುಳ್ಳವನು. ನಿನ್ನಲ್ಲಿ ಅರಿಕೆ ಮಾಡಬೇಕಾದ ಒಂದು ಮಾತಿದೆ. ಅದೇನೆಂದರೆ: ಇಂಥ ಶ್ಲಾಘ್ಯವಾದ ಸಂಬಂಧ ಒದಗಿ ಬಂದಿರುವಾಗ ಅದನ್ನು ಕಳೆದುಕೊಂಡರೆ ಯಾರೇ ಆದರೂ ಪಶ್ಚಾತ್ತಾಪ ಪಡಬೇಕಾಗುವುದು. ನಿಮ್ಮಂಥ ಗುಣಶಾಲಿಗಳು ಮತ್ತಾರಿದ್ದಾರೆ? ಆದರೆ ಹೆಣ್ಣಿನ ತಂದೆಯಾದ್ದರಿಂದ ಒಂದು ವಿಷಯವನ್ನು ಹೇಳಬೇಕೆನ್ನಿಸುತ್ತದೆ. ಮುಂದೆ ಇದು ದೊಡ್ಡ ಹಗೆತನಕ್ಕೆ ಕಾರಣವಾದೀತೇನೋ ಎಂಬುದೊಂದೇ ನನಗೆ ಹೆದರಿಕೆ. ನಿನಗೆ ಯಾರ ಮೇಲಾದರೂ ಕೋಪಬಂದಿತೆಂದರೆ ಅವನು ಸುಖವಾಗಿ ಬಾಳಲಾರ. ಕೊಟ್ಟು ತಂದು ಮಾಡುವುದರಲ್ಲಿ ಇದೊಂದೇ ನನಗೆ ಕಾಣುವ ದೋಷ. ಇನ್ನೇನೂ ಇಲ್ಲ" ಎಂದನು. ಈ ಮಾತನ್ನು ಕೇಳಿ ದೇವವ್ರತನು ತನ್ನ ಜೊತೆಯಲ್ಲಿದ್ದ ರಾಜರು ಕೇಳುತ್ತಿರಲು "ಇಗೋ ನನ್ನ ಅಭಿಮತವನ್ನು ಹೇಳುತ್ತೇನೆ ಕೇಳು, ಇಂಥ ಮಾತನ್ನು ಹಿಂದೆ ಹುಟ್ಟಿದವನು ಮುಂದೆ ಹುಟ್ಟುವವನು ಯಾವನೂ ಹೇಳಲಾರ. ನೀನು ಸೂಚಿಸಿದಂತೆಯೇ ನಡೆಸಿಕೊಡುತ್ತೇನೆ. ಈಕೆಯಲ್ಲಿ ಮುಂದೆ ಹುಟ್ಟುವ ಮಗನು ನಮಗೆ ರಾಜನಾಗುತ್ತಾನೆ! ಇದು ಸತ್ಯ!" ಎಂದನು. ಬೆಸ್ತನು ಮತ್ತೆ "ರಾಜ್ಯವಿಚಾರದಲ್ಲಿ ಇಷ್ಟು ಕಠಿಣವಾದ ಪ್ರತಿಜ್ಞೆ ಮಾಡಿ ತಂದೆಗೆ ಮದುವೆ ಮಾಡಿಸುವುದಕ್ಕೂ ಈ ಹೆಣ್ಣನ್ನು ಕೊಡಿಸುವುದಕ್ಕೂ ಧರ್ಮಾತ್ಮನಾದ ನೀನು ಅಧಿಕಾರವುಳ್ಳವನಾಗಿದ್ದೀಯೆ; ಆದರೆ ಇನ್ನೊಂದು ಮಾತಿದೆ. ಹೆಣ್ಣಿನ ತಂದೆ ಅದನ್ನು ಆಡುವುದು ಸ್ವಭಾವ. ರಾಜರ ಮುಂದೆ ಈಗ ನೀನು ಮಾಡಿದ ಪ್ರತಿಜ್ಞೆ ನಿನಗೆ ಅನುರೂಪವಾದದ್ದೇಯೆ. ಅದು ನಡೆಯುತ್ತದೆ. ಅದರಲ್ಲೇನೂ ಸಂಶಯವಿಲ್ಲ. ಆದರೆ ನಿನ್ನ ಮಗ ಸುಮ್ಮನಿರುತ್ತಾನೋ? ಆ ವಿಚಾರದಲ್ಲಿ ನನಗೆ ಸಂಶಯ!" ಎಂದನು. ಅವನ ಅಭಿಪ್ರಾಯವನ್ನು ತಿಳಿದು ದೇವವ್ರತನು "ದಾಶರಾಜ! ಈ ರಾಜರ ಸಾಕ್ಷಿಯಾಗಿ ಆಡುವ ನನ್ನ ಮಾತನ್ನು ಕೇಳು! ರಾಜ್ಯವನ್ನು ಈಗಾಗಲೇ ಬಿಟ್ಟುಕೊಟ್ಟಿದ್ದೇನೆ. ಮಕ್ಕಳ ಸಂಬಂಧವಾಗಿ ಈ ನಿರ್ಧಾರ ಮಾಡಿದ್ದೇನೆ. ನಾನು ಬ್ರಹ್ಮಚಾರಿಯಾಗಿಯೇ ಇರುತ್ತೇನೆ. ಮಕ್ಕಳಿಲ್ಲದಿದ್ದರೂ ನನಗೆ ಉತ್ತಮವಾದ ಲೋಕ ದೊರೆಯುತ್ತದೆ" ಎಂದು ಪ್ರತಿಜ್ಞೆ ಮಾಡಿದನು. ಈ ಮಾತನ್ನು ಕೇಳಿ ದಾಶರಾಜನು ಹರ್ಷದಿಂದ ರೋಮಾಂಚನಗೊಂಡು 'ಕೊಟ್ಟೆ!' ಎಂದನು. ಆಕಾಶದಲ್ಲಿ ದೇವತೆಗಳೂ ಋಷಿಗಳೂ ಅಪ್ಸರೆಯರೂ ಪುಷ್ಪವೃಷ್ಟಿ ಕರೆದು ಇವನು 'ಭೀಷ್ಮ' ಎಂದು ಹೊಗಳಿದರು.

ಅನಂತರ ಭೀಷ್ಮನು ಸತ್ಯವತಿ ಎಂಬ ಆ ಹುಡುಗಿಯನ್ನು ಕುರಿತು "ಬಾ ತಾಯಿ! ರಥವನ್ನು ಹತ್ತು ನಮ್ಮ ಮನೆಗೆ ಹೋಗೋಣ" ಎಂದು ರಥ ಹತ್ತಿಸಿ ಹಸ್ತಿನಾಪುರಕ್ಕೆ ಕರೆದುಕೊಂಡು ಹೋಗಿ ತಂದೆಗೆ ಎಲ್ಲವನ್ನೂ ಬಿನ್ನವಿಸಿದನು. ರಾಜರೆಲ್ಲಾ ಇವನು "ಭೀಷ್ಮನೆ!" ಎಂದು ಹೊಗಳಿದರು. ಭೀಷ್ಮನ ಈ ಕಠಿಣ ಕಾರ್ಯವನ್ನು ಮೆಚ್ಚಿ ಶಂತನುವು "ನೀನು ಸ್ವಚ್ಛಂದ ಮರಣನಾಗು! ನೀನಾಗಿ ಸಾವನ್ನು ಅಪೇಕ್ಷಿಸುವವರೆಗೂ ನಿನಗೆ ಸಾವು ಬರದೆ ಇರಲಿ!" ಎಂದು ಹರಸಿದನು.

* * * *

©KTBS Not to be republished

**ಪೂರ್ವದ ಕಥೆ :**

ಭರತವಂಶದಲ್ಲಿ ಶಂತನುವೆಂಬ ಪ್ರಸಿದ್ಧನಾದ ರಾಜನಿದ್ದನು. ಅವನಿಗೆ ಬೇಟೆಯಾಡುವುದರಲ್ಲಿ ತುಂಬ ಆಸೆ: ಆದ್ದರಿಂದ ಜಿಂಕೆ, ಕಾಡುಕೋಣ ಮುಂತಾದ ಮೃಗಗಳನ್ನು ಬೇಟೆಯಾಡುತ್ತಾ ಕಾಡಿನಲ್ಲಿಯೇ ಹೆಚ್ಚಾಗಿ ಇರುತ್ತಿದ್ದನು. ಹೀಗೆ ಅವನು ಒಂದು ದಿನ ಗಂಗಾನದಿಯ ತೀರದಲ್ಲಿ ಹೋಗುತ್ತಿರುವಾಗ, ಪರಮಸುಂದರಿಯೂ ರತ್ನಾಭರಣಭೂಷಿತಳೂ ದಿವ್ಯಾಂಬರಧರಳೂ ಆದ ಒಬ್ಬ ಹೆಂಗಸನ್ನು ಕಂಡು, ಅವಳ ರೂಪಸಂಪತ್ತಿನಿಂದ ಬೆರಗಾಗಿ ಹೋದನು. ಅವಳೂ ಹಾಗೆಯೇ ಅವನನ್ನು ಮೆಚ್ಚಿಕೊಂಡಳು. ಒಬ್ಬರನ್ನೊಬ್ಬರು ಎಷ್ಟು ಹೊತ್ತು ನೋಡಿದರೂ ಕಣ್ಣು ತಣಿಯವು. ಶಂತನುವೇ ಮೊದಲು ಅನುನಯದ ರೀತಿಯಿಂದ ಮಾತನಾಡಿಸಿ "ನೀನು ಯಾರು ಸುಂದರಿ? ದೇವಿಯೋ ದಾನವಿಯೋ ಗಂಧರ್ವಳೋ ಅಪ್ಸರಳೋ ಯಕ್ಷಿಯೋ ಮಾನುಷಿಯೋ? ಯಾರಾದರೂ ಆಗಿರು; ನನ್ನ ಹೆಂಡತಿಯಾಗು!" ಎಂದನು. ಮಂದಹಾಸದಿಂದೊಡಗೂಡಿದ ಮೃದುಮಧುರವಾದ ಅವನ ಮಾತನ್ನು ಕೇಳಿ ಆಕೆಯು "ಆಗಲಿ, ಮಹಾರಾಜ! ನಿನ್ನ ರಾಣಿಯಾಗಲು ಒಪ್ಪುತ್ತೇನೆ. ಆದರೆ ಒಂದು ಕಟ್ಟುಪಾಡಿಗೆ ನೀನು ಒಪ್ಪಬೇಕು. ಅದೇನೆಂದರೆ, ನಾನು ಮಾಡುವ ಯಾವ ಒಳ್ಳೆಯ ಕೆಲಸಕ್ಕಾಗಲಿ ಕೆಟ್ಟ ಕೆಲಸಕ್ಕಾಗಲಿ ನೀನು ಅಡ್ಡಿ ಬರಕೂಡದು. ಆಕ್ಷೇಪಿಸಿದರೆ, ಬಿಟ್ಟು ಹೊರಟುಹೋಗುತ್ತೇನೆ" ಎಂದಳು. ಶಂತನುವು ಪರಮ ಸಂತೋಷದಿಂದ ಒಪ್ಪಿಕೊಂಡು ಅವಳಲ್ಲಿ ಯಥೇಚ್ಛವಾದ ಸೌಖ್ಯವನ್ನು ಅನುಭವಿಸುತ್ತ ಇದ್ದನು. ಅವಳು ಏನು ಮಾಡಲಿ, ಅಡ್ಡಿ ಬರುತ್ತಿರಲಿಲ್ಲ.

ಆಕೆಯ ಹೊಟ್ಟೆಯಲ್ಲಿ ಒಬ್ಬರಾದ ಮೇಲೆ ಒಬ್ಬರಂತೆ ಎಂಟು ಜನ ಗಂಡು ಮಕ್ಕಳಾದರು; ಅವರನ್ನು ಅವಳು ಹುಟ್ಟುತ್ತಿದ್ದ ಹಾಗೆಯೇ ಗಂಗೆಯಲ್ಲಿ ಮುಳುಗಿಸಿ ಬಿಡುವಳು; ಶಂತನುವಿಗೆ ಅದನ್ನು ನೋಡಿ ತುಂಬ ಸಂಕಟವಾಗುವುದು; ಆದರೆ ಅವಳೆಲ್ಲಿ ಬಿಟ್ಟು ಹೊರಟುಹೋಗುವಳೋ ಎಂದು ಹೆದರಿ ಸುಮ್ಮನಿರುತ್ತಿದ್ದನು. ಕೊನೆಗೆ ಎಂಟನೆಯ ಮಗುವು ಹುಟ್ಟಿದಾಗ ಅವನು ಸುಮ್ಮನಿರಲಾರದೆ, ದುಃಖ ಉಕ್ಕಿ ಬಂದು, ಮಗುವಿನ ಮೇಲೆ ಆಸೆಯಾಗಿ, "ತಡೆ ಪುತ್ರಘಾತಿನಿ! ಅದನ್ನು ಕೊಲ್ಲಬೇಡ! ನೀನು ಯಾರು? ಯಾರ ಮಗಳು? ಏಕೆ ಹೀಗೆ ಮಕ್ಕಳನ್ನು ಕೊಂದು ಕೊಂದು ಮಹಾಪಾಪ ಕಟ್ಟಿಕೊಳ್ಳುತ್ತೀಯೆ?" ಎಂದು ಕೇಳಿದನು. ಆಕೆ, "ಮಹಾರಾಜ, ನಿನಗೆ ಮಗನ ಮೇಲೆ ಆಸೆಯಾಯಿತಲ್ಲವೆ? ಆಗಲಿ, ನಿನ್ನ ಮಗನನ್ನು ಕೊಲ್ಲುವುದಿಲ್ಲ. ಆದರೆ ನಮ್ಮ ಕಟ್ಟುಪಾಡಿನಂತೆ ನಿನ್ನೊಡನೆ ಬಾಳುವೆಯು ಇಂದಿಗೆ ಮುಗಿಯಿತು; ನಾನು ಗಂಗೆ, ಜಹ್ನುವಿನ ಮಗಳು; ಈ ಮಕ್ಕಳು ಅಷ್ಟವಸುಗಳು; ವಸಿಷ್ಠ ಶಾಪದಿಂದ ಮನುಷ್ಯ ಜನ್ಮವನ್ನು ಪಡೆದಿದ್ದರು; ನಾನು ಅವರಿಗೆ ಮಾತುಕೊಟ್ಟಿದ್ದಂತೆ ಹುಟ್ಟು ಹುಟ್ಟುತ್ತಿದ್ದ ಹಾಗೆ ಅವರನ್ನು ಈ ಮನುಷ್ಯ ಜನ್ಮದಿಂದ ಬಿಡುಗಡೆ ಮಾಡಿದೆ. ನಿನಗೆ ಮಂಗಳವಾಗಲಿ. ನಾನು ಹೋಗಿ ಬರುತ್ತೇನೆ; ಮಹಾವ್ರತನಾದ ಈ ಮಗನನ್ನು ಕಾಪಾಡಿಕೋ!" ಎಂದು ಹೇಳಿ ಹೊರಟುಹೋದಳು.

©KTBS Not to be republished

## ಕೃತಿಕಾರರ ಪರಿಚಯ :



**ಅಂಬಳೆ ರಾಮಕೃಷ್ಣಶಾಸ್ತ್ರಿ ಕೃಷ್ಣಶಾಸ್ತ್ರೀ** ಅವರು ೧೮೯೦ ರ ಫೆಬ್ರವರಿ ೧೨ ರಂದು ಚಿಕ್ಕಮಗಳೂರು ಜಿಲ್ಲೆಯ ಅಂಬಳೆ ಗ್ರಾಮದಲ್ಲಿ ಹುಟ್ಟಿದರು. ತಂದೆ ರಾಮಕೃಷ್ಣಶಾಸ್ತ್ರಿಗಳು, ತಾಯಿ ಶಂಕರಮ್ಮ. ಕೃಷ್ಣಶಾಸ್ತ್ರಿಗಳು ಕಷ್ಟದಲ್ಲಿಯೇ ವಿದ್ಯಾಭ್ಯಾಸಮಾಡಿ ಮದ್ರಾಸ್ ವಿಶ್ವವಿದ್ಯಾನಿಲಯದಿಂದ ಎಂ.ಎ. ಪದವಿ ಪಡೆದರು. ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜು ಮತ್ತು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು.

ಇವರು 'ಶ್ರೀಪತಿಯ ಕಥೆಗಳು', 'ಕಥಾಮೃತ', 'ವಚನ ಭಾರತ', 'ನಿರ್ಮಲ ಭಾರತಿ', 'ಹರಿಶ್ಚಂದ್ರ ಕಾವ್ಯ' (ಟಿ.ಎಸ್.ವೆಂಕಣ್ಣಯ್ಯನವರ ಜೊತೆಗೂಡಿ ಸಂಪಾದಿಸಿದ ಕೃತಿ), 'ಭಾಸಕವಿ', 'ಸಂಸ್ಕೃತ ನಾಟಕ', 'ಸರ್ವಜ್ಞ', 'ಬಂಕಿಮಚಂದ್ರ' ಮುಂತಾದ ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ.

ಇವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ನಿಘಂಟು ರಚನಾ ಸಮಿತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರ 'ಬಂಕಿಮಚಂದ್ರ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಹೈದರಬಾದಿನಲ್ಲಿ ನಡೆದ ೨೬ ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಬಹುಮುಖ ಪ್ರತಿಭಾ ಸಂಪನ್ನರಾದ ಇವರು ೧೯೬೮ ರ ಫೆಬ್ರವರಿ ೧ ರಂದು ನಿಧನ ಹೊಂದಿದರು.

## ಅಭ್ಯಾಸ

### I. ಪದಗಳ ಅರ್ಥ :

**ಅನುರೂಪ** – ಯೋಗ್ಯವಾದವನು

**ಅಪ್ಸರೆ** – ದೇವತಾ ಸ್ತ್ರೀ

**ಅರಿಕೆ** – ಬಿನ್ನಹ

**ಕಳವಳ** – ಆತಂಕದ ಮನಃಸ್ಥಿತಿ

**ಕೊರಗು** – ನೋವು; ಸಂಕಟಪಡು.

**ಕೋರಿಕೆ** – ಮನವಿ

**ದಾಶರಾಜ** – ಬೆಸ್ತರವನು; ಸತ್ಯವತಿಯ ತಂದೆ.

**ದೇವವ್ರತ** – ಭೀಷ್ಮನ ಹೆಸರು

**ಧರ್ಮಾತ್ಮ** – ಸದಾಚಾರ ಸಂಪನ್ನ

**ಪಶ್ಚಾತ್ತಾಪ** – ತಪ್ಪಿನ ಅರಿವು

**ಪುಷ್ಪವೃಷ್ಟಿ** – ಹೂವಿನಮಳೆ

**ಪ್ರತಿಜ್ಞೆ**– ಶಪಥ; ವಾಗ್ದಾನ.

**ಬ್ರಹ್ಮಚಾರಿ** – ಮದುವೆ ಆಗದಿರುವವನು

**ಮರ್ತ್ಯರು** – ಮಾನವರು

**ಶ್ಲಾಘ್ಯ** – ಹೊಗಳಿಕೆಗೆ ತಕ್ಕುದಾದ

**ಸತ್ಯವಂತ** – ಸತ್ಯ ಮಾರ್ಗದಲ್ಲಿ ನಡೆಯುವವ.

**ಸದೃಶ** – ಸಮಾನವಾದ

**ಹಗೆ** – ದ್ವೇಷ

©KTBS Not to be republished

## II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಗಳಿಂದ ಸೂಕ್ತವಾದುದನ್ನು ಆಯ್ದು ಬರೆಯಿರಿ.**

೧. ಶಂತನು ಸತ್ಯವತಿಯನ್ನು ________ ನದಿ ತೀರದಲ್ಲಿ ಭೇಟಿಯಾದನು.
ಅ) ಗಂಗಾ ಬ) ಯಮುನಾ ಕ) ಕಾವೇರಿ ಡ) ಬ್ರಹ್ಮಪುತ್ರ

೨. ದೇವವ್ರತನು ಪ್ರತಿಜ್ಞೆ ಮಾಡಿದ್ದು ________ ಅವರ ಆಸೆ ತಣಿಸಲು.
ಅ) ಸತ್ಯವತಿ ಬ) ದಾಶರಾಜ ಕ) ಶಂತನುವು ಡ) ದೇವರು

೩. ಎ.ಆರ್. ಕೃಷ್ಣಶಾಸ್ತ್ರೀ ಅವರ ________ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.
ಅ) ಬಂಕಿಮಚಂದ್ರ ಬ) ವಚನಭಾರತ ಕ) ಶ್ರೀಪತಿಯ ಕಥೆಗಳು ಡ) ಕಥಾಮೃತ

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಶಂತನು ಯಾವ ರಾಜ್ಯದ ರಾಜನಾಗಿದ್ದನು?
೨. ಭೀಷ್ಮನ ಪೂರ್ವದ ಹೆಸರೇನು?
೩. ಶಂತನು ಯಾವುದಕ್ಕೆ ಹೆಸರುವಾಸಿಯಾಗಿದ್ದನು?
೪. ದೇವವ್ರತನು ತನ್ನ ತಂದೆಯ ಚಿಂತನೆಯ ಕಾರಣವನ್ನು ಯಾರಿಂದ ತಿಳಿದುಕೊಂಡನು?
೫. ಶಂತನು ಮದುವೆ ಆಗಲು ಬಯಸಿದ ಬೆಸ್ತರ ಮಗಳ ಹೆಸರೇನು?
೬. ಶಂತನುವು ಭೀಷ್ಮನನ್ನು ಏನೆಂದು ಹರಸಿದನು?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಶಂತನು ರಾಜನಲ್ಲಿದ್ದ ವ್ಯಕ್ತಿತ್ವದ ಗುಣವಿಶೇಷತೆಗಳೇನು?
೨. ಶಂತನು ದೇವವ್ರತನನ್ನು ಹಸ್ತಿನಾಪುರದ ಯುವರಾಜನಾಗಿ ಏಕೆ ಮಾಡಿದನು?
೩. ಶಂತನು ಮತ್ತು ಬೆಸ್ತರ ಹುಡುಗಿಯ ಜೊತೆ ನಡೆದ ಸಂಭಾಷಣೆ ಏನು?
೪. ಶಂತನು 'ಮಗಳನ್ನು ಮದುವೆ ಮಾಡಿಕೊಡಿ' ಎಂದು ಕೇಳಿದಾಗ ಬೆಸ್ತರವನು ಏನೆಂದು ಹೇಳಿದನು?
೫. ಬೆಸ್ತರವನು ಶಂತನುನನ್ನು ಏನೆಂದು ಕೋರಿದನು?
೬. ಚಿಂತಾಮಗ್ನನಾಗಿದ್ದ ಶಂತನುವನ್ನು ದೇವವ್ರತನು ಏನೆಂದು ಕೇಳಿದನು?
೭. ಶಂತನು ದೇವವ್ರತನಿಗೆ ತನ್ನ ಚಿಂತನೆಗೆ ಕಾರಣ ಏನೆಂದು ತಿಳಿಸಿದನು?
೮. ದಾಶರಾಜನು ದೇವವ್ರತನನ್ನು ಉದ್ದೇಶಿಸಿ ಏನು ಹೇಳಿದನು?

©KTBS Not to be republished

೯. ದಾಶರಾಜನು ದೇವವ್ರತನನ್ನು ಎರಡನೇ ಬಾರಿ ಏನೆಂದು ಕೋರಿದನು?

೧೦. ದೇವವ್ರತನು ದಾಶರಾಜನ ಮುಂದೆ ಮಾಡಿದ ಪ್ರತಿಜ್ಞೆಗಳಾವುವು?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಶಂತನುವಿಗೆ ಒದಗಿಬಂದ ಚಿಂತೆಯನ್ನು ಭೀಷ್ಮನು ಹೇಗೆ ಪರಿಹರಿಸಿದನು?

೨. ಭೀಷ್ಮನು ಜನ್ಮತಾಳಿದ ಕಥೆಯನ್ನು ವಿವರಿಸಿ?

**ಉ. ಸಂದರ್ಭದೊಡನೆ ವಿವರಿಸಿರಿ.**

೧. ನಿಮ್ಮಂತ ಗುಣಶಾಲಿಗಳು ಮತ್ತಾರಿದ್ದಾರೆ?

೨. ಒಬ್ಬ ಮಗ ಮಗನಲ್ಲ.

೩. ಮಕ್ಕಳಿಲ್ಲದಿದ್ದರೂ ನನಗೆ ಉತ್ತಮವಾದ ಲೋಕ ದೊರೆಯುತ್ತದೆ.

೪. ನೀನಾಗಿ ಸಾವನ್ನು ಅಪೇಕ್ಷಿಸುವವರೆಗೂ ನಿನಗೆ ಸಾವು ಬರದೆ ಇರಲಿ.

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಬಿಡಿಸಿ, ಸಂಧಿ ಹೆಸರಿಸಿರಿ.**

ರಾಜ್ಯವಾಳು, ಗೀತೋಪದೇಶ, ಧರ್ಮಾರ್ಥ, ಆಸೆಯಾಗು, ಶಸ್ತ್ರಾಸ್ತ್ರ, ದಿವ್ಯಾಂಬರ.

**ಆ) ಮಾದರಿಯಂತೆ ಕೂಡಿಸಿ ಬರೆಯಿರಿ.**

**ಮಾದರಿ :** ಬೇಟೆ + ಆಡು = ಬೇಟೆಯಾಡು

ಕಾಲ + ಅನಂತರ, ರೂಪ + ಅಂತರ, ತಂದೆ + ಅನ್ನು, ಕ್ಷೇಮ + ಆಗು.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ವಿದ್ಯಾವಂತ, ಸದೃಶ, ಹಿಂದೆ, ಹಿರಿಯ, ಸುಖ.

**ಈ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

ಸುವಾಸನೆ, ಅಪೂರ್ವ, ನಿಪುಣ, ತೇಜಸ್ಸು, ಪ್ರತಿಜ್ಞೆ, ಅಭಿಮತ, ಅನುರೂಪ.

**ಉ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಕಾಡು, ತಂದೆ, ಮಗ, ಸಾವು, ಸತ್ಯ.

©KTBS Not to be republished

# IV. ಸೈದ್ಧಾಂತಿಕ ವ್ಯಾಕರಣ :

## ನುಡಿಗಟ್ಟು – ಪಡೆನುಡಿ

ವಿಶೇಷಾರ್ಥ ನೀಡುವ ಪದಪುಂಜವನ್ನು 'ಪಡೆನುಡಿ' ಅಥವಾ 'ನುಡಿಗಟ್ಟು' ಎಂದು ಕರೆಯಲಾಗುತ್ತದೆ. ಇಲ್ಲಿ ಪದಗಳ ಬಾಹ್ಯ ಅರ್ಥಕ್ಕಿಂತ ಸೂಚ್ಯಾರ್ಥ, ಭಾವಾರ್ಥ ಇಲ್ಲವೇ ಒಳ ಅರ್ಥ ಪ್ರಧಾನವಾಗಿರುತ್ತದೆ. ನುಡಿಗಟ್ಟುಗಳ ಬಳಕೆಯಿಂದ ಭಾಷೆಯ ಬಂಧ ಮತ್ತು ಸೊಬಗು ಹೆಚ್ಚುತ್ತದೆ.

**ಉದಾಹರಣೆಗಳು :**

| ನುಡಿಗಟ್ಟು | – | ಅರ್ಥ ವಿಶೇಷ |
|---|---|---|
| **ಕತ್ತಿಮಸೆ** | – | ದ್ವೇಷ ಸಾಧಿಸು |
| **ಬೆನ್ನುತಟ್ಟು** | – | ಪ್ರೋತ್ಸಾಹಿಸು |
| **ನಾಯಿಜನ್ಮ** | – | ಹೀನಬಾಳು |
| **ಮೈಮರೆ** | – | ತಲ್ಲೀನನಾಗು |
| **ನಿಟ್ಟುಸಿರು ಬಿಡು** | – | ಬಿಡುಗಡೆ ಹೊಂದು |
| **ಕೈಕೊಡು** | – | ಮೋಸಮಾಡು |
| **ಶತಾಯಗತಾಯ** | – | ಹೇಗಾದರೂ ಮಾಡಿ |
| **ಹೊಟ್ಟೆ ಉರಿ** | – | ಅಸೂಯೆಪಡು |
| **ಕಾಲಿಗೆ ಬುದ್ಧಿಹೇಳು** | – | ಓಡಿ ಹೋಗು |
| **ಗಂಟಲು ಕಟ್ಟು** | – | ಗದ್ಗದಿತನಾಗು |

| ನುಡಿಗಟ್ಟು | – | ಅರ್ಥ ವಿಶೇಷ |
|---|---|---|
| **ಹೊಂಚುಹಾಕು** | – | ಸಮಯಸಾಧಿಸು |
| **ತಲೆದೂಗು** | – | ಮೆಚ್ಚುಗೆ ಸೂಚಿಸು |
| **ವಿಷಕಾರು** | – | ದ್ವೇಷ ಸಾಧಿಸು |
| **ಹೊಂಚು ಹಾಕು** | – | ಸಮಯ ನಿರೀಕ್ಷಿಸು |
| **ಕಣ್ತೆರೆ** | – | ಎಚ್ಚರಗೊಳ್ಳು |
| **ಕಾಡುಪಾಲಾಗು** | – | ಅನಾಥನಾಗು |
| **ತಲೆಬಾಗು** | – | ಶರಣಾಗು, ಒಪ್ಪು |
| **ಬೆನ್ನು ತಟ್ಟು** | – | ಪ್ರೋತ್ಸಾಹಿಸು |
| **ಮುಖ ಕಪ್ಪಾಗು** | – | ಅವಮಾನ ಹೊಂದು |

# V. ಚಟುವಟಿಕೆಗಳು :

೧. ಎ. ಆರ್. ಕೃಷ್ಣಶಾಸ್ತ್ರೀ ಇವರು ಬರೆದ 'ವಚನಭಾರತ' ಕೃತಿಯನ್ನು ಓದಿರಿ.

೨. ಪ್ರಸ್ತುತ 'ಭೀಷ್ಮ ಪ್ರತಿಜ್ಞೆ' ಕಥಾ ಭಾಗವನ್ನು ಸಂಭಾಷಣೆಯ ರೂಪದಲ್ಲಿ ಬರೆದು, ಅಭಿನಯಿಸಿರಿ.

©KTBS
Not to be republished

**ಪದ್ಯ ಭಾಗ**

# ೧. ಬೆಳಗು ಜಾವ

– ದ. ರಾ. ಬೇಂದ್ರೆ

**ಪಾಠ ಪ್ರವೇಶ :** ಹೊಸಗನ್ನಡ ಸಾಹಿತ್ಯದ ಇತಿಹಾಸದಲ್ಲಿ ನವೋದಯ ಕಾಲದ ಸಾಹಿತ್ಯ ತನ್ನದೇ ಆದ ವೈಶಿಷ್ಟ್ಯಗಳಿಂದ ಕೂಡಿದೆ. ಈ ಕಾಲದ ಮಹತ್ವದ ಕವಿಗಳಲ್ಲಿ ಬೇಂದ್ರೆಯವರು ಒಬ್ಬರು. ಬೇಂದ್ರೆಯವರ ಭಾವಗೀತೆಗಳು ಸಮಗ್ರ ಬದುಕಿನ ಭಂಡಾರವಾಗಿವೆ. ಇವರ ಕಾವ್ಯಗಳಲ್ಲಿ ಪ್ರಕೃತಿ ವರ್ಣನೆ ಕೇವಲ ವರ್ಣನೆಯಲ್ಲ. ಅದು ಬದುಕಿನೊಂದಿಗೆ ಮಿಳಿತವಾಗಿರುವ ಚೈತನ್ಯದ ಶಕ್ತಿಯಾಗಿದೆ. ಈ ಹಿನ್ನೆಲೆಯಲ್ಲಿ 'ಬೆಳಗು ಜಾವ' ಕವನ ಮಹತ್ವದ್ದಾಗಿದೆ.

'ಬೆಳಗು ಜಾವ' ಕವನವು ದಿನದ ಬೆಳಗನ್ನು ವರ್ಣಿಸುವ ಪದ್ಯ. ಇಲ್ಲಿ ಬೆಳಕನ್ನು ಮನ್ಮಥ ಮತ್ತು ಬೇಟೆಗಾರನಿಗೆ ಹೋಲಿಸಲಾಗಿದೆ. ಪ್ರಾತಃಕಾಲದಲ್ಲಿ ನಿದ್ದೆ ಮಾಡುವ ತಾಮಸಿಗಳಾಗದೆ ಚೈತನ್ಯವುಳ್ಳ ಸಾತ್ವಿಕರಾಗಿ, ಕಾರ್ಯತತ್ಪರರಾಗಿ ಬದುಕಬೇಕೆಂದು ಕವಿ ಕರೆ ನೀಡಿದ್ದಾರೆ.

ಯೌವ್ವನದ ಸುಗ್ಗಿ ಜೀವಮಾನದಲ್ಲಿ ಒಮ್ಮೆ ಮಾತ್ರ ಬರುವಂಥದ್ದು. ಆದುದರಿಂದ ಅದರ ಸದುಪಯೋಗವನ್ನು ಮಾಡಿಕೊಳ್ಳಬೇಕು ಎಂಬ ಆಶಯವನ್ನು ಕವಿ ಇಲ್ಲಿ ವ್ಯಕ್ತಪಡಿಸಿದ್ದಾರೆ.



ಏಳು ಚಿನ್ನ, ಬೆಳಗಾಯ್ತು ಅಣ್ಣ, ಮೂಡಲವು ತೆರೆಯೆ ಕಣ್ಣ,
ನಕ್ಷತ್ರ ಜಾರಿ ತಮವೆಲ್ಲ ಸೋರಿ, ಮಿಗಿಲಹುದು ಬಾನ ಬಣ್ಣ,
ಜೇನ್ನೊಣದ ಹೆದೆಗೆ ಹೂಬಾಣ ಹೂಡಿ ಝುಂ ಎಂದು ಬಿಟ್ಟ ಮಾರ.
ಗುಡಿಗೋಪುರಕ್ಕು ಬಲೆ ಬೀಸಿ ಬಂದ ಅಗೊ ಬೆಳಕು–ಬೇಟೆಗಾರ ॥ ೧ ॥

© KTBS Not to be republished

ನಿಶೆಯಿಳಿದ ಉಷೆಯ ಎಳನಗೆಯ ಬಗೆಗೆ ಸೋತಿರಲು ಜಗವು ಸವಿಗೆ
ಕಣ್ಣೆದಿರು ಬಂದು ಕಟ್ಟಿತ್ತು ಕನಸು; ಕೂಗೊಂದು ಬಂತು ಕಿವಿಗೆ:
ಮಕ್ಕಳಿರ ಕೇಳಿ. ರಸ ಕುಡಿಯಲೇಳಿ, ಹುಸಿನಿದ್ದೆಗಿದ್ದೆ ಸಾಕು.
ಈ ತುಂಬಿಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು ॥ ೨ ॥

ಯಾವಾಗೊ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ.
ಮೊದಲಾಗಲೀಗ, ಅಂಗಡಿಯ ಕದವ ಈ ಕ್ಷಣಕೆ ತೆರೆಯ ಹೇಳಿ.
ಜೀವನದ ನದಿಗೆ ಸೆಳವಿಹುದು. ಮರಣ ಬಂದೀತು ಕ್ಷಣವು ಮರಳಿ
ಹೋದವರು ತಿರುಗಿ ಬಂದಾರೆ, ಅವರು ಬರಲಿಕ್ಕು ಇಲ್ಲ ಮರಳಿ ॥ ೩ ॥

ಬಾನ್ ಹೊಗರಲುಂಟು, ಮರ ಚಿಗುರಲುಂಟು, ಬರಲುಂಟೆ ಸುಗ್ಗಿ ಮತ್ತೆ?
ಮುಳುಗಿರಲಿ ಮುಪ್ಪು ಚಿಂತನದಿ ತಾನು ಹರೆಯಕ್ಕೆ ಬೇರೆ ಹೊತ್ತೆ? ॥ ೪ ॥

* * * *

## ಕೃತಿಕಾರರ ಪರಿಚಯ :



'ಅಂಬಿಕಾತನಯದತ್ತ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ದತ್ತಾತ್ರೇಯ ರಾಮಚಂದ್ರ ಬೇಂದ್ರೆ** ಅವರು ೧೮೯೬ ಜನವರಿ ೩೧ ರಂದು ಧಾರವಾಡದಲ್ಲಿ ಜನಿಸಿದರು. ಇವರು ನವೋದಯ ಕಾಲದ ಮಹತ್ವದ ಕವಿಗಳಲ್ಲಿ ಒಬ್ಬರು. 'ಗರಿ', 'ಸಖೀಗೀತ', 'ಗಂಗಾವತರಣ', 'ನಾದಲೀಲೆ' ಮುಂತಾದವು ಇವರ ಪ್ರಸಿದ್ಧ ಕವನ ಸಂಕಲನಗಳು. ಇವರ 'ಅರಳು-ಮರಳು' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ 'ನಾಕುತಂತಿ' ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತಿವೆ. ೧೯೮೧ ಅಕ್ಟೋಬರ್ ೨೬ ರಂದು ಬೇಂದ್ರೆಯವರು ಇಹಲೋಕ ತ್ಯಜಿಸಿದರು.

ಪ್ರಸ್ತುತ 'ಬೆಳಗು ಜಾವ' ಪದ್ಯವು ಒಂದು ಸಾನೆಟ್. ಸಾನೆಟ್ ಇಂಗ್ಲೀಷ್ ಭಾಷೆಯಿಂದ ಕನ್ನಡಕ್ಕೆ ಬಂದ ಪದ್ಯ ರೂಪ. ಇದರಲ್ಲಿ ೧೪ ಸಾಲುಗಳಿರುತ್ತವೆ. ಇದನ್ನು ಕನ್ನಡದಲ್ಲಿ 'ಸುನೀತ' ಎಂದು ಕರೆಯುತ್ತಾರೆ. ಪ್ರಸ್ತುತ ಕವಿತೆಯನ್ನು **'ವಿನಯ'** ಕವನ ಸಂಕಲನದಿಂದ ಆರಿಸಲಾಗಿದೆ.

©KTBS Not to be republished

## ಅಭ್ಯಾಸ

## I. ಪದಗಳ ಅರ್ಥ :

**ಉಷೆ** – ಮುಂಬೆಳಗು; ಮುಂಜಾವು.

**ಕದ** – ಬಾಗಿಲು

**ಚಿಂತನ** – ಯೋಗ್ಯ ಯೋಚನೆ

**ಜಗ** – ಜಗತ್ತು; ಪ್ರಪಂಚ; ವಿಶ್ವ; ಲೋಕ.

**ತಮ** – ಕತ್ತಲು

**ನಕ್ಷತ್ರ ಜಾರಿ** – ರಾತ್ರಿ ಕಳೆದು

**ನಿಶೆ** – ರಾತ್ರಿ; ಮಂಪರು.

**ಪಾನಕೇಳಿ** – ಪಾನೀಯ ಕುಡಿಯುವುದಕ್ಕೆ ಎದ್ದೇಳಿ

**ಬಾನು** – ಆಕಾಶ

**ಬೆಳಕು ಬೇಟೆಗಾರ** – ಸೂರ್ಯ

**ಮರಳಿ** – ಮತ್ತೆ; ಹಿಂದಿರುಗಿ.

**ಮಾರ** – ಮನ್ಮಥ

**ಮಿಗಿಲು** – ಹೆಚ್ಚು

**ಮೂಡಲು** – ಪೂರ್ವದಿಕ್ಕು

**ರಸ** – ಅನುಭವದ ಸವಿ; ಸಾರ.

**ಹರೆಯ** – ಹದಿವಯಸ್ಸು; ಯೌವ್ವನ; ಪ್ರಾಯ.

**ಹುಸಿನಿದ್ದೆ** – ಆಲಸ್ಯದ ವಿಶ್ರಾಂತಿ; ಸುಳ್ಳುನಿದ್ರೆ.

**ಹೊಗರು** – ಕಾಂತಿ

**ಹೊತ್ತು** – ಸಮಯ; ಗಳಿಗೆ; ವೇಳೆ.

**ಹೋದವರು** – ಮರಣ ಹೊಂದಿದವರು

## II. ಪ್ರಶ್ನೆಗಳು :

**ಅ) ಖಾಲಿ ಬಿಟ್ಟಿರುವ ಜಾಗದಲ್ಲಿ ಸೂಕ್ತ ಪದವನ್ನು ಆವರಣದಿಂದ ಆರಿಸಿ ಬರೆಯಿರಿ.**

೧. 'ಮೂಡಲವು ತೆರೆಯೆ ಕಣ್ಣ' ಎಂದರೆ __________

ಅ) ಸೂರ್ಯಾಸ್ತ ಆ) ಸೂರ್ಯೋದಯ

ಇ) ಚಂದ್ರೋದಯ ಈ) ಗೋಧೂಳಿ

೨. ಬೇಂದ್ರೆಯವರು ಬೆಳಕನ್ನು ಇವರಿಗೆ ಹೋಲಿಸಿದ್ದಾರೆ __________

ಅ) ಮಾರ–ಬೇಟೆಗಾರ ಆ) ಮಾರ–ಮಾಟಗಾರ

ಇ) ಮಕ್ಕಳು–ಮುದುಕರು ಈ) ಜೇನು–ಗುಡಿಗೋಪುರ

೩. ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಕೃತಿ __________

ಅ) ವಿನಯ ಆ) ಗಂಗಾವತರಣ

ಇ) ನಾದಲೀಲೆ ಈ) ನಾಕುತಂತಿ

©KTBS Not to be republished

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ನಕ್ಷತ್ರ ಜಾರಿ, ತಮವೆಲ್ಲ ಸೋರಿದುದು ಯಾವಾಗ?

೨. ಜೇನ್ನೊಣದ ಹೆದೆಗೆ ಹೂಬಾಣ ಹೂಡಿದವನು ಯಾರು?

೩. ಕವಿಗೆ ಜಗವು ಸವಿಯಾಗಿ ಯಾವಾಗ ಕಂಡಿತು?

೪. ಕವಿ ಮಕ್ಕಳಿಗೆ ಹುಸಿನಿದ್ದೆ ಸಾಕು ಮೇಲೇಳಿ ಎಂದು ಏಕೆ ಕರೆ ನೀಡುತ್ತಾರೆ?

೫. ಜೀವನದ ನದಿಗಿರುವ ಆತಂಕಗಳೇನು?

೬. ಮುಪ್ಪು ಯಾವುದರಲ್ಲಿ ಮುಳುಗಿರುತ್ತದೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಬೆಳಕೆಂಬ ಬೇಟೆಗಾರ ಬಂದಾಗ ಪ್ರಕೃತಿಯಲ್ಲಿ ಯಾವ ಬದಲಾವಣೆಗಳಾಗುತ್ತವೆ?

೨. ಜೀವನದ ಸವಿಯನ್ನು ಸವಿಯಲು ತಡಮಾಡಬಾರದು, ಏಕೆ?

೩. 'ಬೆಳಗು ಜಾವ' ಕವಿತೆಯಲ್ಲಿ ಕವಿ ನೀಡಿರುವ ಸಂದೇಶವೇನು?

**ಈ) ಕೆಳಗಿನ ಪ್ರಶ್ನೆಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. 'ಬೆಳಗು ಜಾವ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

**ಉ) ಸಂದರ್ಭದೊಡನೆ ವಿವರಿಸಿರಿ.**

೧. ಈ ತುಂಬಿಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

೨. ಜೇನ್ನೊಣದ ಹೆದೆಗೆ ಹೂಬಾಣ ಹೂಡಿ ಝುಂ ಎಂದು ಬಿಟ್ಟ ಮಾರ.

೩. ಜೀವನದ ನದಿಗೆ ಸೆಳೆವಿಹುದು.

೪. ಮುಳುಗಿರಲಿ ಮುಪ್ಪು ಚಿಂತನದಿ ತಾನು ಹರೆಯಕ್ಕೆ ಬೇರೆ ಹೊತ್ತೆ?

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

ಬೆಳಗಾಯ್ತು, ಹೂಬಾಣ, ಹುಸಿನಿದ್ದೆ, ಬಲೆಬೀಸು. ಎಳನಗೆ.

©KTBS Not to be republished

**ಆ) ಕೆಳಗಿನ ಪದಗಳಿಗೆ ತತ್ಸಮ – ತದ್ಭವ ರೂಪ ಬರೆಯಿರಿ.**

ಬಣ್ಣ, ಕ್ಷಣ, ಹರೆಯ.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಏಳು, ಬೆಳಕು, ಸರಸ, ಸಹಕಾರ, ಮುಪ್ಪು.

**ಈ) ಕೆಳಗಿನ ಪದಗಳಿಗೆ ಸ್ತ್ರೀಲಿಂಗ ರೂಪ ಬರೆಯಿರಿ.**

ಯುವಕ, ಮಹಾರಾಜ, ಗೆಳೆಯ, ಸಚಿವ, ಅಣ್ಣ.

## IV. ಚಟುವಟಿಕೆಗಳು :

೧. ಈ ಕವಿತೆಯ ೧ ನೇ ಮತ್ತು ೨ ನೇ ಪದ್ಯಗಳನ್ನು ಕಂಠಪಾಠ ಮಾಡಿರಿ.

೨. ಈ ಪದ್ಯದಲ್ಲಿ ಬರುವ ಅಂತ್ಯಪ್ರಾಸ ಪದಗಳನ್ನು ಪಟ್ಟಿ ಮಾಡಿ.

೩. ಸೂರ್ಯೋದಯದ ಸೊಬಗನ್ನು ವರ್ಣಿಸಿರುವ ಇತರ ಕವಿಗಳ ಕವಿತೆಗಳನ್ನು ಸಂಗ್ರಹಿಸಿ ಓದಿರಿ.

©KTBS Not to be republished

# ೨. ಅಟ್ಟ ಹತ್ತ ಬೇಡ

– ಎಲ್. ಹನುಮಂತಯ್ಯ

**ಪಾಠ ಪ್ರವೇಶ :** ಹಲವು ಶತಮಾನಗಳಿಂದ ತುಳಿತಕ್ಕೆ ಒಳಗಾಗಿ, ನೋವು ನುಂಗಿಕೊಂಡಿದ್ದ ಮನಸ್ಸುಗಳು ಶೋಷಣೆಯ ವಿರುದ್ಧ ಧ್ವನಿ ಎತ್ತಿದ ಸಾಹಿತ್ಯವೇ ಬಂಡಾಯ ಸಾಹಿತ್ಯ. ಸಮಾಜದಲ್ಲಿನ ಅಸಮಾನತೆಗಳನ್ನು ತಮಗಾದ ದುಃಖ ದುಮ್ಮಾನಗಳನ್ನು ಮನಸ್ಸಿಗೆ ಮುಟ್ಟುವಂತೆ ಹೃದಯಕ್ಕೆ ತಟ್ಟುವಂತೆ ಬರೆವಣಿಗೆ ಮೂಲಕ ವ್ಯಕ್ತಗೊಂಡ ಸಾಹಿತ್ಯ ಪ್ರಕಾರ. ಸಮಾಜದ ಮುಖ್ಯವಾಹಿನಿಯಲ್ಲಿ ತಮ್ಮ ಹಕ್ಕು ಸ್ಥಾಪಿಸಲು ಅನುಕಂಪ, ಅವಕಾಶವನ್ನು ಬೇಡದೆ ಅವಕಾಶವನ್ನು ನಾವೇ ಹುಡುಕುವೆವು ಎನ್ನುವ ಸಂಕಲ್ಪ, ಸಾಮಾಜಿಕ ಕಳಕಳಿ, ಅಸಮಾನತೆ ಹಾಗೂ ಅನ್ಯಾಯದ ವಿರುದ್ಧ ಪ್ರತಿಭಟನೆ ಇವು ಬಂಡಾಯ ಸಾಹಿತ್ಯದ ಪ್ರಮುಖ ಲಕ್ಷಣಗಳು.

ಮಕ್ಕಳಲ್ಲಿ ಕುತೂಹಲ, ಸಾಹಸ ಪ್ರವೃತ್ತಿ ಸಹಜವಾಗಿರುತ್ತದೆ. ಎಂತಹ ಕೆಲಸವನ್ನಾದರೂ ಮಾಡಬಲ್ಲೆವು ಎನ್ನುವ ಮನೋಸ್ಥೈರ್ಯ ಇರುತ್ತದೆ. ತಮ್ಮ ಇಚ್ಛಿತ ಗುರಿ ಸಾಧನೆಗೆ ಯಾರೇ ಅಡ್ಡಿಯನ್ನುಂಟು ಮಾಡಿದರೂ ಎದೆಗುಂದದೆ ಮುನ್ನುಗ್ಗಬಲ್ಲವರಾಗಿರುತ್ತಾರೆ. ತಮ್ಮ ಆಸೆ ಆಕಾಂಕ್ಷೆಗಳಿಗೆ ವಿರೋಧ ವ್ಯಕ್ತವಾದಾಗ ಸಂಪ್ರದಾಯಗಳನ್ನು ಧಿಕ್ಕರಿಸಿ ಶ್ರೇಷ್ಠವಾದುದನ್ನು ಮಾಡಿಯೇ ತೀರುತ್ತೇವೆ ಎಂಬ ಸಂಕಲ್ಪ ಮಾಡುತ್ತಾರೆ. ಶೋಷಿತರ ಮನಸ್ಥಿತಿಗಳೂ ಅದೇರೀತಿಯಲ್ಲಿರುತ್ತವೆ ಎಂಬುದನ್ನು ಪ್ರಸ್ತುತ 'ಅಟ್ಟ ಹತ್ತ ಬೇಡ' ಕವನದಲ್ಲಿ ವ್ಯಕ್ತವಾಗಿದೆ.

© KTBS Not to be republished



ಅಜ್ಜ : ಅಟ್ಟ ಹತ್ತಬೇಡ ಮರಿ
ಬೀಳಿಸಲೆಂದೇ ಜಾಳಾಗಿ ಕಟ್ಟಿರುತ್ತಾರೆ

ಮಗ : ಹಾಗಾದರೆ ಬೆಟ್ಟ ಹತ್ತುತ್ತೇನೆ ಅಜ್ಜ
ಕಲ್ಲು ಮುಳ್ಳುಗಳನ್ನು ಹಾದು
ಮೇಲೆ ಹೋಗುತ್ತೇನೆ.
ದೂರದ ಬೆಟ್ಟ ಎಷ್ಟೊಂದು ನುಣುಪು.

ಅಜ್ಜ : ಅಟ್ಟ ಹತ್ತದವನು
ಬೆಟ್ಟ ಹತ್ತುತ್ತಾನೆಯೆ ಎಂದು
ನಕ್ಕಾರು ಮಂದಿ ನನಕಂದ

ಮಗ : ಹೌದಜ್ಜ
ಅಟ್ಟ ಹತ್ತದವನು
ಬೆಟ್ಟ ಹತ್ತುತ್ತಾನೆಂದು ತೋರಿಸಬೇಕಾಗಿದೆ.
ಅಟ್ಟ ಮನುಷ್ಯ ಕಟ್ಟಿರುತ್ತಾನೆ
ಬೆಟ್ಟ ಅವನಿಂದ ನಿರ್ಮಿತವಲ್ಲ
ಅದಕ್ಕೆ ಅಟ್ಟ ನೋಡದೆ ಬೆಟ್ಟ ಹತ್ತುತ್ತೇನೆ
ಮೇಲೇರಿ ನಿಲ್ಲುತ್ತೇನೆ.

* * * *

## ಕೃತಿಕಾರರ ಪರಿಚಯ :



**ಡಾ. ಎಲ್. ಹನುಮಂತಯ್ಯ** ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮೇಶ್ವರ ಗ್ರಾಮದಲ್ಲಿ ೧೯೫೮ ರಲ್ಲಿ ಜನಿಸಿದರು. ಇವರು **'ಬಂಡಾಯ ಕಥೆಗಳಲ್ಲಿ ದಲಿತ ಪ್ರಜ್ಞೆ'** ಎಂಬ ಮಹಾಪ್ರಬಂಧಕ್ಕೆ ಪಿಹೆಚ್.ಡಿ. ಪದವಿಯನ್ನು ಪಡೆದಿದ್ದಾರೆ. ಶ್ರೀಯುತರು 'ಕಪ್ಪುಕಣ್ಣಿನ ಹುಡುಗಿ', 'ಅವ್ವನ ಕವಿತೆ', 'ಜೀವಗಾನ', 'ಕರ್ಣರಾಗ', 'ಅಕ್ಷಾರ ಅಕ್ಷಾರವೇ' ಮುಂತಾದ ಕವನ ಸಂಕಲನಗಳನ್ನು, 'ಅಂಬೇಡ್ಕರ್' (ನಾಟಕ), 'ದಲಿತ ಲೋಕದ ಒಳಗೆ', 'ಅಂಬೇಡ್ಕರ್ ಮತ್ತು ಸಮಕಾಲೀನ' ಮುಂತಾದ ವೈಚಾರಿಕ ಕೃತಿಗಳನ್ನು ಬರೆದಿದ್ದಾರೆ.

ಇವರಿಗೆ ಕರ್ನಾಟಕ ರಾಜ್ಯ ಸರ್ಕಾರದ ಅಂಬೇಡ್ಕರ್ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿವೆ. ಶ್ರೀಯುತರು ವಿಧಾನ ಪರಿಷತ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. 'ಅಟ್ಟ ಹತ್ತ ಬೇಡ' ಪದ್ಯವನ್ನು **'ಅವ್ವನ ಕವಿತೆ'** ಎಂಬ ಕವನ ಸಂಕಲನದಿಂದ ಆರಿಸಿದೆ.

©KTBS Not to be republished

# ಅಭ್ಯಾಸ

## I. ಪದಗಳ ಅರ್ಥ :

**ಅಟ್ಟ** – ಮಹಡಿ; ಎತ್ತರದ ಸ್ಥಳ.
**ಜಾಳು** – ಟೊಳ್ಳು
**ಹಾದು** – ದಾಟಿ; ಮೀರಿ.
**ಮರಿ** – ಮಗು
**ಮಂದಿ** – ಜನ

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಅಜ್ಜನು ಮಗನಿಗೆ ಅಟ್ಟ ಹತ್ತ ಬೇಡ ಎಂದು ಏಕೆ ಹೇಳುತ್ತಾನೆ?
೨. ಅಟ್ಟ ನೋಡದೆ ಬೆಟ್ಟ ಹತ್ತುತ್ತೇನೆ ಎನ್ನುವ ಮಾತಿನಲ್ಲಿ ವ್ಯಕ್ತಗೊಂಡಿರುವ ಭಾವನೆಗಳೇನು?
೩. ದೂರದ ಬೆಟ್ಟ ಹೇಗೆ ಕಾಣುತ್ತದೆ?
೪. ಮಗು ಬೆಟ್ಟ ಹತ್ತಲು ಬಯಸಿದ್ದು ಏಕೆ?
೫. ಡಾ. ಎಲ್. ಹನುಮಂತಯ್ಯನವರು ಯಾವ ವಿಷಯದ ಮೇಲೆ ಪಿಹೆಚ್.ಡಿ. ಪದವಿ ಪಡೆದಿದ್ದಾರೆ?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಬರೆಯಿರಿ.**

೧. ಬೆಟ್ಟ ಹತ್ತುವ ಹಾದಿ ಹೇಗಿರುತ್ತದೆ?
೨. ಅಟ್ಟ ಮತ್ತು ಬೆಟ್ಟಕ್ಕಿರುವ ವ್ಯತ್ಯಾಸಗಳೇನು?
೩. 'ಬೆಟ್ಟ ಹತ್ತ ಬೇಡ' ಕವಿತೆಯಲ್ಲಿ ಹುಡುಗನ ಸಂಕಲ್ಪವೇನು?
೪. 'ಬೆಟ್ಟ ಹತ್ತ ಬೇಡ' ಕವಿತೆಯಲ್ಲಿ ಅಜ್ಜನ ಉಪದೇಶವೇನು?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು –ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. 'ಅಟ್ಟ ಹತ್ತ ಬೇಡ' ಕವಿತೆಯಲ್ಲಿ ವ್ಯಕ್ತವಾಗಿರುವ ಕವಿಯ ಭಾವನೆಗಳೇನು?
೨. 'ಅಟ್ಟ ಹತ್ತ ಬೇಡ' ಎನ್ನುವ ಅಜ್ಜನ ಮಾತಿಗೆ ಮಗನ ಸವಾಲು ಏನು?

**ಈ) ಸಂದರ್ಭದೊಡನೆ ವಿವರಿಸಿರಿ.**

೧. ಅಟ್ಟ ಹತ್ತದವನು ಬೆಟ್ಟ ಹತ್ತುತ್ತಾನೆಯೆ
೨. ಅಟ್ಟ ನೋಡದೆ ಬೆಟ್ಟ ಹತ್ತುತ್ತೇನೆ

©KTBS Not to be republished

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಬೇಡ, ನುಣುಪು, ಬೀಳಿಸು, ದೂರ, ಹತ್ತು.

**ಆ) ಕೆಳಗಿನ ಪದಗಳಿಗೆ ನಾನಾರ್ಥ ಬರೆಯಿರಿ.**

ಹತ್ತು, ಬೇಡ.

**ಇ) ಕೆಳಗಿನ ಪದಗಳ ವಿಶೇಷಾರ್ಥ ಗಮನಿಸಿ, ಅದೇ ಅರ್ಥ ಬರುವಂತೆ ವಾಕ್ಯಗಳನ್ನು ರಚಿಸಿರಿ.**

ಅಟ್ಟ ಹತ್ತಿಸು – ಅತಿಯಾಗಿ ಹೊಗಳು

ದೂರದ ಬೆಟ್ಟ – ಕೈಗೆ ಸಿಗದ

ಬೀಳಿಸು – ಸೋಲಿಸು

ಮೇಲೇರಿ ನಿಲ್ಲು – ಬಲಿಷ್ಠನಾಗು

**ಈ) ಕಲ್ಲುಮುಳ್ಳು** – ಇಂತಹ ಐದು ಜೋಡಿ ಪದಗಳನ್ನು ಬರೆಯಿರಿ.

## IV. ಚಟುವಟಿಕೆಗಳು :

೧. ದಲಿತ ಸಾಹಿತ್ಯದ ಪ್ರಮುಖ ಸಾಹಿತಿಗಳ ಹೆಸರುಗಳನ್ನು ಪಟ್ಟಿಮಾಡಿ.

೨. ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿರುವ ಇನ್ನಿತರ ಕವನಗಳನ್ನು ಗ್ರಂಥಾಲಯದಿಂದ ಪಡೆದು ಓದಿರಿ.

©KTBS Not to be republished

# ೩. ಅವರು ಮತ್ತು ನಾವು

– ಟಿ. ಯಲ್ಲಪ್ಪ

**ಪಾಠ ಪ್ರವೇಶ :** ನವ್ಯೋತ್ತರ ಕನ್ನಡ ಕಾವ್ಯದ ಸಂದರ್ಭದಲ್ಲಿ ಬಂಡಾಯ ಮತ್ತು ದಲಿತ ಸಾಹಿತ್ಯ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಸಮಾಜದ ದುರ್ಬಲ ಹಾಗೂ ಶೋಷಿತರ ಮೇಲಿನ ಅನ್ಯಾಯಗಳನ್ನು ಈ ಸಾಹಿತ್ಯವು ಪ್ರತಿಭಟಿಸಿದೆ. ಪ್ರಸ್ತುತ ಕವನದಲ್ಲಿ ಸಮಾಜದ ಎರಡು ವರ್ಗ ಹಾಗೂ ವರ್ಣಗಳಲ್ಲಿ ಕಂಡುಬರುವ ವೈರುಧ್ಯಗಳನ್ನು ಗುರುತಿಸಬಹುದು.

'ಮಾಡಿದ್ದುಣ್ಣೋ ಮಾರಾಯ' ಎನ್ನುವ ಗಾದೆಯಂತೆ ನಾವು ಮಾಡಿದ ಪಾಪ ಕೃತ್ಯಗಳಿಗೆ ಪ್ರಾಯಶ್ಚಿತ್ತವನ್ನು ಅನುಭವಿಸಲೇ ಬೇಕಾಗುತ್ತದೆ. ದೀನದಲಿತರನ್ನು ನಿಕೃಷ್ಟವಾಗಿ ನಡೆಸಿಕೊಂಡವರ ಸ್ಥಿತಿ ಇಂದು ಯಾವ ರೀತಿ ಹೀನಾಯವಾಗಿದೆ ಎಂಬುದನ್ನು 'ಅವರು ಮತ್ತು ನಾವು' ಕವಿತೆ ಬಿಚ್ಚಿಡುತ್ತದೆ. ಒಂದು ಕಾಲದಲ್ಲಿ ಮೆರೆದು ಈಗ ದುಃಖದಲ್ಲಿರುವವರನ್ನು ಶಪಿಸದೆ, ಅವರಿಗೆ ಪ್ರೀತಿ ಪ್ರೇಮವನ್ನು ಹಂಚುವ ಮೂಲಕ ಸುಖದ ನಿಜವಾದ ಅರ್ಥವನ್ನು ತಿಳಿಸೋಣ, ಮಾನವತೆಯ ಪಾಠ ಕಲಿಸೋಣ ಎನ್ನುವ ವಿಶಾಲ ದೃಷ್ಟಿಕೋನ ಕವನದಲ್ಲಿ ವ್ಯಕ್ತವಾಗಿದೆ.



ನಾವು ತಿನ್ನುವುದಕ್ಕೆ
ಅನ್ನ ಕೇಳಿದೆವು
ಅವರು ಹುಳ ಬಿದ್ದ
ಅಕ್ಕಿ ಕೊಟ್ಟರು
ನಾವು ಹುಳ ದೇವರಿಗೆ ಕೊಟ್ಟು
ಅಕ್ಕಿಯನ್ನು ಕಣ್ಣಿಗೊತ್ತಿಕೊಂಡು
ಅನ್ನ ಮಾಡಿ ಉಂಡೆವು !

ಈಗ
ಅವರು ತಿನ್ನುವ ಅನ್ನಕ್ಕೇ
ಹುಳ ಬಿದ್ದಿದೆ
ಅವರು ಹುಳುಗಳನ್ನು
ನಿಷ್ಕಾರುಣ್ಯವಾಗಿ ಕೊಂದುಬಿಟ್ಟು
ಅನ್ನಕ್ಕಾಗಿ ದೇವರಿಗೇ
ಕೈ ಚಾಚುತ್ತಿದ್ದಾರೆ!

©KTBS Not to be republished

ಸಾಯುವಾಗ
ನಾವು ಕುಡಿಯುವುದಕ್ಕೆ
ನೀರು ಕೇಳಿದೆವು
ಅವರು ಆಕಾಶದಲ್ಲಿ ನಿಂತು
ಪಾತಾಳಕ್ಕೆ ನೀರು ಸುರಿದರು
ಸುರಿದ ನೀರಲ್ಲಿ
ನಾವು ದಣಿವಾರಿಸಿಕೊಂಡು
ಉಳಿದ ನೀರಲ್ಲಿ
ಕಣ್ಣೀರ ತೊಳೆದುಕೊಂಡೆವು


ಈಗ
ಅವರಿಗೆ ಸಾಯುವಾಗ
ಬಾಯಲ್ಲಿ ನೀರು ಬಿಡುವವರಿಲ್ಲ
ಅವರು ಸಾಕಿ ಸಲಹಿದ ಮಕ್ಕಳು
ಆಕಾಶದಲ್ಲಿ ಹಾರಿ
ದೂರ ದೇಶ ಸೇರಿದ್ದಾರೆ
ಅವರ ನೆನಪಿನಲ್ಲಿಯೇ ಇವರು
ಕಣ್ಣೀರು ಸುರಿಸುತ್ತಾ
ಪಾತಾಳಕ್ಕೆ ಇಳಿದು ಹೋಗಿದ್ದಾರೆ!

ನಮಗೇನಾದರೂ ಕೊಡುತ್ತಲೇ
ನಮ್ಮಗಳ
ಜೀವ, ಮಾನ, ಪ್ರಾಣಗಳ
ಉಳಿಸಿದ ಅವರ
ನಾವು ಶಪಿಸುವುದೂ ತರವಲ್ಲ!
ಮಾನವನೆದೆ ಬರಡೇನಲ್ಲ
ಪ್ರೀತಿ ಪ್ರೇಮಗಳ
ದವಸ ತುಂಬಿದ ಕಣಜ
ಹಂಚಿ ಉಟ್ಟುಣ್ಣುವ
ಸುಖದ ನಿಜ
ತಿಳಿಯಬೇಕಿದೆ ಮನುಜ!

* * * *

©KTBS
Not to be republished

## ಕೃತಿಕಾರರ ಪರಿಚಯ :



**ಟಿ.ಯಲ್ಲಪ್ಪ** ಅವರು ೧೯೭೦ ರಲ್ಲಿ ಜನಿಸಿದರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಎ. ಮತ್ತು ಎಂ.ಫಿಲ್. ಪದವಿಯನ್ನು ಪಡೆದಿದ್ದಾರೆ. ಇವರು 'ಇಪ್ಪತ್ತೆರಡರ ಅಳಲು' (ಪ್ರಬಂಧ ಸಂಕಲನ) ಹಾಗೂ 'ಕಡಲಿಗೆ ಕಳಿಸಿದ ದೀಪ', 'ಚಿಟ್ಟೆ ಮತ್ತು ಜೀವಯಾನ' (ಕವನ ಸಂಕಲನಗಳು) ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ ನಾಡೋಜ ಚೆನ್ನವೀರ ಕಣವಿ ಪ್ರಶಸ್ತಿ, ಜಿ.ಎಸ್.ಶಿವರುದ್ರಪ್ಪ ಕಾವ್ಯ ಪ್ರಶಸ್ತಿ, ಸಂಕ್ರಮಣ ಕಾವ್ಯ ಸ್ಪರ್ಧೆಯ ಬಹುಮಾನ, ಸಂಚಯ ಸಾಹಿತ್ಯ ಸ್ಪರ್ಧೆಯ ಬಹುಮಾನ, 'ಕಡಲಿಗೆ ಕಳಿಸಿದ ದೀಪ' ಕೃತಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಪ್ರಸ್ತುತ 'ಅವರು ಮತ್ತು ನಾವು' ಕವಿತೆಯನ್ನು ಅವರ **'ಚಿಟ್ಟೆ ಮತ್ತು ಜೀವಯಾನ'** ಕವನ ಸಂಕಲನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

## ಅಭ್ಯಾಸ

## I. ಪದಗಳ ಅರ್ಥ :

**ಕಣ್ಣಿಗೊತ್ತಿಕೊ** – ಪವಿತ್ರ ಭಾವನೆಯನ್ನು ಹೊಂದು.
**ಕೈಚಾಚು** – ಬೇಡು
**ದಣಿವು** – ಆಯಾಸ
**ನಿಷ್ಕಾರುಣ್ಯ** – ಕರುಣೆ ಇಲ್ಲದಿರುವಿಕೆ
**ಪಾತಾಳ** – ಭೂಮಿ ಕೆಳಗಿರುವ ಒಂದು ಲೋಕ.
**ಬರಡು** – ನಿಸ್ಸಾರ; ಗೊಡ್ಡು.
**ಮನುಜ** – ಮನುಷ್ಯ
**ಶಪಿಸು** – ಶಾಪಹಾಕು

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ :**

೧. 'ಅವರು ಮತ್ತು ನಾವು' ಕವಿತೆಯಲ್ಲಿನ ವ್ಯಕ್ತಿಗಳು ಯಾರು?
೨. ನಾವು ತಿನ್ನುವುದಕ್ಕೆ ಅನ್ನ ಕೇಳಿದರೆ ಉಳ್ಳವರು ಕೊಟ್ಟದ್ದು ಏನು?
೩. ಹುಳಬಿದ್ದ ಅನ್ನವನ್ನು ಶೋಷಿತರು ಹೇಗೆ ಬಳಸಿಕೊಂಡರು?
೪. ಮಾನವನ ಎದೆಯನ್ನು ಕವಿ ಯಾವುದಕ್ಕೆ ಹೋಲಿಸಿದ್ದಾರೆ?
೫. 'ಅವರು ಮತ್ತು ನಾವು' ಕವನದ ಆಕರ ಕೃತಿ ಯಾವುದು?

©KTBS Not to be republished

**ಆ) ಈ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಒಂದು ಕಾಲದಲ್ಲಿ ಮೆರೆದವರ ಸ್ಥಿತಿ ಇಂದು ಏನಾಗಿದೆ?

೨. ಶ್ರೀಮಂತರನ್ನು ಶಪಿಸುವುದು ತರವಲ್ಲ ಎಂದು ಕವಿಗೆ ಏಕೆ ಅನಿಸಿತು?

೩. ನೀರು ನೀಡಲು ನೋಯಿಸಿದವರ ಸ್ಥಿತಿ ಇಂದು ಏನಾಗಿದೆ?

೪. 'ಅವರು ಮತ್ತು ನಾವು' ಕವಿತೆಯಲ್ಲಿ ಕವಿ ಯಾವ ಸುಖಕ್ಕೆ ಹಂಬಲಿಸುತ್ತಾರೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. 'ಅವರು ಮತ್ತು ನಾವು' ಕವಿತೆಯಲ್ಲಿ ಬಿಂಬಿತವಾಗಿರುವ ವೈರುಧ್ಯಗಳು ಯಾವುವು?

೨. 'ಅವರು ಮತ್ತು ನಾವು' ಕವಿತೆಯಲ್ಲಿ ವ್ಯಕ್ತವಾಗಿರುವ ಕವಿಯ ಭಾವನೆಗಳೇನು?

**ಈ) ಸಂದರ್ಭದೊಡನೆ ವಿವರಿಸಿರಿ.**

೧. ಅವರು ತಿನ್ನುವ ಅನ್ನಕ್ಕೆ ಹುಳ ಬಿದ್ದಿದೆ.

೨. ನಾವು ಕುಡಿಯುವುದಕ್ಕೆ ನೀರು ಕೇಳಿದೆವು.

೩. ಮಾನವನೆದೆ ಬರಡೇನಲ್ಲ.

## III. ಭಾಷಾಭ್ಯಾಸ :

**ಅ) ಇಲ್ಲಿ ನೀಡಿರುವ ವಿಶೇಷೋಕ್ತಿಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ.**

ಕಣ್ಣಿಗೊತ್ತಿಕೊ, ಕೈಚಾಚು, ನೀರುಬಿಡು, ಆಕಾಶದಲ್ಲಿ ಹಾರು, ಪಾತಾಳಕ್ಕೆ ಇಳಿ.

**ಆ) ಕೆಳಗೆ ನೀಡಿರುವ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ.**

ಕಣ್ಣಿಗೊತ್ತಿಕೊ, ದಣಿವಾರಿಸಿಕೊಂಡು, ನಮಗೇನಾದರೂ, ಉಟ್ಟುಣ್ಣುವ.

## IV. ಚಟುವಟಿಕೆಗಳು :

೧. ದೇವನೂರು ಮಹಾದೇವ, ಸಿದ್ಧಲಿಂಗಯ್ಯ ಇವರ ಸಾಹಿತ್ಯವನ್ನು ಸಂಗ್ರಹಿಸಿ ಓದಿರಿ.

೨. ಉಳ್ಳವರ ಹಾಗೂ ಶೋಷಿತರ ತರತಮವನ್ನು ಹೇಗೆ ನಿವಾರಿಸಬಹುದು? ಚರ್ಚಿಸಿ.

೩. 'ಮಾಡಿದ್ದುಣ್ಣೋ ಮಾರಾಯ' ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.


©KTBS Not to be republished

# ೪. ತೊಟ್ಟಿಲು ತೂಗುವ ಹಾಡು

– ವೈದೇಹಿ

**ಪಾಠ ಪ್ರವೇಶ :** ಹಳ್ಳಿಗರು ಪ್ರಕೃತಿಯ ಕೂಸುಗಳಾಗಿದ್ದಾರೆ. ಆಧುನಿಕತೆಯ ಪ್ರಭಾವದಿಂದ ಹಳ್ಳಿಗರು ಪಟ್ಟಣಕ್ಕೆ ವಲಸೆ ಬರುತ್ತಿದ್ದಾರೆ. ನಾಗರಿಕತೆ ಬೆಳೆದಂತೆ ಪ್ರಕೃತಿ ಹಾಗೂ ಜಾನಪದ ಸಂಸ್ಕೃತಿಗಳು ಕಣ್ಮರೆಯಾಗುತ್ತಿವೆ. ಅವಿಭಕ್ತ ಕುಟುಂಬ ಒಡೆದು, ಹಿರಿಯರ ಅನುಭವ ಮಾಗದರ್ಶನಗಳು ಹಾಗೂ ಪ್ರೀತಿಗಳು ಇಂದಿನವರಿಗೆ ಇಲ್ಲವಾಗಿವೆ. ಪ್ರಸ್ತುತ ಕವನದಲ್ಲಿ ತಾಯಿಯೊಬ್ಬಳು ಪ್ರಕೃತಿಯನ್ನು ವರ್ಣಿಸುತ್ತಾ ತನ್ನ ಮಗು ಪ್ರಕೃತಿಗಿಂತಲೂ ಚೆಂದ ಎಂದು ಜೋಗುಳ ಹಾಡುತ್ತಾ ಜಗತ್ತನ್ನೇ ತೂಗುವ ಮಾತೃವಾತ್ಸಲ್ಯ  ಸೊಗಸಾಗಿ ಮೂಡಿಬಂದಿದೆ.

ಮುಗಿಲು ಚಂದ ಮಳೆಯು ಚಂದ
ತೋಯ್ದ ಗುಡ್ಡ ಬೆಟ್ಟ ಚಂದ
ಮಿಟ್ಟೆ ಹೂ ಪಕಳೆ ಚಂದ
ಮೊಟ್ಟೆ ಚಂದ ಹಕ್ಕಿ ಚಂದ
ಎಲ್ಲಕ್ಕಿಂತ ನಮ್ಮ ಮನೆಯ
ತೊಟ್ಟಿಲಿನ ತೊದಲು ಚಂದ
ತೊದಲು ತೂಗಿರೋ ಹಾಡಿ
ಹಾಡಿ ತೂಗಿರೋ



©KTBS Not to be republished



ಹರಿವ ಹೊಳೆಯ ಳು ಳು ಳು ಚಂದ
ಅಲೆಯ ನೊರೆಯ ರು ರು ರು ಚಂದ
ಗಾಳಿ ಸ್ಸುಂಯ್ಯ್ ಹಾಯಿ ಚಂದ
ಸಾವಧಾನ ತೇಲಿ ಬರುವ
ದೋಣಿವೋ -- ಗೀತೆ ಚಂದ
ಎಲ್ಲಕಿಂತ ಜೋಲಿಯೊಳಗೆ
ಲ ಲ ಲ ನಗುವ ಹಸುಳೆ ಚಂದ
ಬೀಸಿ ತೂಗಿರೋ ಜೋಲಿ
ಲಾಲಿ ತೂಗಿರೋ

ಗಿರಿಯು ಚಂದ ಗರಿಯು ಚಂದ
ಗಿರಿಯಲಾಡೋ ನವಿಲು ಚಂದ
ಗಿರಿಗಿರಿ ಗಿರಿಗಿಟಿಯು ಚಂದ
ಗರ್ರ ಗರ್ರ ಬುಗುರಿ ಬಳಿ
ಪಿಳಿಪಿಳಿ ಗಿಳಿ ಗೊಂಬೆ ಚಂದ
ಎಲ್ಲಕ್ಕಿಂತ ಕರಿಕಂಗಳ ಮಿರಿ ಮಿನುಗುವ ತಾರೆ ಚಂದ
ಎಲ್ಲಕ್ಕಿಂತ ಗುಬ್ಬಿ ಗುಬ್ಬೀ ತಾರಮ್ಮಯ್ಯ ಚಂದ ಚಂದ
ಇನ್ನೂ ತೂಗಿರೋ ಹ್ಹೋಯ್
ಮಗುವ ತೂಗಿರೋ ಆಹ
ಜಗವ ತೂಗಿರೋ

* * * *

## ಕೃತಿಕಾರರ ಪರಿಚಯ :



**ವೈದೇಹಿ** ಅವರು ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ ೧೯೪೫ ರಲ್ಲಿ ಜನಿಸಿದರು. ಇವರ ನಿಜನಾಮ ಜಾನಕಿ ಶ್ರೀನಿವಾಸಮೂರ್ತಿ. ಇವರು 'ನೀರೆಯರ ಮನ' ಎಂಬ ಲೇಖನವನ್ನು ಪ್ರಕಟಿಸುವಾಗ 'ವೈದೇಹಿ' ಎಂಬ ಕಾವ್ಯನಾಮವನ್ನು ರೂಢಿಸಿಕೊಂಡರು. ಇವರು 'ಬಿಂದು ಬಿಂದಿಗೆ', 'ಪಾರಿಜಾತ', 'ಅಸ್ಪೃಶ್ಯರು', 'ಅಮ್ಮಚ್ಚಿಯೆಂಬ ನೆನಪು', 'ಮಲ್ಲಿನಾಥನ ಧ್ಯಾನ', 'ಮೇಜು ಮತ್ತು ಬಡಗಿ' ಮುಂತಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಎಂ.ಕೆ.ಇಂದಿರಾ ಪ್ರಶಸ್ತಿ, ಅನುಪಮಾ ಪ್ರಶಸ್ತಿ, ಕರ್ನಾಟಕ ಸರಕಾರದ 'ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ' ಹಾಗೂ 'ಕ್ರೌಂಚಪಕ್ಷಿಗಳು' ಕಥಾ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೂ ಲಭಿಸಿದೆ. ಪ್ರಸ್ತುತ ಕವನವನ್ನು ಅವರ **'ಹೂವ ಕಟ್ಟುವ ಕಾಯಕ'** ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

© KTBS Not to be republished

# ಅಭ್ಯಾಸ

## I. ಪದಗಳ ಅರ್ಥ :

**ಅಲೆ** – ತರಂಗ; ತೆರೆ.
**ಜೋಲಿ** – ತೊಟ್ಟಿಲು
**ತೊಯ್ದು** – ಒದ್ದೆಯಾದ; ನೆನೆದ.
**ಪಕಳೆ** – ಎಸಳು; ಹೂವಿನ ದಳ.
**ಸಾವಧಾನ** – ನಿಧಾನ; ಸಾವಕಾಶ.
**ಹೊಳೆ** – ನದಿ; ಪ್ರಕಾಶಿಸು.
**ಕರಿಕಂಗಳ** –ಕಪ್ಪನೆ ಅಂಗಳ; ರಾತ್ರಿಯ ಆಕಾಶ.
**ತಾರೆ** – ನಕ್ಷತ್ರ
**ನೊರೆ** – ನೀರಿನ ಮೇಲಿನ ಬುರುಗು; ಗಾಳಿಗುಳ್ಳೆ.
**ಮುಗಿಲು** – ಆಕಾಶ; ಗಗನ; ಬಾನು.
**ಹಸುಳೆ** – ಎಳೆ ಮಗು; ಹಸುಗೂಸು.

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. 'ತೊಟ್ಟಿಲು ತೂಗುವ ಹಾಡು' ಕವಿತೆಯ ಆಕರ ಕೃತಿ ಯಾವುದು?
೨. ಕವಿಗೆ ಪ್ರಕೃತಿಗಿಂತಲೂ ಹೆಚ್ಚು ಚಂದವಾಗಿ ಕಂಡದ್ದು ಯಾವುದು?
೩. ಹೊಳೆ, ಅಲೆ ಹಾಗೂ ಗಾಳಿ ಹೇಗೆ ನಾದಗೈಯುತ್ತವೆ?
೪. ಜೋಲಿಯೊಳಗಿನ ಹಸುಳೆ ಹೇಗೆ ನಗುತ್ತದೆ?
೫. ಗಿರಿಯ ನವಿಲಿನ ಚಂದವೇನು?
೬. ಕರಿಕಂಗಳಲ್ಲಿ ಎಂತಹ ಚಂದವಿದೆ?
೭. ವೈದೇಹಿಯವರ ನಿಜವಾದ ಹೆಸರೇನು?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. 'ತೊಟ್ಟಿಲು ತೂಗುವ ಹಾಡು' ಕವಿತೆಯಲ್ಲಿ ಕವಿಗೆ ಚಂದವಾಗಿ ಕಂಡ ಪ್ರಕೃತಿಯ ದೃಶ್ಯಗಳಾವುವು?
೨. ಕವಯಿತ್ರಿಯು ತೊಟ್ಟಿಲಲ್ಲಿ ನಗುವ ಹಸುಳೆಯ ಚಂದವನ್ನು ಹೇಗೆ ವರ್ಣಿಸಿದ್ದಾರೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. 'ತೊಟ್ಟಿಲು ತೂಗುವ ಹಾಡು' ಕವಿತೆಯಲ್ಲಿ ಕವಯಿತ್ರಿ ಜಗವನ್ನೆಲ್ಲಾ ತೂಗಿರುವ ಪರಿ ಹೇಗೆ?
೨. 'ತೊಟ್ಟಿಲು ತೂಗುವ ಹಾಡು' ಕವಿತೆಯ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

©KTBS Not to be republished

**ಈ) ಸಂದರ್ಭದೊಂದಿಗೆ ವಿವರಿಸಿರಿ.**

೧. ಎಲ್ಲಕ್ಕಿಂತ ನಮ್ಮ ಮನೆಯ ತೊಟ್ಟಿಲಿನ ತೊದಲು ಚಂದ

೨. ಮಗುವ ತೂಗಿರೋ ಆಹ ಜಗವ ತೂಗಿರೋ

## III. ಭಾಷಾಭ್ಯಾಸ :

**ಅ) 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ೧) ಹರಿವ | ಅ) ಗಾಳಿ |
| ೨) ಬೀಸುವ | ಆ) ಹೊಳೆ |
| ೩) ತಿರುಗುವ | ಇ) ತಾರೆ |
| ೪) ಮಿನುಗುವ | ಈ) ಬುಗರಿ |
| ೫) ತೂಗುವ | ಉ) ಲಾಲಿ |
| ೬) ಹಾಡುವ | ಊ) ದೋಣಿ |
| ೭) ತೇಲುವ | ಋ) ತೊಟ್ಟಿಲು |
| | ಎ) ಮಗು |

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

ಹೊಳೆ, ಗಾಳಿ, ಸಾವಧಾನ, ಮನೆ, ನವಿಲು, ಚಂದ.

**ಇ) ಕೆಳಗಿನ ಪದಗಳಿಗೆ ವಿವಿಧಾರ್ಥಗಳನ್ನು ಬರೆಯಿರಿ.**

ಮುಗಿಲು, ಹೊಳೆ, ತಾರೆ, ಕರಿ.

**ಈ) 'ತೊಟ್ಟಿಲು ತೂಗುವ ಹಾಡು' ಕವಿತೆಯಲ್ಲಿ ಬಳಸಿರುವ ಅನುಕರಣಾವ್ಯಯ ಪದಗಳನ್ನು ಆರಿಸಿ ಬರೆಯಿರಿ.**

ಉದಾ : ಳು ಳು ಳು

## IV. ಚಟುವಟಿಕೆಗಳು :

೧. ಪದ್ಯವನ್ನು ರಾಗವಾಗಿ ಹಾಡಿರಿ.

೨. ಜೋಗುಳದ ಪದಗಳನ್ನು ಸಂಗ್ರಹಿಸಿ ರಾಗವಾಗಿ ಹಾಡಿರಿ.

೩. ಪ್ರಕೃತಿಯಲ್ಲಿ ನಿಮಗೆ ಚಂದವಾಗಿ ಕಾಣುವ ದೃಶ್ಯಗಳನ್ನು ಪಟ್ಟಿಮಾಡಿ, ಕವನವೊಂದನ್ನು ರಚಿಸಿರಿ.

©KTBS Not to be republished

# ೫. ಮನೆಗೆಲಸದ ಹೆಣ್ಣುಮಗಳು

**– ಎಸ್. ಜಿ. ಸಿದ್ಧರಾಮಯ್ಯ**

**ಪಾಠ ಪ್ರವೇಶ :** ಕುಡಿತಕ್ಕೆ ಬಲಿಯಾದ ವ್ಯಕ್ತಿ ಕುಟುಂಬದ ಸರ್ವನಾಶಕ್ಕೆ ಕಾರಣನಾಗುತ್ತಾನೆ. ಅವನ ಜೀವನವೆಲ್ಲ ಹಾಳಾಗುವುದು. ಅಲ್ಲದೆ ಅವನ ಮಕ್ಕಳು ಮೊಮ್ಮಕ್ಕಳು ಜೀತ (ಸೇವೆ) ಮಾಡಿಕೊಂಡು, ಸಾಲದಲ್ಲಿ ಹುಟ್ಟಿ ಸಾಲದಲ್ಲಿಯೇ ಸಾಯುವರು. ಕುಡಿತದ ಆಸೆಯನ್ನು ತೀರಿಸಿಕೊಳ್ಳಲು ಮಕ್ಕಳನ್ನು ಕೆಲಸಕ್ಕಿಡುವರು. ಹೀಗೆ ಕುಡಿತದ ದುಶ್ಚಟಕ್ಕೆ ಬಿದ್ದ ವ್ಯಕ್ತಿಯೊಬ್ಬನ ಮಗಳ ದುಸ್ಥಿತಿಯ ಚಿತ್ರಣ ಈ ಕವನದ ವಸ್ತು.

'ಮನೆಗೆಲಸದ ಹೆಣ್ಣುಮಗಳು' ಕವಿತೆಯು ನಮ್ಮ ಸಮಾಜದ ಅವ್ಯವಸ್ಥೆಯನ್ನು, ಹೆಣ್ಣು ಮಕ್ಕಳ ದಾರುಣ, ಅಸಹಾಯಕ ಸ್ಥಿತಿಯನ್ನು ತೆರೆದಿಡುತ್ತದೆ ಹಾಗೂ ಹೆಣ್ಣುಮಕ್ಕಳ ಶಿಕ್ಷಣದ ಹಕ್ಕನ್ನು ಪ್ರತಿಪಾದಿಸುತ್ತದೆ. ಸಮಾಜದ ಪ್ರತಿಯೊಂದು ಮಗುವು ಶಿಕ್ಷಣ ಪಡೆಯಬೇಕು ಎಂಬುದು ಕವನದ ಆಶಯವಾಗಿದೆ.



©KTBS Not to be republished

ಕುಡುಕ ಅಪ್ಪ ಸಾಲ ಮಾಡಿ
ನನ್ನ ಜೀತಕಿಟ್ಟನು
ಪಟ್ಟಣಕ್ಕೆ ಕರೆತಂದು
ಮನೆಕೆಲಸಕ್ಕೆ ಬಿಟ್ಟನು

ಕಸಮುಸುರೆ ತೊಳೆಯುತೀನಿ
ಬಟ್ಟೆ ಬರೆ ಒಗೆಯುತೀನಿ
ನೀರೊಳಾಡಿ ಕೈಯಿಸೆಲೆತು
ಕಾಲುಹುಣ್ಣು ಮೈಯಿ ನೋವು

ಯೂನಿಫಾರಂ ಹುಡುಗನನ್ನು
ಶಾಲೆಗೆಂದು ಬಿಡುತೀನಿ
ಶಾಲೆ ಮಕ್ಕಳನ್ನು ನೋಡಿ
ಮೂಕಳಾಗಿ ನಿಲ್ಲುತೀನಿ


ಅವರಂತೆ ನಾನಿಲ್ಲ
ಅವರ ನಗುವು ನನ್ನಲಿಲ್ಲ
ಆ ಪುಸ್ತಕ ಆ ಸ್ಲೇಟು
ಯಾಕೆ ನನಗೆ ಸಿಕ್ಕಲಿಲ್ಲ
ಹೆಣ್ಣೊಂದು ಕಲಿತರೆ
ಶಾಲೆಯೊಂದು ತೆರೆದಂತೆ.

ಮನೆಯೆ ಮೊದಲ ಪಾಠಶಾಲೆ
ತಾಯಿ ಮೊದಲ ಗುರುವು
ಮಕ್ಕಳೇ ದೇವರೆಂದು
ಹೇಳುತಾರೆ ದೊಡ್ಡವರು
ನಾವು ಮಕ್ಕಳಲ್ಲವೇ
ನಮಗೆ ಹಕ್ಕು ಇಲ್ಲವೇ?

* * * *

©KTBS Not to be republished

## ಕೃತಿಕಾರರ ಪರಿಚಯ :



**ಎಸ್. ಜಿ. ಸಿದ್ಧರಾಮಯ್ಯ** ಅವರು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ೧೯೪೬ ರಲ್ಲಿ ಜನಿಸಿದರು. ಇವರು ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಸಮರ್ಥ ರೀತಿಯಲ್ಲಿ ಕಾರ್ಯ ನಿರ್ವಹಿಸಿದರು.

ಇವರು 'ಗಾಲ್ಫ್ ಉಬ್ಬಿನ ಮೇಲೆ', 'ಕಾಡುವ ಬೇಲಿ ಹೂ', 'ಅವಳೆದೆಯ ಜಂಗಮ', 'ಸೊಲ್ಲು ಫಲವಾಗಿ', 'ಮರು ಜೇವಣಿ', 'ಕರೆಬಳಗ', 'ಬೀದಿ ಅಲ್ಲಮ', 'ಕಾಯ ಮಾಯದ ಹಾಡು' ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪು.ತಿ.ನ.ಕಾವ್ಯ ಪ್ರಶಸ್ತಿ, ಜಿ.ಎಸ್.ಎಸ್. ಕಾವ್ಯ ಪ್ರಶಸ್ತಿ, ಮುಂತಾದ ಪ್ರಶಸ್ತಿಗಳು ದೊರಕಿವೆ. ಪ್ರಸ್ತುತ ಕವನವನ್ನು **"ಉರಿವ ಬತ್ತಿ ತೈಲ"** ಕವನ ಸಂಕಲನದಿಂದ ಆರಿಸಲಾಗಿದೆ.

## ಅಭ್ಯಾಸ

## I. ಪದಗಳ ಅರ್ಥ :

**ಜೀತ** – ಕೂಲಿ ಕೆಲಸ; ಚಾಕರಿ.

**ಮುಸುರೆ** – ಆಹಾರ ಪದಾರ್ಥಗಳನ್ನು ಬೇಯಿಸಿದ ಪಾತ್ರೆ ತೊಳೆಯದೆ ಉಂಟಾದ ಅಶುಚಿ.

**ಯೂನಿಫಾರಂ** – ಸಮವಸ್ತ್ರ

**ಸೆಲೆ** – ತೇವದಿಂದ ಚರ್ಮ ಕೊಳೆತಂತಾಗು; ಒಸರುವಿಕೆ.

**ಹಕ್ಕು** – ಒಡೆತನ; ಅಧಿಕಾರ; ಸ್ವಾಮ್ಯ.

**ಹುಣ್ಣು** – ಗಾಯ

## II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಅಪ್ಪ ಮಗಳನ್ನು ಎಲ್ಲಿ ಜೀತಕ್ಕಿಟ್ಟನು?

೨. ಅಪ್ಪ ಮಗಳನ್ನು ಏಕೆ ಜೀತಕ್ಕಿಟ್ಟನು?

೩. ಶಿಕ್ಷಣದಲ್ಲಿ ಮೊದಲ ಗುರು ಮತ್ತು ಮೊದಲ ಶಾಲೆ ಯಾವುದು?

೪. ಜೀತಕ್ಕಿದ್ದ ಹೆಣ್ಣುಮಗಳ ಕೈಕಾಲುಗಳು ಗಾಯಗೊಂಡಿದ್ದು ಏಕೆ?

೫. ಮನೆಗೆಲಸದ ಹೆಣ್ಣು ಮಗಳು ಏನನ್ನು ನೋಡಿ ಮೂಕಳಾಗುತ್ತಾಳೆ?

೬. 'ಮನೆಗೆಲಸದ ಹೆಣ್ಣು ಮಗಳು' ಕವಿತೆಯ ಆಕರ ಕೃತಿ ಯಾವುದು?



©KTBS Not to be republished

ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಕುಡುಕ ಅಪ್ಪ ಮಾಡಿದ ತಪ್ಪುಗಳಾವುವು?

೨. ಮನೆಗೆಲಸದ ಹೆಣ್ಣು ಮಗಳು ಮಾಡುತ್ತಿದ್ದ ಕೆಲಸಗಳಾವುವು?

೩. ಶಾಲೆ ನೋಡಿದಾಗ ಮನೆಗೆಲಸದ ಹೆಣ್ಣು ಮಗಳ ಮನದಲ್ಲಿ ಯಾವ ಪ್ರಶ್ನೆಗಳು ಕಾಡತೊಡಗಿದವು?

೪. ಹೆಣ್ಣು ಮಕ್ಕಳ ಶಿಕ್ಷಣವನ್ನು ಸಾರುವ ಧ್ಯೇಯ ವಾಕ್ಯಗಳಾವುವು?

ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಜೀತದ ಹೆಣ್ಣು ಮಗಳು ಅನುಭವಿಸಿದ ಕಷ್ಟಗಳಾವುವು? ಆಕೆ ಶಿಕ್ಷಣದ ಹಕ್ಕನ್ನು ಯಾವರೀತಿ ಪ್ರತಿಪಾದಿಸುತ್ತಾಳೆ?

ಈ) ಕೆಳಗಿನ ವಾಕ್ಯಗಳನ್ನು ಸಂದರ್ಭದೊಡನೆ ವಿವರಿಸಿರಿ.

೧. ಅವರಂತೆ ನಾನಿಲ್ಲ.

೨. ಶಾಲೆಯೊಂದು ತೆರೆದಂತೆ.

೩. ನಮಗೆ ಹಕ್ಕು ಇಲ್ಲವೇ?

## III. ಭಾಷಾಭ್ಯಾಸ :

ಅ) ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ.

ಮನೆಗೆಲಸ, ಶಾಲೆಯೊಂದು, ದೇವರೆಂದು, ನಾನಿಲ್ಲ, ನೀರೊಳಾಡಿ, ಹೆಣ್ಣೊಂದು.

ಆ) 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ:

| 'ಅ' ಪಟ್ಟಿ | 'ಬ' ಪಟ್ಟಿ |
|---|---|
| ೧) ಕಸಮುಸುರೆ | ಅ) ಒಗೆಯುತೀನಿ |
| ೨) ಬಟ್ಟೆ ಬರೆ | ಆ) ತೊಳೆಯುತೀನಿ |
| ೩) ಶಾಲೆಗೆ | ಇ) ನಿಲ್ಲುತೀನಿ |
| ೪) ಜೀತ ಪದ್ಧತಿ | ಈ) ಸೇರ್ತೀನಿ |
| | ಉ) ತೊಲಗಿಸ್ತೀನಿ |

© KTBS Not to be republished

ಇ) ಕೆಳಗಿನ ಪದಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ.

ಶಾಲಾ, ಪುಸ್ತಕ, ಮೂಗ, ಸಂತೆ.

ಈ) ಕೆಳಗಿನ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಹೆಸರಿಸಿರಿ.

ಮಕ್ಕಳನ್ನು, ನೀಹಾರಿಕಾಗೆ, ಅವರಿಂದ, ಪುಸ್ತಕದ.

ಉ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.

ನಗು, ಮೊದಲು, ಪಟ್ಟಣ.

## IV. ಚಟುವಟಿಕೆಗಳು :

೧. ಬಾಲಕಾರ್ಮಿಕರ ಬವಣೆಯನ್ನು ಕುರಿತು ಲೇಖನ ಬರೆಯಿರಿ.

೨. ನಿಮ್ಮ ಸುತ್ತಲಿನ ಹೆಣ್ಣು ಮಕ್ಕಳ ಕರುಣಾಜನಕ ಮಾಹಿತಿ ಸಂಗ್ರಹಿಸಿರಿ.

೩. ಪದ್ಯದಲ್ಲಿ ಬಂದಿರುವ ಅನ್ಯದೇಶೀಯ ಪದಗಳನ್ನು ಪಟ್ಟಿ ಮಾಡಿರಿ.

೪. ಸ್ತ್ರೀ ಶಿಕ್ಷಣದ ಮಹತ್ವ ತಿಳಿಸುವ ಹೇಳಿಕೆಗಳನ್ನು ಸಂಗ್ರಹಿಸಿ, ಶಾಲೆಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿರಿ.

©KTBS Not to be republished

# ೬. ಹೊನ್ನೆಯ ಮರದ ನೆರಳು

**– ಜನಪದ ಸಾಹಿತ್ಯ**

**ಪಾಠ ಪ್ರವೇಶ :** ಜನಪದರು ತಮ್ಮ ನೋವು, ನಲಿವು, ಕಷ್ಟ, ಸುಖ, ದುಃಖ ದುಮ್ಮಾನಗಳನ್ನು ಪರಿಹರಿಸಿಕೊಳ್ಳಲು ಹಲವಾರು ಮಾರ್ಗಗಳನ್ನು ಕಂಡುಕೊಂಡಿದ್ದರು. ಅವುಗಳಲ್ಲಿ ಕ್ರೀಡೆಗಳು, ಕಥೆ, ಕೋಲಾಟ, ಹಾಡು, ಒಗಟು ಇತ್ಯಾದಿ. ಹೊನ್ನೆಯ ಮರ ಪದ್ಯದಲ್ಲಿ ಜಗವೆಲ್ಲ ಸುಭಿಕ್ಷವಾಗಿರಲಿ ಎಂಬ ಸದಾಶಯವಿದೆ. ಪ್ರಕೃತಿಯ ವರ್ಣನೆ, ಹೆಣ್ಣಿಗೆ ತನ್ನ ತವರುಮನೆಯ ಬಗೆಗಿನ ಮಮಕಾರ, ಮಕ್ಕಳಾಟದ ಮಹಿಮೆ ಮುಂತಾದವುಗಳನ್ನು ಹೃದಯಂಗಮವಾಗಿ ವರ್ಣಿಸಲಾಗಿದೆ.

ಮಾರುದ್ದ ಪೈರಾಗಲಿ ಮೊಳದುದ್ದ ತೆನೆಯಾಗಲಿ
ಬಡವನ ಮನೆಗೆ ಸಿರಿ ಬರಲಿ । ಭೂಮಿತಾಯಿ
ಕಂದವ್ನ ಹಸಿವು ಇಂಗೋಗ್ಲಿ ॥ ॥ ೧ ॥

ನೆಲದಾಗ ಗಿಡ ಚಲುವ ಮಾವಿನ ಗಿಡ ಚಲುವ
ಹಕ್ಕಿ ಪಕ್ಕ್ಯಾಗ ಗಿಣಿ ಚಲುವ । ಮ್ಯಾಲೀನ
ಚಿಕ್ಕ್ಯಾಗ ಚಲುವ ಚಂದ್ರಾಮ ॥ ॥ ೨ ॥



©KTBS Not to be republished

ತಾಯಿಲ್ದ ತವರೀಗಿ ಹೋಗದಿರು ನನ ಮನವೆ
ನೀರಿಲ್ದ ಕೆರಿಗಿ ಕರ ಬಂದು । ತಿರುಗಾಗ
ಆಗ ನೋಡಿದರ ದುಃಖಗಳ ॥ ॥ ೩ ॥

ತೊಟ್ಟೀಲ ಹೊತ್ಕೊಂಡು ತೌರ್ಬಣ್ಣ ಉಟ್ಕೊಂಡು
ಅಪ್ಪ ಕೊಟ್ಟೆಮ್ಮೆ ಹೊಡಕೊಂಡು । ತಂಗ್ಯವ್ವ
ತಿಟ್ಹತ್ತಿ ತಿರುಗಿ ನೋಡ್ಯಾಳ ॥ ॥ ೪ ॥

ನನ್ನಯ್ಯನಂತೋರು ಹನ್ನೆರಡು ಮಕ್ಕಳು
ಹೊನ್ನೆಯ ಮರದ ನೆರಳಲ್ಲಿ । ಆಡುವಾಗ
ಸನ್ನೇಸಿ ಜಪವ ಮರೆತಾನು ॥ ॥ ೫ ॥

* * * *

## ಕೃತಿಕಾರರ ಪರಿಚಯ :

'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂಬ ಕವಿರಾಜಮಾರ್ಗಕಾರನ ಮಾತಿನಂತೆ ನಮ್ಮ ಪೂರ್ವಜರು ಯಾವುದೇ ಶಾಸ್ತ್ರ ಗ್ರಂಥಗಳನ್ನು ಓದದಿದ್ದರೂ ಬಲು ಸೊಗಸಾದ ಕಾವ್ಯಗಳನ್ನು ಬರೆಯಬಲ್ಲ ಕಾವ್ಯ ಕೌಶಲ್ಯ ಅವರಲ್ಲಿತ್ತು. ಹಾಗೆ ಬರೆಯಲ್ಪಟ್ಟ ಸಾಹಿತ್ಯವೇ ಜನಪದ ಸಾಹಿತ್ಯ. ಜನರ ಬಾಯಿಯಿಂದ ಬಾಯಿಗೆ ಹರಿದು ಬಂದಿರುವ ಮೌಖಿಕ ಸಾಹಿತ್ಯ ಪರಂಪರೆಯೇ ಜನಪದ ಸಾಹಿತ್ಯ.

ಸಮೂಹಸೃಷ್ಟಿ, ಗೇಯತೆ, ಜನಪ್ರಿಯತೆ ಮುಂತಾದವುಗಳೇ ಜನಪದ ಸಾಹಿತ್ಯದ ಪ್ರಮುಖ ಲಕ್ಷಣಗಳು. ಈ ಸಾಹಿತ್ಯದಲ್ಲಿ ಪ್ರಕೃತಿಯ ವರ್ಣನೆ, ಮಾನವೀಯ ಮೌಲ್ಯಗಳು, ಗಂಡ–ಹೆಂಡತಿ ಸಂವಾದ, ತವರು ಮನೆಯ ಪ್ರೀತಿ, ಅಭಿಮಾನ, ಅಕ್ಕರೆ, ತಾಯಿಯ ಹಾರೈಕೆ ಮುಂತಾದ ವಸ್ತು ವೈವಿಧ್ಯತೆಗಳು ಹಾಸುಹೊಕ್ಕಾಗಿವೆ.

ಜನಪದ ಸಾಹಿತ್ಯದಲ್ಲಿ ತ್ರಿಪದಿಗಳಿಗೆ ಪ್ರಮುಖ ಸ್ಥಾನವಿದ್ದು, ಪ್ರತಿ ತ್ರಿಪದಿಗಳು ಮುಕ್ತಕಗಳಂತೆ ಬಿಡಿ ಪದ್ಯಗಳಾಗಿವೆ. ತ್ರಿಪದಿ ದೇಸಿ ಛಂದಸ್ಸು. 'ಹೊನ್ನೆಯ ಮರದ ನೆರಳು' ಭಾಗದಲ್ಲಿನ ತ್ರಿಪದಿಗಳನ್ನು ದೇ. ಜವರೇಗೌಡರವರು ಸಂಪಾದಿಸಿರುವ **'ಜನಪದ ಗೀತಾಂಜಲಿ'** ಎಂಬ ಜಾನಪದ ಗೀತೆಗಳ ಸಂಕಲನದಿಂದ ಆರಿಸಲಾಗಿದೆ.

©KTBS Not to be republished

## ಅಭ್ಯಾಸ

### I. ಪದಗಳ ಅರ್ಥ :

**ಇಂಗೋಗ್ಲಿ** – ಕಡಿಮೆಯಾಗಲಿ; ಬತ್ತಿಹೋಗಲಿ.

**ಜಪ** – ಮಂತ್ರ ಪಠಣ; ಪ್ರಾರ್ಥನೆ.

**ತೌರ್ಬಣ್ಣ** – ತವರಿನವರು ನೀಡಿದ ಸೀರೆ.

**ಮಾರುದ್ದ** – ಎರಡು ಕೈಗಳನ್ನು ಚಾಚಿದ ಅಳತೆ.

**ತವರು** – ಹುಟ್ಟಿದ ಮನೆ

**ತಿಟ್ಟು** – ದಿಬ್ಬ

**ಪಕ್ಕಿ** – ಹಕ್ಕಿ; ಪಕ್ಷಿ.

**ಮೊಳ** – ಮೊಣಕೈಯಿಂದ ಹಸ್ತದ ತುದಿಯಷ್ಟು ದೂರ; ಎರಡು ಗೇಣು.

### II. ಪ್ರಶ್ನೆಗಳು :

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಬಡವನ ಮನೆಗೆ ಸಿರಿವಂತಿಕೆ ಯಾವಾಗ ಬರುತ್ತದೆ?

೨. ಚಿಕ್ಕ್ಯಾಗ ಚೆಲುವ ಯಾರು?

೩. ತಾಯಿ ಇಲ್ಲದ ತವರಿಗೆ ಹೋಗುವುದನ್ನು ಜನಪದರು ಯಾವುದಕ್ಕೆ ಹೋಲಿಸಿದ್ದಾರೆ?

೪. ಮಕ್ಕಳಾಟ ಸನ್ಯಾಸಿಯ ಜಪವನ್ನು ಏಕೆ ಮರೆಸುತ್ತದೆ?

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಜನಪದರು ಭೂಮಿ ತಾಯಿಯನ್ನು ಏನೆಂದು ಬೇಡಿಕೊಳ್ಳುತ್ತಾರೆ?

೨. ಜನಪದರು ಪ್ರಕೃತಿಯನ್ನು ಹೇಗೆ ವರ್ಣಿಸಿದ್ದಾರೆ?

೩. ತಾಯಿಲ್ಲದ ತವರನ್ನು ಜನಪದರು ಹೇಗೆ ವರ್ಣಿಸಿದ್ದಾರೆ?

೪. ಹೆಣ್ಣು ಮಗಳು ಗಂಡನ ಮನೆಗೆ ಹೇಗೆ ಹೊರಡುತ್ತಾಳೆ?

೫. ಮಕ್ಕಳಾಟದ ಮಹಿಮೆಯನ್ನು ಜನಪದರು ವರ್ಣಿಸಿರುವ ರೀತಿಯನ್ನು ತಿಳಿಸಿ.

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. 'ಹೊನ್ನೆಯ ಮರದ ನೆರಳು' ಜನಪದ ಗೀತೆಯಲ್ಲಿ ತವರು ಹಾಗೂ ಮಕ್ಕಳ ಬಗೆಗೆ ಜನಪದರ ಭಾವನೆಗಳು ಯಾವ ರೀತಿ ವ್ಯಕ್ತವಾಗಿವೆ?

©KTBS Not to be republished

**ಈ) ಸಂದರ್ಭದೊಡನೆ ವಿವರಿಸಿರಿ.**

೧. ಬಡವನ ಮನೆಗೆ ಸಿರಿ ಬರಲಿ

೨. ತಾಯಿಲ್ದ ತವರೀಗಿ ಹೋಗದಿರು

೩. ತಿಟ್ಟತ್ತಿ ತಿರುಗಿ ನೋಡ್ಯಾಳ

೪. ಸನ್ನೇಸಿ ಜಪವ ಮರೆತಾನು

# III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಬಡವ, ದುಃಖ, ಚೆಲುವ, ನೆಲ, ನೆರಳು.

**ಆ) 'ತನ' ಹಾಗೂ 'ವಂತ' ಪ್ರತ್ಯಯಗಳನ್ನು ಬಳಸಿ ಮಾದರಿಯಂತೆ ತಲಾ ಐದು ಪದಗಳನ್ನು ಬರೆಯಿರಿ.**

**ಮಾದರಿ :** ಸಿರಿ + ತನ = ಸಿರಿತನ

ಸಿರಿ + ವಂತ = ಸಿರಿವಂತ

**ಇ) ಆಡುನುಡಿ ಮತ್ತು ಗ್ರಾಂಥಿಕ ರೂಪ ಇವುಗಳ ನಡುವಿನ ವ್ಯತ್ಯಾಸ ತಿಳಿಯಿರಿ.**

ಮಾತನಾಡುವ ಭಾಷೆಯನ್ನು 'ಆಡುನುಡಿ' ಎಂದು ಕರೆಯುತ್ತಾರೆ. ಇದಕ್ಕೆ 'ವ್ಯಾವಹಾರಿಕ ಭಾಷೆ' ಎಂಬ ಮತ್ತೊಂದು ಹೆಸರೂ ಇದೆ. ಆಡುನುಡಿಯ ಶಬ್ದಗಳು ಬರೆವಣಿಗೆಯಲ್ಲಿ ಬಂದಾಗ ಅವು ಹೊಂದುವ ರೂಪವೇ 'ಗ್ರಾಂಥಿಕ ರೂಪ'. ಜನಪದ ಸಾಹಿತ್ಯದಲ್ಲಿ ಆಡುನುಡಿಯ ಶಬ್ದಗಳ ಬಳಕೆ ಹೆಚ್ಚಿರುವುದನ್ನು ಗಮನಿಸಬಹುದು.

ಆಡುನುಡಿಯ ಶಬ್ದಗಳು ಪ್ರದೇಶದಿಂದ ಪ್ರದೇಶಕ್ಕೆ ಬದಲಾಗುತ್ತವೆ. ಇವುಗಳ ಅರ್ಥದಲ್ಲಿ ಏಕರೂಪತೆಯನ್ನು ತರುವ ಪ್ರಯತ್ನವನ್ನು ಗ್ರಾಂಥಿಕ ರೂಪಗಳಲ್ಲಿ ಕಾಣಬಹುದು.

**ಉದಾಹರಣೆಗಳು:**

| **ಆಡುನುಡಿ** | – | **ಗ್ರಾಂಥಿಕ ರೂಪ** | **ಆಡುನುಡಿ** | – | **ಗ್ರಾಂಥಿಕ ರೂಪ** |
|---|---|---|---|---|---|
| ಮ್ಯಾಲೆ | – | ಮೇಲೆ | ತುಂಬ್ಯೆತಿ | – | ತುಂಬಿದೆ |
| ನೀರಿಲ್ದ | – | ನೀರಿಲ್ಲದ | ತಲೇಲಿ | – | ತಲೆಯಲ್ಲಿ |
| ಕಂದವ್ನ | – | ಕಂದವ್ವನ | ಪಕ್ಕ್ಯಾಗ | – | ಪಕ್ಕೆಯಲ್ಲಿ, ಪಕ್ಕೆಗಳಲ್ಲಿ |
| ತಾಯಿಲ್ದ | – | ತಾಯಿಯಿಲ್ಲದ | ಐತಿ (ಐತೆ) | – | ಇದೆ |
| ತಿಟ್ಟತ್ತಿ | – | ತಿಟ್ಟು ಹತ್ತಿ | ಸನ್ನೇಸಿ | – | ಸನ್ಯಾಸಿ |

©KTBS Not to be republished

| | | | | | |
|---|---|---|---|---|---|
| ಚಿಕ್ಕ್ಯಾಗ | – | ಚಿಕ್ಕಿಯಲ್ಲಿ, ಚಿಕ್ಕಿಗಳಲ್ಲಿ | ಬಿಡುತೀನಿ | – | ಬಿಡುತ್ತೇನೆ |
| ಗೂಡಿನ್ಯಾಗ | – | ಗೂಡಿನಲ್ಲಿ | ಮ್ಯಾಲಿನ | – | ಮೇಲಿನ |
| ಬ್ಯಾಡ | – | ಬೇಡ | ತಕ್ಕೊಂಡು | – | ತೆಗೆದುಕೊಂಡು |
| ಏಸೊಂದು | – | ಎಷ್ಟೊಂದು | ಆಯ್ತು | – | ಆಯಿತು |
| ಬರ್ತಾನೆ | – | ಬರುತ್ತಾನೆ | ಆಡ್ತಾ | – | ಆಡುತ್ತಾ |
| ಕೂತ್ಕೊ | – | ಕುಳಿತುಕೊ | ಕುಂದ್ರು | – | ಕುಳಿತುಕೊ |
| ನೋಡ್ಕೊಂಡು | – | ನೋಡಿಕೊಂಡು | ಕೂಡು | – | ಕುಳಿತುಕೊ |

## IV. ಚಟುವಟಿಕೆಗಳು :

೧. ಈ ಪದ್ಯದ ೧ ನೇ ಮತ್ತು ೪ ನೇ ಪದ್ಯಗಳನ್ನು ಕಂಠಪಾಠ ಮಾಡಿರಿ.

೨. ನಿಮ್ಮ ಗ್ರಾಮದಲ್ಲಿನ ಆರತಿ ಹಾಡು, ರಾಗಿ ಬೀಸುವ ಹಾಡು, ಜನಪದ ಕಥೆಗಳನ್ನು ಸಂಗ್ರಹಿಸಿರಿ.

೩. ರಾಮನಗರದ ಬಳಿ ಇರುವ ಜಾನಪದ ಲೋಕಕ್ಕೆ ಭೇಟಿ ನೀಡಿರಿ.

©KTBS Not to be republished

# ೭. ವಚನಗಳು


– ಜೇಡರ ದಾಸಿಮಯ್ಯ

**ಪಾಠ ಪ್ರವೇಶ :** ಕನ್ನಡದ ವಿಶಿಷ್ಟ ಸಾಹಿತ್ಯ ಪ್ರಕಾರವಾದ ವಚನ ಸಾಹಿತ್ಯವು ಜನಸಾಮಾನ್ಯರ ಬದುಕನ್ನು ಹಸನುಗೊಳಿಸುವ ಆಶಯವುಳ್ಳದ್ದಾಗಿದೆ. ಜೇಡರ ದಾಸಿಮಯ್ಯ, ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು ಮೊದಲಾದ ನೂರಾರು ಶಿವಶರಣ – ಶರಣೆಯರು ವಚನ ಸಾಹಿತ್ಯವನ್ನು ಸಮೃದ್ಧವಾಗಿ ಬೆಳೆಸಿದ್ದಾರೆ. ಭಾಷೆ, ಶೈಲಿ ಮತ್ತು ವಸ್ತುವಿನ ದೃಷ್ಟಿಯಿಂದ ಕ್ರಾಂತಿಯನ್ನುಂಟು ಮಾಡಿದ ಸಾಹಿತ್ಯ ಇದಾಗಿದೆ.

ಪ್ರಸ್ತುತ ವಚನಗಳಲ್ಲಿ ಶರಣರ ಮಾತಿನ ಮಹತ್ತ್ವ, ದೈವದ ಅದ್ಭುತ ಶಕ್ತಿ ಮತ್ತು ಡಾಂಭಿಕ ಭಕ್ತರ ಬಗ್ಗೆ ವಹಿಸಬೇಕಾದ ಎಚ್ಚರಗಳನ್ನು ಮನಮುಟ್ಟುವಂತೆ ಚಿತ್ರಿಸಲಾಗಿದೆ. ಚಿಕ್ಕ ಚಿಕ್ಕ ನುಡಿಗಳಲ್ಲಿ ಹಿರಿದಾದ ಅನುಭವಗಳನ್ನು ಹಿಡಿದಿಟ್ಟಿರುವ ಕಲೆಗಾರಿಕೆಯನ್ನು ವಚನಗಳಲ್ಲಿ ಕಾಣಬಹುದು.

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ,
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ.
ನಿಮ್ಮ ಶರಣರ ಸೂಳ್ನುಡಿಯ ಒಂದರಘಳಿಗೆಯಿತ್ತಡೆ
ನಿನ್ನನಿತ್ತೆ ಕಾಣಾ! ರಾಮನಾಥ. ॥ ೧ ॥

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ?
ಕಡೆಗೀಲು ಬಂಡಿಗಾಧಾರ.
ಈ ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡಭಕ್ತರ ನುಡಿಗಡಣವೆ ಕಡೆಗೀಲು ಕಾಣಾ! ರಾಮನಾಥ. ॥ ೨ ॥



©KTBS Not to be republished

ಮರನೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ,
ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ
ನೀ ಬೆರೆಸುವ ಭೇದಕ್ಕೆ ಬೆರಗಾದೆನಯ್ಯ! ರಾಮನಾಥ. ॥ ೩ ॥

ಬರುಸತಗನ ಭಕ್ತಿ ದಿಟವೆಂದು ನಚ್ಚಲು ಬೇಡ.
ಮಠದೊಳಗಣ ಬೆಕ್ಕು ಇಲಿಯ ಕಂಡು
ಪುಟನೆಗೆದಂತಾಯಿತ್ತು ಕಾಣಾ! ರಾಮನಾಥ. ॥ ೪ ॥

* * * *

**ಕೃತಿಕಾರರ ಪರಿಚಯ :**



**ಜೇಡರ ದಾಸಿಮಯ್ಯ** ಆದ್ಯ ವಚನಕಾರರು. ಇವರು ಕ್ರಿ.ಶ. ೧೦೪೦ ರಲ್ಲಿ ಯಾದಗಿರಿ ಸಮೀಪದ ಮುದೇನೂರು ಎಂಬಲ್ಲಿ ಜನಿಸಿದರು. ಇವರು ನೇಕಾರ ವೃತ್ತಿಯನ್ನು ಮಾಡುತ್ತಿದ್ದರು. ಇವರ ಹೆಂಡತಿಯ ಹೆಸರು ದುಗ್ಗಳೆ. ವಚನ ಸಾಹಿತ್ಯಕ್ಕೆ ಉತ್ತಮ ಆರಂಭವನ್ನು ದಾಸಿಮಯ್ಯನವರು ದೊರಕಿಸಿಕೊಟ್ಟರು. ಸರಳ ಶೈಲಿಯ ಆಡುಮಾತು, ಮೊನಚಾದ ವಿಡಂಬನೆ ಮತ್ತು ಮೇಲ್ಮಟ್ಟದ ಚಿಂತನೆ ದಾಸಿಮಯ್ಯನವರ ವಚನಗಳ ವೈಶಿಷ್ಟ್ಯ. ಇವರು 'ರಾಮನಾಥ' ಎಂಬ ಅಂಕಿತದಲ್ಲಿ ಹಲವಾರು ವಚನಗಳನ್ನು ರಚಿಸಿ, ವಚನ ಸಾಹಿತ್ಯದ ಹಿರಿಮೆಯನ್ನು ಹೆಚ್ಚಿಸಿದ್ದಾರೆ.

ಪ್ರಸ್ತುತ ವಚನಗಳನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು ಇವರು ಪ್ರಕಟಿಸಿರುವ 'ಸಂಕೀರ್ಣ ವಚನ ಸಂಪುಟ–೨' ಎಂಬ ಕೃತಿಯಿಂದ ಆರಿಸಿದೆ.

## ಅಭ್ಯಾಸ

### I. ಪದಗಳ ಅರ್ಥ :

**ಅಗ್ನಿ** – ಬೆಂಕಿ
**ಒಡಲು** – ಶರೀರ; ದೇಹ; ಕಾಯ.
**ಕಂಪು** – ಸುವಾಸನೆ
**ಕರಿ** – ಆನೆ
**ದರ್ಪ** – ಅಹಂಕಾರ; ಹಮ್ಮು.
**ಬೆರಗು** – ಆಶ್ಚರ್ಯ
**ಅರಘಳಿಗೆ** – ಸ್ವಲ್ಪ ಹೊತ್ತು
**ಒಲ್ಲೆ** – ಬೇಡ
**ಕಡೆಗೀಲು** – ಕಡಾಣಿ; ಕಠಾಣಿ.
**ಗಡಣ** – ಸಮೂಹ; ಗುಂಪು.
**ನಚ್ಚು** – ನಂಬು
**ಬೆರಸು** – ಒಂದು ಗೂಡಿಸು

©KTBS Not to be republished

**ಮಂದಾಗ್ನಿ** – ಹೆಚ್ಚು ಉರಿಯಿಲ್ಲದ ಬೆಂಕಿ.
**ಮಾಬುದೇ** – ಬಿಡುವುದೇ
**ಮೃಡ** – ಶಿವ
ಸಿರಿ – ಐಶ್ವರ್ಯ; ಸಂಪತ್ತು.
**ಸೂಳ್ನುಡಿ** – ಒಳ್ಳೆಯ ಮಾತು; ತಿರುಳುಳ್ಳ ನುಡಿ.
**ಹೊಡೆಗೆಡೆ** – ಮಗುಚಿ ಬೀಳು

## II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

೧. ಕರಿಯನಿತ್ತಡೆ ಒಲ್ಲೆ, ________ ಒಲ್ಲೆ.

೨. ಮೃಡಭಕ್ತರ ________ ಕಡೆಗೀಲು ಕಾಣಾ! ರಾಮನಾಥ.

೩. ನೀ ________ ಭೇದಕ್ಕೆ ಬೆರಗಾದೆನಯ್ಯ! ರಾಮನಾಥ.

೪. ಬರುಸರಗನ ಭಕ್ತಿ ________ ನಚ್ಚಲು ಬೇಡ.

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

೧. ಜೇಡರ ದಾಸಿಮಯ್ಯ ಅವರ ಅಂಕಿತನಾಮವೇನು?

೨. ಬಂಡಿಗೆ ಆಧಾರ ಯಾವುದು?

೩. ಒಡಲೆಂಬ ಬಂಡಿಗೆ ಯಾವುದು ಕಡೆಗೀಲು?

೪. ಯಾರ ಭಕ್ತಿಯನ್ನು ನಿಜವೆಂದು ನಂಬಬಾರದು?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಭಗವಂತನು ಮಾನವನ ಶರೀರದೊಳಗೆ ಆತ್ಮವನ್ನು ಯಾವ ರೀತಿ ಬೆರಸಿದ್ದಾನೆ?

೨. ಕಡುದರ್ಪವೇರಿದ ಒಡಲು ಎಂದರೇನು? ಅದನ್ನು ಯಾವುದಕ್ಕೆ ಹೋಲಿಸಲಾಗಿದೆ?

೩. ಜೇಡರ ದಾಸಿಮಯ್ಯನು ಭಗವಂತನ ಯಾವ ಭೇದಕ್ಕೆ ಬೆರಗಾಗಿದ್ದಾನೆ?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

೧. ಜೇಡರ ದಾಸಿಮಯ್ಯನವರು ಮೊದಲ ಎರಡು ವಚನಗಳಲ್ಲಿ ಶರಣರ ಸೂಳ್ನುಡಿಯ ಮಹತ್ವವನ್ನು ಯಾವರೀತಿ ವರ್ಣಿಸಿದ್ದಾರೆ?

೨. ಜೇಡರ ದಾಸಿಮಯ್ಯ ಡಾಂಭಿಕ ಭಕ್ತಿಯನ್ನು ಯಾವ ರೀತಿ ಖಂಡಿಸಿದ್ದಾರೆ?

೩. ೧೨ ನೇ ಶತಮಾನದ ವಚನ ಸಾಹಿತ್ಯದ ವೈಶಿಷ್ಟ್ಯತೆ ಏನು?

©KTBS Not to be republished

ಉ) **ಸಂದರ್ಭದೊಂದಿಗೆ ಈ ವಾಕ್ಯಗಳ ಅರ್ಥವನ್ನು ಸ್ಪಷ್ಟೀಕರಿಸಿರಿ.**

೧. ಮೃಡಭಕ್ತರ ನುಡಿಗಡಣವೆ ಕಡೆಗೀಲು ಕಾಣಾ ರಾಮನಾಥ.

೨. ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು.

೩. ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ.

## III. ಭಾಷಾಭ್ಯಾಸ :

ಅ) **ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

೧. ಕರಿ, ಕರ, ಆನೆ, ಗಜ.

೨. ದರ್ಪ, ಸೊಕ್ಕು, ಹಮ್ಮು, ವಿನಯ.

ಆ) **ಕೆಳಗೆ ನೀಡಿರುವ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ಹಿರಿದು, ಆಧಾರ, ಶಕ್ತ, ಭಕ್ತ.

ಇ) **ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿರಿ.**

ಒಲ್ಲೆ, ಆಧಾರ, ಇರಿಸು, ಬೆರಗಾಗು, ಸೂಳ್ನುಡಿ.

ಈ) **ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ:** ಹಿರಿದಪ್ಪ – ಹಿರಿದು + ಅಪ್ಪ

ಸಿರಿಯನಿತ್ತಡೆ, ಕಡೆಗೀಲು, ಮುಂದಾಗ್ನಿ.

ಉ) **ಕೆಳಗಿನ ಪದಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ.**

ಸಿರಿ, ಭಕ್ತ, ಅಗ್ನಿ.

## IV. ಚಟುವಟಿಕೆಗಳು :

೧. ೧ ನೇ ಮತ್ತು ೪ ನೇ ವಚನಗಳನ್ನು ಕಂಠಪಾಠ ಮಾಡಿರಿ.

೨. ಎಂ.ಆರ್.ಶ್ರೀ. ಅವರ 'ವಚನ ಧರ್ಮಸಾರ' ಕೃತಿಯನ್ನು ಓದಿರಿ.

೩. ವಚನಕಾರರ ಅಂಕಿತನಾಮಗಳನ್ನು ಸಂಗ್ರಹಿಸಿ ಓದಿರಿ ಹಾಗೂ ಅವರ ವಚನಗಳನ್ನು ಹಾಡಿರಿ.

©KTBS Not to be republished

# ೮. ಆಚಾರವಿಲ್ಲದ ನಾಲಗೆ

– ಪುರಂದರದಾಸರು

**ಪಾಠ ಪ್ರವೇಶ :** ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಹದಿನಾರನೆಯ ಶತಮಾನದ ದಾಸಸಾಹಿತ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ. ಶ್ರೀಪಾದರಾಜರಿಂದ ಪ್ರಾರಂಭವಾದ ದಾಸ ಸಾಹಿತ್ಯವನ್ನು ವ್ಯಾಸರಾಯರು, ವಾದಿರಾಜರು, ಪುರಂದರ – ಕನಕದಾಸಾದಿಗಳು ಮುಂದುವರಿಸಿದರು. ಹರಿದಾಸರ ಕೀರ್ತನೆಗಳೆಲ್ಲವೂ ವೈಯಕ್ತಿಕ ಹಾಗೂ ಸಾಮಾಜಿಕ ನೆಲೆಗಳಲ್ಲಿ ಪ್ರಕಟಗೊಂಡಿವೆ.

ಮನುಷ್ಯ ಆಡಂಬರ ಹಾಗೂ ಡಂಬಾಚಾರದ ಬದುಕನ್ನು ಬಿಡಬೇಕು. ದ್ವೇಷ–ಅಸೂಯೆ, ಕೋಪ–ತಾಪ ಹಾಗೂ ನೀಚ ಗುಣಗಳನ್ನು ಬಿಟ್ಟು, ಧರ್ಮ ಮಾರ್ಗದ ಕಡೆಗೆ ಮನುಷ್ಯ ನಡೆಯಬೇಕು. ನಮ್ಮ ನಡೆ–ನುಡಿ; ತನು–ಮನ; ಅಂತರಂಗ–ಬಹಿರಂಗಗಳು ಪರಿಶುದ್ಧವಾಗಿರಬೇಕು ಎಂಬ ವಿಚಾರಗಳನ್ನು ಕೀರ್ತನೆಗಳಲ್ಲಿ ಕಾಣಬಹುದು. ಪ್ರಸ್ತುತ ಕೀರ್ತನೆಯಲ್ಲಿ ಪುರಂದರದಾಸರು ಮಾನವನ ಗುಣಸ್ವಭಾವಗಳನ್ನು, ನಡವಳಿಕೆಗಳನ್ನು ನೇರನುಡಿಗಳ ಮೂಲಕ ತಿದ್ದುವ ಕೆಲಸ ಮಾಡಿದ್ದಾರೆ. 'ನಾಲಗೆ ಶುದ್ಧವಾದರೆ ನಾಡೆಲ್ಲಾ ನೆಂಟರು' ಎನ್ನುವಂತೆ ಬದುಕಬೇಕೆಂದು ಹೇಳಿದ್ದಾರೆ.

©KTBS Not to be republished

ಆಚಾರವಿಲ್ಲದ ನಾಲಗೆ – ನಿನ್ನ
ನೀಚಬುದ್ಧಿಯ ಬಿಡು ನಾಲಗೆ ॥ ಪ ॥

ನಾಚಿಕೆ ಲಜ್ಜೆಯ ನೀ ಮುನ್ನ ಅರಿಯದೆ
ಚಾಚಿಕೊಂಡಿರುವಂಥ ನಾಲಗೆ ॥ ಅ.ಪ. ॥


ಇದ್ದ ಮಾತನಾಡು ನಾಲಗೆ – ಹಿಡಿ –
ದೊಡ್ಡರೂ ಹುಸಿಬೇಡ ನಾಲಗೆ
ಇದ್ದುಕೊಂಡು ಉಣ್ಣು ಅಮೃತಾನ್ನಗಳನು
ಬುದ್ಧಿಯಲಿರು ಕಂಡ್ಯ ನಾಲಗೆ ॥ ೧ ॥

ಬಡವರ ಮಾತಿಗೆ ನಾಲಗೆ – ನೀ
ಕಡುಚತುರ ನುಡಿಯದಿರು ನಾಲಗೆ
ಹಿಡಿದು ಕೊಂಡೊಯ್ವರು ಯಮನ ಭಟರು ನಿನ್ನ
ನುಡಿ ಕಂಡ್ಯ ಹರಿಯೆಂದು ನಾಲಗೆ ॥ ೨ ॥

ಹರಿಪಾದವೆ ಗತಿಯೆನ್ನು ನಾಲಗೆ – ನಿನಗೆ
ಪರರ ಚಿಂತೆಯೇಕೆ ನಾಲಗೆ
ಸಿರಿವರ ಪುರಂದರವಿಠಲರಾಯನನು
ಮರೆಯದೆ ನೆನೆ ಕಂಡೆಯ ನಾಲಗೆ ॥ ೩ ॥

* * * *

## ಕೃತಿಕಾರರ ಪರಿಚಯ :



**ಪುರಂದರದಾಸರ** ಮೊದಲಿನ ಹೆಸರು ಶ್ರೀನಿವಾಸನಾಯಕ. ಇವರು ಕ್ರಿ.ಶ. ೧೪೮೪ ರಿಂದ ೧೫೬೪ ರ ನಡುವಿನ ಕಾಲಾವಧಿಯಲ್ಲಿ ಬದುಕಿದ್ದರು. ಇವರ ಸ್ಥಳ ಪುರಂದರಗಡ. ತಂದೆ ವರದಪ್ಪನಾಯಕ, ತಾಯಿ ಲಕ್ಷ್ಮೀದೇವಿ. ಇವರ ಹೆಂಡತಿಯ ಹೆಸರು ಸರಸ್ವತಿ ಬಾಯಿ. ಇವರಿಗೆ ಲಕ್ಷ್ಮಣದಾಸ, ಹೇಬಣದಾಸ, ಮಧ್ವಪತಿದಾಸ ಎಂಬ ಮೂವರು ಗಂಡು ಮಕ್ಕಳಿದ್ದರು. ಶ್ರೀಮಂತರಾದ ಇವರು ಜೀವನದಲ್ಲಿ ವೈರಾಗ್ಯಹೊಂದಿ ಹರಿದಾಸರಾದರು.

ಪುರಂದರದಾಸರು 'ಪುರಂದರವಿಠಲ' ಅಂಕಿತದಿಂದ ಸಾವಿರಾರು ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿದ್ದಾರೆ. ಇವರಿಗೆ **'ಕರ್ನಾಟಕ ಸಂಗೀತ ಪಿತಾಮಹ'** ಎಂಬ ಬಿರುದು ಇದೆ. ಇವರ ಗುರು ವ್ಯಾಸರಾಯರು. 'ದಾಸರೆಂದರೆ ಪುರಂದರದಾಸರಯ್ಯಾ' ಎಂದು ಇವರನ್ನು ಹೊಗಳಿದ್ದಾರೆ. ಪ್ರಸ್ತುತ ಕೀರ್ತನೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಪ್ರಕಟಿಸಿರುವ ಡಾ. ಟಿ.ಎನ್.ನಾಗರತ್ನ ಅವರ **'ದಾಸ ಸಾಹಿತ್ಯ ಸೌರಭ'** ಕೃತಿಯಿಂದ ಆರಿಸಿದೆ.

## ಟಿಪ್ಪಣಿಗಳು :

**೧. ಕೀರ್ತನೆ :** ಹರಿ ಮಹಿಮೆಯನ್ನು ಕೀರ್ತಿಸುವುದೇ ಕೀರ್ತನೆಗಳು. ಕೀರ್ತನೆಗಳು ಪಲ್ಲವಿ, ಅನುಪಲ್ಲವಿ ಹಾಗೂ ಚರಣಗಳಿಂದ ಕೂಡಿ ರಾಗಯುಕ್ತವಾಗಿ, ತಾಳಬದ್ಧವಾಗಿರುತ್ತವೆ. ಸುಳಾದಿಗಳಿಗಿಂತ ಸರಳವಾಗಿಯೂ, ಉಗಾಭೋಗಗಳಿಗಿಂತ ಬಿಗಿಯಾಗಿಯೂ ಇರುತ್ತವೆ. ಕೊನೆಯ ಚರಣದಲ್ಲಿ ಕೀರ್ತನೆ ರಚಿಸಿದ ಹರಿದಾಸರ ಇಷ್ಟದೈವದ ಅಂಕಿತವಿರುತ್ತದೆ.

**೨. ಸುಳಾದಿ :** ಸುಳಾದಿ ಹರಿದಾಸ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ತಾಳ ಪ್ರಧಾನವಾದ ಗೇಯ ರಚನೆ. ಉಗಾಭೋಗಗಳಿಗಿಂತ ಬಿಗಿಯಾದ ಬಂಧವೇ ಸುಳಾದಿ. ಸಂಗೀತದ ಹಿನ್ನೆಲೆ, ತಾಳಗಳ ಪಟ್ಟು, ಸಾಹಿತ್ಯದ ಚೌಕಟ್ಟಿನಲ್ಲಿ ತತ್ತ್ವಗಳ ನಿರೂಪಣೆಯೇ ಸುಳಾದಿಯ ಲಕ್ಷಣವಾಗಿದೆ. ಧ್ರುವ, ಮಠ್ಯ, ತ್ರಿಪುಟ, ಝಂಪೆ, ರೂಪಕ, ಅಟ್ಟ ಹಾಗೂ ಏಕತಾಳ ಇವೇ ಸುಳಾದಿಯ ತಾಳಗಳು.

©KTBS Not to be republished

೩. **ಉಗಾಭೋಗ :** ಇದು ಹರಿದಾಸ ಸಾಹಿತ್ಯದ ಇನ್ನೊಂದು ವಿಶಿಷ್ಟ ಗೇಯ ಪ್ರಕಾರ. ಉಗಾಭೋಗವೆಂಬ ಮಾತು ಕ್ರಿ.ಶ.ಸುಮಾರು ೧೩ ನೆಯ ಶತಮಾನದಲ್ಲಿದ್ದ ಶಾರ್ಙ್ಗದೇವನ ಕಾಲದಿಂದ ಬಳಕೆಯಲ್ಲಿ ಬಂದಂತೆ ಕಾಣುತ್ತದೆ. ನಂತರ ಹರಿದಾಸರಲ್ಲಿ ಇದು ಹೆಚ್ಚಾಗಿ ಬಳಕೆಯಾಗಿದೆ. ಇದು ರಾಗ ಪ್ರಧಾನ ರಚನೆ, ತಾಳದ ಪಟ್ಟಿಲ್ಲ. ಸಾಮಾನ್ಯವಾಗಿ ದ್ವಿತೀಯ ಪ್ರಾಸವಿರುತ್ತದೆ. ಅಂತ್ಯ ಪ್ರಾಸವಿರುವುದೂ ಉಂಟು. ಕೊನೆಯಲ್ಲಿ ಆಯಾ ದಾಸರ ಅಂಕಿತ ಬರುತ್ತದೆ.

## ಅಭ್ಯಾಸ

### I. ಪದಗಳ ಅರ್ಥ :

**ಅಮೃತ** – ಸುಧೆ; ಹಾಲು.
**ಆಚಾರ** – ಆಚರಣೆ; ಸಂಪ್ರದಾಯ; ಕಟ್ಟುಪಾಡು.
**ಕಡುಚತುರ** – ಅತೀ ಬುದ್ಧಿವಂತಿಕೆ ಉಳ್ಳವನು.
**ಗತಿ** – ಆಧಾರ; ಚಲನಶೀಲ ಸ್ಥಿತಿ.
**ನೀಚ** – ಕೆಟ್ಟ; ಕೀಳಾದ.
**ಲಜ್ಜೆ** – ನಾಚಿಕೆ; ಸಿಗ್ಗು.
**ಸಿರಿವರ** – ಸಮೃದ್ಧಿ ಹೊಂದಿದ; ಸಂಪದ್ಭರಿತ.
**ಹುಸಿ** – ಸುಳ್ಳು

### II. ಪ್ರಶ್ನೆಗಳು :

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

೧. ಪುರಂದರದಾಸರ ಪೂರ್ವದ ಹೆಸರು ____________
೨. ಪುರಂದರದಾಸರ ಗುರುಗಳ ಹೆಸರು ____________
೩. ದಾಸ ಸಾಹಿತ್ಯವು ____________ ಅವರಿಂದ ಆರಂಭಗೊಂಡಿತು.
೪. ಪುರಂದರ ದಾಸರ ಇಷ್ಟದೈವ ____________

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

೧. ಪುರಂದರದಾಸರ ಅಂಕಿತನಾಮವೇನು?
೨. ಪುರಂದರದಾಸರಿಗೆ ಯಾವ ಬಿರುದು ಇದೆ?
೩. ಆಚಾರವಿಲ್ಲದ ನಾಲಗೆ ಮಾನವನ ಯಾವ ವರ್ತನೆಗಳನ್ನು ಸೂಚಿಸುತ್ತದೆ?
೪. ಪುರಂದರದಾಸರು ನಮ್ಮ ನಡೆನುಡಿಗಳಲ್ಲಿ ಯಾರ ಸ್ಮರಣೆ ಇರಬೇಕೆಂದು ಹೇಳುತ್ತಾರೆ?
೫. ಪುರಂದರದಾಸರು ಬಡವರ ಪಾಲಿಗೆ ನಮ್ಮ ನುಡಿ ಹೇಗಿರಬೇಕೆಂದು ಹೇಳುತ್ತಾರೆ?

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ನಾಲಗೆಯು ಬುದ್ಧಿಯ ಹಿಡಿತದಲ್ಲಿರಬೇಕು ಎಂಬುದನ್ನು ಪುರಂದರದಾಸರು ಯಾವ ರೀತಿ ಹೇಳಿದ್ದಾರೆ?
೨. ಪುರಂದರದಾಸರು ಹುಸಿ ನುಡಿಯಬಾರದು ಎಂಬುದನ್ನು ಯಾವ ರೀತಿ ಹೇಳಿದ್ದಾರೆ?

©KTBS Not to be republished

೩. ಪುರಂದರದಾಸರು ಮಾತಿನಲ್ಲಿ ಹರಿಯನ್ನು ಹೇಗೆ ಕಾಣಬೇಕೆಂದು ಬಯಸಿದ್ದಾರೆ?

೪. ಪುರಂದರದಾಸರು ಪರರ ಚಿಂತೆಯನ್ನು ಬಿಡು ಎಂದು ಏಕೆ ಹೇಳಿದ್ದಾರೆ?

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

೧. ಪುರಂದರದಾಸರು ಮಾನವನ ನಡೆನುಡಿಯ ಮಹತ್ವವನ್ನು ಹೇಗೆ ವರ್ಣಿಸಿದ್ದಾರೆ?

೨. ನಾಲಗೆ ಬುದ್ಧಿಯ ಹಿಡಿತದಲ್ಲಿರುವುದರಿಂದ ಆಗುವ ಪ್ರಯೋಜನಗಳೇನು?

**ಉ) ಸಂದರ್ಭದೊಡನೆ ವಿವರಿಸಿರಿ.**

೧. ಪರರ ಚಿಂತೆಯ ಬಿಡು ನಾಲಗೆ

೨. ಬುದ್ಧಿಯಲಿರು ಕಂಡ್ಯ ನಾಲಗೆ

೩. ಕಡುಚತುರ ನುಡಿಯದಿರು ನಾಲಗೆ

## III. ಭಾಷಾಭ್ಯಾಸ :

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

ಆಚಾರ, ನೀಚಗುಣ, ಕಡುಚತುರ, ಪರರಚಿಂತೆ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ಆಚಾರ, ನೀಚಗುಣ, ಲಜ್ಜೆ, ಬೇಡ.

**ಇ) ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪ ಬರೆಯಿರಿ.**

ಅಮೃತ, ಯಮ, ಸಿರಿ, ಚತುರ.

**ಈ) ಕೆಳಗಿನ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ಬರೆಯಿರಿ.**

ಆಚಾರವಿಲ್ಲದ, ಮಾತನಾಡು, ನುಡಿಯದೆ, ಹರಿಯೆಂದು.

**ಉ) ಕೆಳಗಿನ ವಾಕ್ಯಗಳಲ್ಲಿ ಗೆರೆ ಎಳೆದಿರುವ ಪದಗಳ ವಿಭಕ್ತಿ ಪ್ರತ್ಯಯಗಳ ಹೆಸರನ್ನು ಬರೆಯಿರಿ.**

೧. ಪುರಂದರದಾಸರು **ಹರಿಯನ್ನು** ಪ್ರಾರ್ಥಿಸಿದರು.

೨. **ಹಣ್ಣಿಗೆ** ಒಂದು ಆಕಾರವಿರುತ್ತದೆ.

೩. **ಶಿಕ್ಷಣದಿಂದ** ಜ್ಞಾನ ವೃದ್ಧಿಸುತ್ತದೆ.

೪. ಉಳುವವನೇ **ಭೂಮಿಯ** ಒಡೆಯ.

## IV. ಚಟುವಟಿಕೆಗಳು :

೧. ಪ್ರಸ್ತುತ ಕೀರ್ತನೆಯ ೧ ನೇ ಮತ್ತು ೨ ನೇ ಪದ್ಯಗಳನ್ನು ಕಂಠಪಾಠ ಮಾಡಿರಿ.

೨. ಗ್ರಂಥಾಲಯಕ್ಕೆ ಭೇಟಿ ನೀಡಿ ದಾಸ ಸಾಹಿತ್ಯದ ಬಗ್ಗೆ ಹೆಚ್ಚಿನ ಜ್ಞಾನ ಪಡೆಯಿರಿ.

೩. ಮಾತಿನ ಮಹತ್ವವನ್ನು ತಿಳಿಸುವ ಗಾದೆ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

©KTBS Not to be republished

**ರಚನೆ :**

## ಗಾದೆ ವಿಸ್ತರಣೆ

ಜನಪದ ಸಾಹಿತ್ಯದ ಪ್ರಮುಖ ಭಾಗವಾಗಿರುವ ಗಾದೆಗಳು ಜನಸಾಮಾನ್ಯರ ಅನುಭವದ ಗಣಿಯಾಗಿದ್ದು 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ಹಿರಿಮೆಗೆ ಪಾತ್ರವಾಗಿವೆ. ಆಕಾರದಲ್ಲಿ ವಾಮನನಂತಿದ್ದರೂ ಅರ್ಥದಲ್ಲಿ ತ್ರಿವಿಕ್ರಮನಂತಿವೆ. ಕನ್ನಡದಲ್ಲಿ 'ಗಾದೆ' ಪದಕ್ಕೆ ಸಂವಾದಿಯಾಗಿ 'ನಾಣ್ಣುಡಿ' 'ಸೂಕ್ತಿ' 'ಲೋಕೋಕ್ತಿ' ಎಂಬ ಪದಗಳೂ ಪ್ರಚಲಿತದಲ್ಲಿವೆ. ಸಂಭಾಷಣೆ ಮತ್ತು ಬರವಣಿಗೆಯ ಸಂದರ್ಭದಲ್ಲಿ ಸಮಯೋಚಿತವಾಗಿ ಗಾದೆಗಳನ್ನು ಬಳಸುವುದರಿಂದ ಸಾಹಿತ್ಯ ಸೌಂದರ್ಯ ಹೆಚ್ಚುವುದಲ್ಲದೆ, ಹೇಳಬೇಕೆಂದಿರುವ ವಿಷಯವನ್ನು ಮನಮುಟ್ಟುವಂತೆ ರಸವತ್ತಾಗಿ ಹೇಳಲು ಸಾಧ್ಯವಾಗುತ್ತದೆ. ಗಾದೆಗಳ ಸಂಗ್ರಹಣೆ ಒಂದು ಉತ್ತಮ ಹವ್ಯಾಸವಾಗಿದೆ. ಗಾದೆಗಳ ಅಂತರಾರ್ಥವನ್ನು ಬಿಡಿಸಿ, ವಿವರಿಸಿ ಹೇಳುವುದನ್ನು 'ಗಾದೆ ವಿಸ್ತರಣೆ' ಎನ್ನಲಾಗುತ್ತದೆ. ನೀವು ಗಾದೆ ವಿಸ್ತರಿಸುವುದನ್ನು ಕಲಿಯಬೇಕು. ಇದಕ್ಕಾಗಿ ಇಲ್ಲಿ ಎರಡು ನಿದರ್ಶನಗಳನ್ನು ಕೊಡಲಾಗಿದೆ.

### 'ಕೈ ಕೆಸರಾದರೆ ಬಾಯಿ ಮೊಸರು'

ಇದೊಂದು ಅರ್ಥಪೂರ್ಣವಾದ ಎಲ್ಲರಿಗೂ ಅನ್ವಯಿಸುವ ಗಾದೆ ಮಾತು. 'ಕಷ್ಟಪಟ್ಟರೆ ಫಲವುಂಟು', 'ಆಳಾಗಿ ದುಡಿ, ಅರಸಾಗಿ ಉಣ್ಣು' ಎಂಬುವ ಅರ್ಥದ ದೃಷ್ಟಿಯಿಂದ ಈ ಗಾದೆಗೆ ಪರ್ಯಾಯ ಗಾದೆಗಳಾಗಿವೆ. ಬದುಕು ಸಾರ್ಥಕವಾಗುವುದು ದುಡಿಮೆಯಿಂದ. ದುಡಿಮೆಯಲ್ಲಿ ಮೇಲು-ಕೀಳು ಎಂಬುದಿಲ್ಲ. ಶ್ರದ್ಧೆಯಿಂದ, ಪರಿಶ್ರಮದಿಂದ ದುಡಿಮೆ ಮಾಡಿದಾಗ ಅದು ನಮಗೆ ಉತ್ತಮ ಫಲವನ್ನು ಕೊಡುತ್ತದೆ. ನಮ್ಮನ್ನು ಸ್ವಾವಲಂಬಿಗಳನ್ನಾಗಿ ಮಾಡುತ್ತದೆ. ಬದುಕಿನ ಕಷ್ಟ-ನಷ್ಟಗಳನ್ನು ನಮ್ಮ ಅರಿವಿಗೆ ತಂದು, ನಮ್ಮನ್ನು ದೈಹಿಕವಾಗಿಯೂ, ಮಾನಸಿಕವಾಗಿಯೂ ಸದೃಢರನ್ನಾಗಿ ಮಾಡುತ್ತದೆ. ಈ ಗಾದೆಯು ವ್ಯಕ್ತಿ ಮತ್ತು ದೇಶದ ಅಭಿವೃದ್ಧಿಯ ಕೀಲಿಕೈಯಾಗಿದೆ. ಶ್ರಮಪಟ್ಟು ದುಡಿಯೋಣ, ಖುಷಿಯಾಗಿ ಬಾಳೋಣ.

### 'ಅತಿಯಾಸೆ ಗತಿಗೇಡು'

ಇದೊಂದು ಜನಪ್ರಿಯವಾದ ಅರ್ಥಪೂರ್ಣವಾಗಿರುವ ಗಾದೆಯಾಗಿದೆ. ಮನುಷ್ಯನಿಗೆ ಆಸೆ ಇರಬೇಕು. ಆಸೆ ಇಲ್ಲದಿದ್ದರೆ ಸಂತೋಷವೂ ಇಲ್ಲ, ಸಾಧನೆಯೂ ಇಲ್ಲ. ಆದರೆ ಆಸೆ ನಮ್ಮ ಸಾಮರ್ಥ್ಯದ ಮಿತಿಯೊಳಗಿರಬೇಕು. ಮಿತಿಮೀರಿದ ಆಸೆ ದುಃಖವನ್ನೂ, ನಷ್ಟವನ್ನೂ ಉಂಟುಮಾಡುತ್ತದೆ. ಬದುಕಿನಲ್ಲಿ ನಮ್ಮನ್ನು ನಿರಾಶಾವಾದಿಗಳನ್ನಾಗಿ ಮಾಡಿಬಿಡುತ್ತದೆ. ಅತಿ ಎಂಬುದು ಎಲ್ಲಿಯೂ ಒಳ್ಳೆಯದಲ್ಲ. ಸುಂದರ ಬದುಕಿಗೆ ನಾವು ಅಳವಡಿಸಿಕೊಳ್ಳಬೇಕಿರುವ ಸೂತ್ರ ಮಿತಿ ಎಂಬುದನ್ನು ಈ ಗಾದೆ ಸೂಚ್ಯವಾಗಿ ತಿಳಿಸುತ್ತದೆ. ಅತಿಯಾಸೆ ಪಟ್ಟು ನಷ್ಟಕ್ಕೀಡಾಗಿ ದುಃಖಿಗಳಾದ ಜನರನ್ನು ನಮ್ಮ ಸುತ್ತ ಮುತ್ತ ಕಾಣಬಹುದು. ಆದ್ದರಿಂದ ನಾವು ಅತಿಯಾಸೆಯನ್ನು ಬಿಟ್ಟು ಇದ್ದುದರಲ್ಲಿ, ದೊರಕಿದುದರಲ್ಲಿ ಸುಖ, ಸಂತೋಷ ಮತ್ತು ನೆಮ್ಮದಿಯನ್ನು ಕಾಣುವುದು ಉತ್ತಮ.

©KTBS Not to be republished

**ಈ ಕೆಳಕಂಡ ಗಾದೆಗಳನ್ನು ವಿಸ್ತರಿಸಿ ಬರೆಯಿರಿ.**

೧. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.

೨. ದೇಶ ಸೇವೆಯೇ ಈಶ ಸೇವೆ.

೩. ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ.

೪. ಆರೋಗ್ಯವೇ ಭಾಗ್ಯ.

೫. ತಾಳಿದವನು ಬಾಳಿಯಾನು.

* * * *

# ಪತ್ರಲೇಖನ

ಹತ್ತಿರದಲ್ಲಿ ಇರುವವರೊಡನೆ ಸಂಭಾಷಣೆಯ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳಬಹುದು. ಆದರೆ ದೂರದಲ್ಲಿ ಅಥವಾ ಪರಸ್ಥಳದಲ್ಲಿರುವವರ ಜೊತೆಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಪತ್ರಲೇಖನ ಪ್ರಾರಂಭವಾಯಿತು. ಇತ್ತೀಚೆಗೆ ದೂರವಾಣಿ, ಎಸ್.ಎಂ.ಎಸ್., ಇ–ಅಂಚೆ ಮುಂತಾದ ಆಧುನಿಕ ಸೌಲಭ್ಯಗಳಿದ್ದರೂ ಪತ್ರ ವ್ಯವಹಾರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಪತ್ರಗಳಲ್ಲಿ 'ಖಾಸಗಿ ಪತ್ರ' ಹಾಗೂ 'ವ್ಯಾವಹಾರಿಕ ಪತ್ರ' ಎಂಬುದಾಗಿ ಎರಡು ವಿಧಗಳಿವೆ. ಅವುಗಳ ರಚನಾ ಕ್ರಮವನ್ನು ನಿಮಗಿಲ್ಲಿ ಪರಿಚಯಿಸಲಾಗಿದೆ.

## ಖಾಸಗಿ ಪತ್ರ / ವೈಯಕ್ತಿಕ ಪತ್ರ

ವೈಯಕ್ತಿಕ ಪತ್ರಗಳನ್ನು ಬಂಧುಗಳಿಗೆ, ಸ್ನೇಹಿತರಿಗೆ ಬರೆಯುತ್ತೇವೆ. ಈ ಪತ್ರಗಳಲ್ಲಿ ಆರೋಗ್ಯ, ವಿದ್ಯಾಭ್ಯಾಸ, ದುಡಿಮೆ, ಹಣಕಾಸಿನ ಸ್ಥಿತಿಗತಿ, ಕಷ್ಟಸುಖ, ಹಬ್ಬಹರಿದಿನಗಳು, ಮದುವೆ ಮತ್ತಿತರೆ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರ ವಿನಿಮಯಗಳಾಗುತ್ತವೆ.

## ವ್ಯಾವಹಾರಿಕ ಅಥವಾ ಮನವಿ ಪತ್ರ

ಸಾರ್ವಜನಿಕ ಸಂಸ್ಥೆಗಳಾದ ಶಾಲೆ, ನಗರಸಭೆ, ಪಂಚಾಯಿತಿಗಳು, ಗ್ರಂಥಾಲಯ, ಉದ್ಯಮಿಗಳು, ಸರ್ಕಾರಿ ಕಛೇರಿ ಇತ್ಯಾದಿ ಸಂಸ್ಥೆಯಲ್ಲಿ ಕೆಲಸಮಾಡುವ ಅಧಿಕಾರಿಗಳ ಜೊತೆ ನಡೆಸುವ ಪತ್ರ ವ್ಯಾವಹಾರಗಳನ್ನು 'ವ್ಯಾವಹಾರಿಕ ಪತ್ರಗಳು' ಅಥವಾ 'ಮನವಿ ಪತ್ರಗಳು' ಎಂದು ಕರೆಯುತ್ತೇವೆ. ಸಾಮಾನ್ಯವಾಗಿ ಎಲ್ಲಾ ಪತ್ರಗಳು ವಿಳಾಸ, ದಿನಾಂಕ, ದೂರವಾಣಿ ಸಂಖ್ಯೆ, ಸಂಬೋಧನೆ, ವಿಷಯ ವಿವರಣೆ, ಮುಕ್ತಾಯದ ಭಾಗ, ಪತ್ರ ಬರೆದವರ ಸಹಿ, ಹೊರವಿಳಾಸ ಇತ್ಯಾದಿ ಮಾಹಿತಿಯನ್ನು ಒಳಗೊಂಡಿರುತ್ತವೆ.

©KTBS Not to be republished

# ಖಾಸಗಿ ಪತ್ರ / ವೈಯಕ್ತಿಕ ಪತ್ರ

ದಿನಾಂಕ : ೦೫.೦೫.೨೦೧೭

**ಕೀರ್ತಿಕುಮಾರ**
ಒಂಬತ್ತನೆಯ ತರಗತಿ
ಸರಕಾರಿ ಪ್ರೌಢಶಾಲೆ
**ಶ್ರೀರಂಗಪಟ್ಟಣ** – ೫೭೧ ೪೩೮

ತೀರ್ಥರೂಪರವರಿಗೆ ನಿಮ್ಮ ಮಗನು ಮಾಡುವ ಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ಅಲ್ಲಿ ನಿಮ್ಮ ಮತ್ತು ಅಮ್ಮನ ಆರೋಗ್ಯ ಹೇಗಿದೆ? ಯಾವುದಕ್ಕೂ ಪತ್ರ ಬರೆಯಿರಿ. ಇಲ್ಲಿ ನಾನು ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ನಿಮ್ಮ ಅಪೇಕ್ಷೆಯಂತೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾಗಲು ಪ್ರಯತ್ನಿಸುತ್ತಿದ್ದೇನೆ. ಪತ್ರದ ಮುಖ್ಯ ವಿಚಾರವೇನೆಂದರೆ, ಜೂನ್ ೧೦ ನೇ ತಾರೀಖಿನ ಒಳಗಾಗಿ ವಾರ್ಷಿಕ ಪರೀಕ್ಷೆಯ ಶುಲ್ಕ ೧೫೦/– (ನೂರ ಐವತ್ತು ಮಾತ್ರ) ರೂಪಾಯಿಗಳನ್ನು ಕಟ್ಟಬೇಕಾಗಿದೆ. ತಾವು ಆದಷ್ಟು ಬೇಗ ಅಂಚೆ ಮೂಲಕ ಹಣ ಕಳುಹಿಸಿ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಮನೆಯವರಿಗೆಲ್ಲ ನನ್ನ ನಮಸ್ಕಾರಗಳನ್ನು ತಿಳಿಸಿ. ಉಳಿದ ವಿಷಯವನ್ನು ಊರಿಗೆ ಬಂದಾಗ ಮಾತನಾಡುತ್ತೇನೆ.

ನಮಸ್ಕಾರಗಳೊಂದಿಗೆ,

ನಿಮ್ಮ ಪ್ರೀತಿಯ ಮಗ
ಕೀರ್ತಿಕುಮಾರ

ಇವರಿಗೆ,
**ಶ್ರೀ ಸಿದ್ದಪ್ಪ**
ಮನೆ ಸಂಖ್ಯೆ ೫೪, ೧ನೆಯ ಮುಖ್ಯರಸ್ತೆ,
ಕುವೆಂಪುನಗರ, **ಹಾಸನ** – ೫೭೩ ೨೦೧

©KTBS
Not to be republished

# ವ್ಯಾವಹಾರಿಕ ಅಥವಾ ಮನವಿ ಪತ್ರ

**ಇವರಿಂದ,** ದಿನಾಂಕ : ೦೫.೦೫.೨೦೧೭

ಶ್ರೀ ಸಂಗಮೇಶ
ಕೋಟೆ ಬೀದಿ
ಬಿಜಾಪುರ – ೫೮೬೧೦೧

**ಇವರಿಗೆ,**

ಜಿಲ್ಲಾಧಿಕಾರಿಗಳು
ವಿಜಯಪುರ – ೫೮೬ ೧೦೧
ವಿಜಯಪುರ ಜಿಲ್ಲೆ

ಮಾನ್ಯರೇ,

**ವಿಷಯ :** ಕೋಟೆ ಬೀದಿಗೆ ನೀರಿನ ಸೌಲಭ್ಯ ಒದಗಿಸುವಂತೆ ಕೋರಿ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಕೋಟೆ ಬೀದಿಯಲ್ಲಿ ಸುಮಾರು ೬೦ ಮನೆಗಳಿದ್ದು ಕೊಳಾಯಿಯ ವ್ಯವಸ್ಥೆ ಇಲ್ಲದೆ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಜನಪರ ಕಾಳಜಿ ಇರುವ ತಾವು ದಯಮಾಡಿ ಕೋಟೆ ಬೀದಿಗೆ ಬೋರ್‌ವೆಲ್ ಹಾಕಿಸಿ, ನಳದ ಮೂಲಕ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಸಂಗಮೇಶ)

ಸ್ಥಳ : ಬಿಜಾಪುರ

©KTBS Not to be republished

# ಪ್ರಬಂಧ ರಚನೆ

ಪ್ರಬಂಧ ಎನ್ನುವುದು ಆಂಗ್ಲ ಸಾಹಿತ್ಯದ ಪ್ರಭಾವದಿಂದ ಆಧುನಿಕ ಕನ್ನಡ ಸಾಹಿತ್ಯದಲ್ಲಿ ರೂಪುಪಡೆದ ಗದ್ಯ ಪ್ರಕಾರ. ಆಂಗ್ಲ ಭಾಷೆಯಲ್ಲಿರುವ Essay ಎನ್ನುವುದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಪ್ರಬಂಧ' ಅಥವಾ 'ನಿಬಂಧ' ಎಂದು ಕರೆಯಲಾಗುತ್ತದೆ. ಒಂದು ನಿರ್ದಿಷ್ಟ ವಿಷಯವನ್ನು ಕುರಿತು ಮಾಹಿತಿ ಸಂಗ್ರಹಿಸಿ, ವಿವರವಾಗಿ, ಅರ್ಥವತ್ತಾಗಿ, ಆಕರ್ಷಕವಾಗಿ ಬರೆದರೆ 'ಪ್ರಬಂಧ' ಎನ್ನಲಾಗುತ್ತದೆ.

'ಪ್ರಬಂಧ' ಎಂದರೆ 'ಚೆನ್ನಾಗಿ ಕಟ್ಟು' ಎಂದು ಅರ್ಥ. ಪ್ರಬಂಧಗಳಲ್ಲಿ ಅನೇಕ ಬಗೆಗಳಿವೆ. ಅವುಗಳನ್ನು ಪ್ರಮುಖವಾಗಿ ವಿವರಣಾತ್ಮಕ, ವಿಚಾರಾತ್ಮಕ, ವಿಮರ್ಶಾತ್ಮಕ, ವೃತ್ತಾಂತಾತ್ಮಕ ಮತ್ತು ಕಲ್ಪನಾತ್ಮಕ ಅಥವಾ ಲಲಿತ ಪ್ರಬಂಧಗಳೆಂದು ವಿಂಗಡಿಸಬಹುದು.

ಪ್ರಬಂಧವನ್ನು ಬರೆಯುವ ಮೊದಲು ಆಯ್ಕೆಮಾಡಿಕೊಂಡಿರುವ ವಿಷಯಕ್ಕೆ ಸಂಬಂಧಿಸಿದ ಅಂಶಗಳನ್ನು ಉಪಲಬ್ಧ ಮಾಹಿತಿಗಳನ್ನು ಬೇರೆಯವರ ಅಭಿಪ್ರಾಯಗಳನ್ನು ಸಂಗ್ರಹಿಸಿ ಟಿಪ್ಪಣಿ ಮಾಡಿಕೊಳ್ಳಬೇಕು. ವೃತ್ತ ಪತ್ರಿಕೆಗಳು, ನಿಯತಕಾಲಿಕೆಗಳು ಸಂಬಂಧಿಸಿದ ಗ್ರಂಥಗಳು ಇವು ಪ್ರಬಂಧ ಲೇಖನಕ್ಕೆ ಸಹಾಯ ಮಾಡುತ್ತವೆ. ಅಂತರ್ಜಾಲ (Internet) ದಲ್ಲೂ ಸಾಕಷ್ಟು ಮಾಹಿತಿ ಲಭಿಸುತ್ತದೆ.

ಯಾವುದೇ ಬಗೆಯ ಪ್ರಬಂಧ ಲೇಖನವಾದರೂ ಅಲ್ಲಿ ಬಳಸಿರುವ ಭಾಷೆ ಸರಳವಾಗಿರಬೇಕು. ಸಂಕ್ಷಿಪ್ತವಾಗಿ ನಿಖರವಾಗಿರಬೇಕು. ವಿಷಯಕ್ಕೆ ಅನುಗುಣವಾಗಿ ಗಂಭೀರವಾದ ಹಾಸ್ಯಪೂರ್ಣವಾದ ಶೈಲಿಯಿರಬೇಕು. ನುಡಿಗಟ್ಟು, ಲೋಕೋಕ್ತಿಗಳು, ವಿಷಯಕ್ಕೆ ಸಂಬಂಧಿಸಿದ ಪ್ರಸಿದ್ಧರ ಹೇಳಿಕೆಗಳನ್ನು ಸಮಂಜಸವಾಗಿ ಬಳಸಿ ಬರೆಯುವುದರಿಂದ ಪ್ರಬಂಧದ ಮೌಲ್ಯ ಹೆಚ್ಚುತ್ತದೆ. ಲೇಖನ ಚಿಹ್ನೆಗಳನ್ನು ಸರಿಯಾದ ರೀತಿಯಲ್ಲಿ ಬಳಸಬೇಕು. ಬರೆವಣಿಗೆಯಲ್ಲಿ ತಪ್ಪಿಲ್ಲದಂತೆ ಎಚ್ಚರವಹಿಸಬೇಕು.

**ಪ್ರಬಂಧ ರಚನೆಯ ಹಂತಗಳು :**

೧. **ಪೀಠಿಕೆ** : ಇದು ಪ್ರಬಂಧದ ವಿಷಯಕ್ಕೆ ಪ್ರವೇಶದ ದ್ವಾರದಂತಿರಬೇಕು. ಇಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ವಿಚಾರಗಳನ್ನು ಚಿಕ್ಕದಾಗಿ, ಚೊಕ್ಕವಾಗಿ ಪ್ರಸ್ತಾಪಿಸಬೇಕು.

೨. **ವಿಷಯ ವಿವರಣೆ** : ಇದು ಪ್ರಬಂಧದ ಬಹುಮುಖ್ಯವಾದ ಭಾಗ, ಇಲ್ಲಿ ವಿಷಯದ ಪೂರ್ಣ ವಿವರವನ್ನು ಅಂಕಿ ಅಂಶ, ಉದಾಹರಣೆಗಳೊಡನೆ ಬೇರೆ ಬೇರೆ ವಾಕ್ಯವೃಂದಗಳಲ್ಲಿ ವಿವರಿಸಬೇಕು. ಆಯಾ ವಾಕ್ಯವೃಂದದಲ್ಲಿರುವ ವಿಷಯಗಳಲ್ಲಿ ಏಕಸೂತ್ರತೆ ಇರುವಂತೆ ಎಚ್ಚರ ವಹಿಸಬೇಕು. ವಿಷಯಗಳ ಕಲಸುಮೇಲೋಗರವಿರಬಾರದು. ಪರಸ್ಪರ ವಿರೋಧಿ ವಿಚಾರಗಳಿಗೆ ಅವಕಾಶವಿರಬಾರದು. ಒಂದು ವಾಕ್ಯವೃಂದದ ವಿಚಾರ ಮತ್ತೊಂದು ವಾಕ್ಯವೃಂದದ ವಿಚಾರಗಳಿಗೆ ಪೂರಕವಾಗಿರಬೇಕು. ಸುಂದರವಾದ ಬರೆವಣಿಗೆ, ಆಕರ್ಷಕ ಶೈಲಿ, ಒಳ್ಳೆಯ ರೀತಿಯ ವಿಷಯ ಪ್ರತಿಪಾದನೆ ಈ ಭಾಗದಲ್ಲಿರಬೇಕು.

©KTBS Not to be republished

**೩. ಮುಕ್ತಾಯ ಅಥವಾ ಉಪಸಂಹಾರ :** ಪ್ರಬಂಧ ಪೂರ್ಣವಾಗಬೇಕಾದರೆ ಈ ಭಾಗ ಅಗತ್ಯ. ಪ್ರಬಂಧದಲ್ಲಿ ಚರ್ಚಿಸಿರುವ ಪ್ರಮುಖ ಅಂಶಗಳನ್ನು ಇಲ್ಲಿ ಸಾರಾಂಶ ರೂಪದಲ್ಲಿ ನೀಡಬಹುದು. ಇಲ್ಲವೇ ತೀರ್ಮಾನ, ಚಿಂತನೆಗೆ ಪ್ರೇರಣೆ, ಸಮಸ್ಯೆಗಳ ಪರಿಹಾರ ಸೂತ್ರಗಳು ಇತ್ಯಾದಿ ಅಂಶಗಳನ್ನೂ ಸೂಚಿಸಬಹುದು. ಪೀಠಿಕೆಯಂತೆಯೇ ಮುಕ್ತಾಯವೂ ಹಿತಮಿತವಾಗಿ ಆಕರ್ಷಕವಾಗಿರಬೇಕು.

ಪ್ರೌಢಶಾಲಾ ವಿದ್ಯಾರ್ಥಿಗಳಾದ ನಿಮಗೆ ಪರೀಕ್ಷೆಯಲ್ಲಿ ಮೂರು ವಿಷಯಗಳನ್ನು ಕೊಟ್ಟು ಯಾವುದಾದರೂ ಒಂದು ವಿಷಯಕ್ಕೆ ಸಂಬಂಧಿಸಿದಂತೆ ಪ್ರಬಂಧವನ್ನು ಬರೆಯುವಂತೆ ಸೂಚಿಸಲಾಗುತ್ತದೆ. (ಹದಿನೈದು ಸಾಲುಗಳಿಗೆ ಮೀರದಂತೆ,) ಪ್ರಬಂಧದಲ್ಲಿ ನೀವು ವಿಷಯವನ್ನು ಯಾವರೀತಿ ಜೋಡಿಸಿದ್ದೀರಿ, ನಿರೂಪಣೆ, ಶೈಲಿ, ಭಾಷೆಯ ಶುದ್ಧತೆ ಇತ್ಯಾದಿಗಳನ್ನು ಗಮನಿಸಲಾಗುತ್ತದೆ. ಆದುದರಿಂದ ಪ್ರಬಂಧ ರಚನೆಯ ಮೂರು ಹಂತಗಳನ್ನು ಗಮನದಲ್ಲಿಟ್ಟುಕೊಂಡು ಬರೆಯಬೇಕು. ಇಲ್ಲಿ ನಿಮಗೆ ಅನುಕೂಲವಾಗಲೆಂದು ಒಂದು ಪ್ರಬಂಧದ ಮಾದರಿಯನ್ನು ನೀಡಲಾಗಿದೆ. ನೀವು ಅದರಂತೆ ಯಾವ ವಿಷಯ ನೀಡಿದರೂ ಅಚ್ಚುಕಟ್ಟಾಗಿ ಪ್ರಬಂಧ ಬರೆಯಲು ಸಮರ್ಥರಾಗಬೇಕು.

## ಪ್ರಕೃತಿ ವಿಕೋಪ

ನಮ್ಮ ಸುತ್ತ ಮುತ್ತ ಇರುವ ಬೆಟ್ಟ-ಗುಡ್ಡಗಳು, ಮರಗಿಡಗಳು, ನಾವಿರುವ ಭೂಮಿ ಸಾಗರ-ಸರೋವರಗಳು, ಹಳ್ಳಕೊಳ್ಳಗಳು, ಪಶುಪಕ್ಷಿಗಳು ಅರಣ್ಯ, ಗಾಳಿ, ಆಕಾಶ ಇವೆಲ್ಲವೂ ಸೇರಿ ಪರಿಸರವೆನಿಸಿದೆ. ಈ ಪರಿಸರವನ್ನೇ ಪ್ರಕೃತಿ ಅಥವಾ ನಿಸರ್ಗವೆಂದೂ ಕರೆಯುತ್ತಾರೆ. ಪರಿಸರವನ್ನು ಮುಖ್ಯವಾಗಿ ಪ್ರಾಕೃತಿಕ ಪರಿಸರ ಮತ್ತು ಮಾನವ ನಿರ್ಮಿತ ಪರಿಸರವೆಂದು ವಿಭಾಗಿಸುತ್ತೇವೆ. ನದಿ, ಸಮುದ್ರ, ಸರೋವರ, ಅರಣ್ಯ, ಬೆಟ್ಟ ಗುಡ್ಡ, ಪರ್ವತ, ಮುಂತಾದವುಗಳು ಪ್ರಾಕೃತಿಕ ಪರಿಸರವಾದರೆ, ಕಟ್ಟಡಗಳು, ಕೃಷಿಭೂಮಿ, ಕೈಗಾರಿಕೆಗಳು, ನಗರಗಳು, ಅಣೆಕಟ್ಟುಗಳು, ಕಾಲುವೆ, ರಸ್ತೆಗಳು, ಮಾನವ ನಿರ್ಮಿತ ಪರಿಸರವಾಗಿದೆ. ಪರಿಸರವನ್ನು ಬಿಟ್ಟು ಮನುಷ್ಯ ಜೀವನ ಸಾಧ್ಯವೇ ಇಲ್ಲ. ಆದರೆ ಇಂದು ಮನುಷ್ಯ ತನ್ನ ಸ್ವಾರ್ಥ ಸುಖಕ್ಕಾಗಿ ಪರಿಸರವನ್ನು ದುರ್ಬಳಕೆ ಮಾಡುತ್ತಿದ್ದಾನೆ. ಪರಿಸರವನ್ನು ಹಾಳುಮಾಡುತ್ತಿದ್ದಾನೆ. ಇದರಿಂದಾಗಿ, ಅತಿವೃಷ್ಟಿ, ಅನಾವೃಷ್ಟಿ, ಹವಾಮಾನದ ಏರುಪೇರುಗಳು ಸಂಭವಿಸಿ, ಸುನಾಮಿ, ಪ್ರವಾಹ, ಚಂಡಮಾರುತ, ಭೂಕಂಪ ಮೊದಲಾದ ಪ್ರಕೃತಿ ವಿಕೋಪಗಳು ಉಂಟಾಗುತ್ತಿವೆ.

ಇತ್ತೀಚಿನ ವರ್ಷಗಳಲ್ಲಿ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಅತಿವೃಷ್ಟಿ ಉಂಟಾಗಿ ಎಂದೂ ಬೀಳದಷ್ಟು ಮಳೆ ಸುರಿಯಿತು. ಊರುಗಳು ಜಲಪ್ರಳಯದಲ್ಲಿ ಮುಳುಗಿದವು. ಸಾವಿರಾರು ಮನೆಗಳು ಉರುಳಿದವು. ಜನ ಹಾಗೂ ಜಾನುವಾರುಗಳು ಪ್ರಾಣ ಕಳೆದುಕೊಂಡವು. ಲಕ್ಷಾಂತರ ಬೆಲೆಯ ಬೆಳೆ ಹಾಳಾಯಿತು. ಬಹುತೇಕ ಜನರಿಗೆ ನಿಲ್ಲಲು ನೆಲೆಯಿಲ್ಲದ, ತಿನ್ನಲು ಆಹಾರವಿಲ್ಲದ ಗತಿಬಂತು. ಸರಕಾರವು ಹೆಲಿಕಾಪ್ಟರ್‌ಗಳ ಮೂಲಕ ಆಹಾರ ಜನರಿಗೆ ಪೊಟ್ಟಣಗಳನ್ನು ವಿತರಿಸಿ, ದೋಣಿ, ತೆಪ್ಪಗಳ ಮೂಲಕ ಸುರಕ್ಷಿತ ಸ್ಥಳಗಳಿಗೆ ಜನರನ್ನು ಜಾನುವಾರುಗಳನ್ನು ಸ್ಥಳಾಂತರಿಸಿತು.

©KTBS Not to be republished

ವಾಡಿಕೆಯಂತೆ ಬರಬೇಕಾದಷ್ಟು ಮಳೆಬಾರದಿರುವುದನ್ನು ‘ಅನಾವೃಷ್ಟಿ’ ಅಥವಾ ‘ಬರ’ ಎನ್ನುತ್ತೇವೆ. ಆಗ ಬೆಳೆ ಇರುವುದಿಲ್ಲ, ಕುಡಿಯಲು ನೀರು ದೊರಕುವುದಿಲ್ಲ, ಜನರಿಗೆ–ಜಾನುವಾರುಗಳಿಗೆ ಆಹಾರ ಮತ್ತು ನೀರಿನ ಅಭಾವ ಉಂಟಾಗುತ್ತದೆ. ಇತ್ತೀಚೆಗೆ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ‘ಬರ’ ಪರಿಸ್ಥಿತಿ ಇರುವುದು ಕಂಡುಬಂದಿದೆ.

ಇದಕ್ಕೆ ವಿರುದ್ಧವಾಗಿ ವಾಡಿಕೆಗಿಂತಲೂ ಅಧಿಕಪಟ್ಟು ಮಳೆ ಬೇಡವಾದ ಸಮಯದಲ್ಲಿ ಸುರಿಯುವ ಸ್ಥಿತಿಯೇ ಅತಿವೃಷ್ಟಿ. ಅತಿವೃಷ್ಟಿಯಿಂದಲೂ ರೈತರಿಗೆ ಕಟಾವಿಗೆ ಬಂದ ಬೆಳೆ ಕೈಗೆ ಸಿಗದೇ ನಷ್ಟವಾಗುತ್ತಿದೆ.

ಕೆಲವು ವರ್ಷಗಳ ಹಿಂದೆ ಸುನಾಮಿಯಂತಹ ಪ್ರಕೃತಿ ವಿಕೋಪಗಳು ಸಂಭವಿಸಿ ಸಮುದ್ರತೀರದ ಪ್ರದೇಶಗಳು ಕ್ಷಣಮಾತ್ರದಲ್ಲಿ ಕಡಲ ತೆರೆಗಳಿಂದ ಕೊಚ್ಚಿಹೋಗಿ ಸಾವಿರಾರು ಜನರು ಜಲ ಸಮಾಧಿಯಾದರು. ಇಂಡೋನೇಷ್ಯಾದಲ್ಲಿ ಸಂಭವಿಸಿದ ಭೂಕಂಪದ ಪರಿಣಾಮದಿಂದ ಈ ಸುನಾಮಿ ಉಂಟಾಯಿತೆಂದು ಹೇಳಲಾಗುತ್ತಿದೆ. ನಲವತ್ತು–ಐವತ್ತು ಅಡಿಗಳೆತ್ತರಕ್ಕೆ ಏರಿದ ಸಮುದ್ರದ ಅಲೆಗಳು ತೀರದಲ್ಲಿದ್ದ ಜನರನ್ನು ಸಾಮಗ್ರಿಗಳನ್ನು ನಾಶಮಾಡಿದವು.

ಭೂಮಿಯು ಕಂಪಿಸುವುದರಿಂದ ಭೂಕಂಪನಗಳು ಉಂಟಾಗುತ್ತವೆ. ಭೂಕಂಪನದಿಂದ ಮನೆಗಳು ಕಟ್ಟಡಗಳು ಕುಸಿದು ಬೀಳುತ್ತವೆ. ರಸ್ತೆಗಳು ಕಾಣದಾಗುತ್ತವೆ. ವಿದ್ಯುತ್, ದೂರವಾಣಿ, ಮೊದಲಾದ ಸಂಪರ್ಕಗಳು ಸಂಪೂರ್ಣವಾಗಿ ನಾಶವಾಗುತ್ತವೆ. ಭೂಕಂಪನದಿಂದ ಕಟ್ಟಡಗಳ ಅಡಿಯಲ್ಲಿ ಸಿಲುಕಿದ ಸಾವಿರಾರು ಜನರು ಹಾಗೂ ದನಕರುಗಳು ಪ್ರಾಣ ಕಳೆದುಕೊಳ್ಳುವುದುಂಟು. ನಮ್ಮ ದೇಶದಲ್ಲಿ ಅಂಡಮಾನ್ ನಿಕೋಬಾರ್, ಅಸ್ಸಾಂ, ಹಿಮಾಚಲ ಪ್ರದೇಶ, ಗುಜರಾತ್, ಮಹಾರಾಷ್ಟ್ರ ಮುಂತಾದ ಪ್ರದೇಶಗಳು ಭೂಕಂಪ ಸಂಭವಿಸುವ ಪ್ರದೇಶಗಳೆಂದು ಗುರುತಿಸಿದ್ದಾರೆ.

ಜಪಾನ್ ದೇಶದಲ್ಲಿ ಆಗಾಗ ಭೂಕಂಪಗಳಾಗುತ್ತಿದ್ದು, ಇದರಿಂದ ರಕ್ಷಣೆ ಪಡೆಯಲು ಅಪಾಯ ಬಾರದಂತಹ ಮನೆಗಳನ್ನು ನಿರ್ಮಿಸುವುದರಲ್ಲಿ ಅಲ್ಲಿನ ಜನ ಯಶಸ್ವಿಯಾಗಿದ್ದಾರೆ.

ಇತ್ತೀಚೆಗೆ ಜಾಗತಿಕ ತಾಪಮಾನ ಹೆಚ್ಚುತ್ತಿದೆ. ಇದರಿಂದಾಗಿ ಹಿಮಗಡ್ಡೆಗಳು ಕರುಗುತ್ತಿವೆ. ಈ ರೀತಿ ಹಿಮಗಡ್ಡೆಗಳು ಕರಗುವುದರಿಂದ ನದಿಗಳಲ್ಲಿ ಪ್ರವಾಹ ಉಂಟಾಗಿ ಸಮುದ್ರದ ನೀರಿನ ಮಟ್ಟ ಏರುತ್ತಿದೆ ಎಂದು ಹವಾಮಾನ ತಜ್ಞರು ಎಚ್ಚರಿಕೆ ಕೊಡುತ್ತಿದ್ದಾರೆ. ಧ್ರುವ ಪ್ರದೇಶಗಳಲ್ಲೂ ಹಿಮ ಕರಗುತ್ತಿದೆ. ಇವೆಲ್ಲವೂ ಅಪಾಯದ ಸೂಚನೆಗಳಾಗಿವೆ.

ಚಂಡಮಾರುತ, ಹಿಮಪಾತ, ಅಗ್ನಿಪರ್ವತಗಳು ಶಿಲಾರಸವನ್ನು ಉಗುಳುವುದು ಮುಂತಾದ ಪ್ರಕೃತಿ ವಿಕೋಪಗಳು ಸಂಭವಿಸಿ ಮಾನವನಿಗೆ, ಪ್ರಾಣಿಗಳಿಗೆ, ಆಸ್ತಿಪಾಸ್ತಿಗೆ ಹಾನಿ ಉಂಟುಮಾಡುತ್ತಿವೆ.

ಪ್ರಕೃತಿ ವಿಕೋಪಗಳು ಸಂಭವಿಸಲು ಮನುಷ್ಯನೇ ಕಾರಣನಾಗಿದ್ದು ಪ್ರಕೃತಿ ರಕ್ಷಣೆಯಲ್ಲಿ ತೊಡಗಿದರೆ ಮಾತ್ರ ಈ ರೀತಿಯ ವಿಕೋಪಗಳನ್ನು ದೂರವಿಡಲು ಸಾಧ್ಯ.

* * * *

©KTBS Not to be republished


**ಪೂರಕ ಓದು:**

## ೧. ಕುವೆಂಪು ಅವರ ವಿಶ್ವಮಾನವ ಸಂದೇಶ

### ಪಂಚಮಂತ್ರ ಮತ್ತು ಸಪ್ತಸೂತ್ರ :

"ಹುಟ್ಟುವಾಗಲೇ ಯಾರೂ ಯಾವ ಮತಕ್ಕೂ ಸೇರಿರುವುದಿಲ್ಲ. ಪ್ರತಿಯೊಬ್ಬ ಮಾನವನ ಹೃದಯದಲ್ಲೂ ಅವನದೇ ಆದ ಧರ್ಮವಿದೆ. ಈ ಜಗತ್ತಿನಲ್ಲಿ ಎಷ್ಟು ಜನ ಮಾನವರಿದ್ದಾರೆಯೋ ಅಷ್ಟು ಧರ್ಮಗಳಿರಲಿ."

**– ಸ್ವಾಮಿ ವಿವೇಕಾನಂದ**



ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪ ಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅವನನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು.

ಹುಟ್ಟುವಾಗ 'ವಿಶ್ವಮಾನವ'ನಾಗಿಯೇ ಹುಟ್ಟಿದ ಮಗುವನ್ನು, ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಉಪಾಧಿಗಳಿಂದ ಬದ್ಧನನ್ನಾಗಿ ಮಾಡುತ್ತೇವೆ. ಅವೆಲ್ಲವುಗಳಿಂದ ಪಾರಾಗಿ ಅವನನ್ನು 'ಬುದ್ಧ'ನನ್ನಾಗಿ, ಅಂದರೆ ವಿಶ್ವಮಾನವನನ್ನಾಗಿ ಪರಿವರ್ತಿಸುವುದೇ ನಮ್ಮ ವಿದ್ಯೆ, ಸಂಸ್ಕೃತಿ, ನಾಗರೀಕತೆ ಎಲ್ಲದರ ಆದ್ಯ ಕರ್ತವ್ಯವಾಗಬೇಕು. ಪ್ರಪಂಚದ ಮಕ್ಕಳೆಲ್ಲ 'ಅನಿಕೇತನ'ರಾಗಬೇಕು. ಲೋಕ ಉಳಿದು, ಬಾಳಿ ಬದುಕಬೇಕಾದರೆ!

ಮಾನವ ವಿಕಾಸದ ಹಾದಿಯಲ್ಲಿ ಆಯಾ ಕಾಲದ ಅಗತ್ಯವನ್ನು ಪೂರೈಸಲು ಮಹಾಪುರುಷರು ಸಂಭವಿಸಿ ಹೋಗಿದ್ದಾರೆ. ಅವರಲ್ಲಿ ಕೆಲವರ ವಾಣಿ ವಿಶಿಷ್ಟ ಧರ್ಮವಾಗಿ ರೂಪುಗೊಂಡು ಕಡೆಗೆ ಮತವಾಗಿ ಪರಿಮಿತವಾಯಿತು. ಮಾನವರನ್ನು ಕೂಡಿಸಿ ಬಾಳಿಸಬೇಕೆಂಬ ಸದುದ್ದೇಶದಿಂದ ಹುಟ್ಟಿಕೊಂಡ ಮಹಾತ್ಮರ ವಾಣಿ ಮತವಾಗಿ ಮಾದಕವಾಯಿತು. ಒಂದು ಯುಗಕ್ಕೆ ಅಗತ್ಯವೆನಿಸಿದ ಧರ್ಮ ಕಾಲಾನುಕಾಲಕ್ಕೆ ಮತವಾಗಿ ನಿರುಪಯುಕ್ತವೆನಿಸಿ ಮತ್ತೊಂದು ಹೊಸ ಧರ್ಮಕ್ಕೆ ಎಡೆಗೊಟ್ಟುದೂ ಉಂಟು. ಹೀಗಾಗಿ ಅನೇಕ ಧರ್ಮಗಳು ಮತಗಳಾಗಿ ಜನತೆಯನ್ನು ಗುಂಪು ಗುಂಪಾಗಿ ಒಡೆದಿವೆ: ಯುದ್ಧಗಳನ್ನು ಹೊತ್ತಿಸಿವೆ:

©KTBS Not to be republished

ಜಗತ್ತಿನ ಕ್ಷೋಭೆಗಳಿಗೆಲ್ಲ ಮೂಲ ಕಾರಣವೆಂಬಂತೆ! ವಿಜ್ಞಾನ ಯುಗದ ಪ್ರಾಯೋಗಿಕ ದೃಷ್ಟಿಗೆ ಇನ್ನು ಮೇಲೆ ಮತಮೌಢ್ಯ ಒಪ್ಪಿಗೆಯಾಗದು. ವಿನೋಬಾಭಾವೆಯವರು ಹಿಂದೆ ಹೇಳಿದಂತೆ 'ಮತ ಮತ್ತು ರಾಜಕೀಯದ ಕಾಲ ಆಗಿ ಹೋಯಿತು. ಇನ್ನೇನಿದ್ದರೂ ಅಧ್ಯಾತ್ಮ ಮತ್ತು ವಿಜ್ಞಾನದ ಕಾಲ ಬರಬೇಕಾಗಿದೆ'.

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ–ಈ ಪಂಚಮಂತ್ರ ಇನ್ನು ಮುಂದಿನ ದೃಷ್ಟಿಯಾಗಬೇಕಾಗಿದೆ. ಅಂದರೆ. ನಮಗೆ ಇನ್ನು ಬೇಕಾದುದು ಆ ಮತ ಈ ಮತ ಅಲ್ಲ; ಮನುಜಮತ, ಆ ಪಥ ಈ ಪಥ ಅಲ್ಲ; ವಿಶ್ವ ಪಥ, ಆ ಒಬ್ಬರ ಈ ಒಬ್ಬರ ಉದಯ ಮಾತ್ರವಲ್ಲ; ಸರ್ವರ ಸರ್ವಸ್ತರದ ಉದಯ. ಪರಸ್ಪರ ವಿಮುಖವಾಗಿ ಸಿಡಿದು ಹೋಗುವುದಲ್ಲ; ಸಮನ್ವಯಗೊಳ್ಳುವುದು. ಮಿತ ಮತದ ಅಂಶಿಕ ದೃಷ್ಟಿಯಲ್ಲ; ಭೌತಿಕ ಪಾರಮಾರ್ಥಿಕ ಎಂಬ ಭಿನ್ನ ದೃಷ್ಟಿಯಲ್ಲ; ಎಲ್ಲವನ್ನೂ ಭಗವನ್ ದೃಷ್ಟಿಯಿಂದ ಕಾಣುವ ಪೂರ್ಣದೃಷ್ಟಿ.

ಯಾವ ಭಾವನೆಗಳು ಜಗತ್ತಿನಲ್ಲಿ ಎಲ್ಲ ಮಾನವರಿಗೂ ಅನ್ವಯವಾಗಬಹುದೊ ಅಂತಹ ಭಾವನೆ, ಅಂತಹ ದೃಷ್ಟಿ, ಬರಿಯ ಯಾವುದೊ ಒಂದು ಜಾತಿಗೆ, ಮತಕ್ಕೆ, ಗುಂಪಿಗೆ, ಒಂದು ದೇಶಕ್ಕೆ ಮಾತ್ರ ಅನ್ವಯವಾಗುವುದಿಲ್ಲ; ಸರ್ವ ಕಾಲಕ್ಕೂ ಅನ್ವಯವಾಗುವ ಇವು ಮೂಲ ಮೌಲ್ಯಗಳು. ಈ ಮೌಲ್ಯಗಳು ಮಾನವರನ್ನು ಕೂಡಿಸಿ ಬಾಳಿಸುವತ್ತ ನಡೆದಾವು. ಗುಂಪುಗಾರಿಕೆಗೆಂದೂ ಇವು ತೊಡಗುವುದಿಲ್ಲ; ಅದೇನಿದ್ದರೂ ರಾಜಕೀಯದ ಕರ್ಮ; ವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿಯೂ ಸಮಷ್ಟಿಯ ಉದ್ಧಾರದ ದೃಷ್ಟಿ ಇದರದು. ಈ ದೃಷ್ಟಿಗೆ ವ್ಯಕ್ತಿಗಳೆಷ್ಟೋ ಅಷ್ಟೂ ಸಂಖ್ಯೆಯ ಮತಗಳಿರುವುದು ಸಾಧ್ಯ: ಅಷ್ಟೂ ವ್ಯಕ್ತಿಗಳು ಸಮಷ್ಟಿಯ ವಿಕಾಸಕ್ಕೆ ಸಾಧಕವಾಗುವುದೂ ಸಾಧ್ಯ. ಈ 'ದರ್ಶನ'ವನ್ನೇ 'ವಿಶ್ವಮಾನವ ಗೀತೆ' ಸಾರುತ್ತದೆ.

**ವಿಶ್ವಮಾನವರಾಗಲು ನಾವು ಸಾಧಿಸಬೇಕಾದ ಮೂಲಭೂತ ಸ್ವರೂಪದ ಸಪ್ತ ಸೂತ್ರಗಳು.**

೧. "ಮನುಷ್ಯಜಾತಿ ತಾನೊಂದೆ ವಲಂ" ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು.

೨. ವರ್ಣಾಶ್ರಮವನ್ನು ತಿದ್ದುವುದಲ್ಲ, ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಷಿಯಾ, ಸುನ್ನಿ, ಕ್ಯಾಥೊಲಿಕ್, ಪ್ರಾಟಿಸ್ಟೆಂಟ್, ಸಿಖ್, ನಿರಂಕಾರಿ, ಇತ್ಯಾದಿ ಇತ್ಯಾದಿ ವಿಭಜನೆಯನ್ನು ನಿರ್ನಾಮ ಮಾಡಬೇಕು.

೩. ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿರುವ ಜಾತಿ ಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ ವಿನಾಶಗೊಳಿಸಬೇಕು.

೪. 'ಮತ' ತೊಲಗಿ 'ಅಧ್ಯಾತ್ಮ' ಮಾತ್ರ ವೈಜ್ಞಾನಿಕ ತತ್ತ್ವವಾಗಿ ಮಾನ್ಯತೆ ಪಡೆಯಬೇಕು.

©KTBS Not to be republished

೫. ಮತ 'ಮನುಜಮತ' ಆಗಬೇಕು. ಪಥ 'ವಿಶ್ವಪಥ' ಆಗಬೇಕು; ಮನುಷ್ಯ 'ವಿಶ್ವಮಾನವ' ಆಗಬೇಕು.

೬. ಮತ ಗುಂಪು ಕಟ್ಟುವ ವಿಷಯವಾಗಬಾರದು. ಯಾರೂ ಯಾವ ಮತಕ್ಕೂ ಸೇರದೆ, ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ 'ತನ್ನ' ಮತಕ್ಕೆ ಮಾತ್ರ ಸೇರಬೇಕು. ಅಂದರೆ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ. ಯಾರೊಬ್ಬರೂ ಇನ್ನೊಬ್ಬರ ಮತಕ್ಕೆ ಸೇರಿ ಗುಂಪುಕಟ್ಟಿ ಜಗಳ ಹಚ್ಚುವಂತಾಗಬಾರದು.

೭. ಯಾವ ಒಂದು ಗ್ರಂಥವೂ 'ಏಕೈಕ ಪರಮಪೂಜ್ಯ' ಧರ್ಮ ಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದುವುಗಳನ್ನೆಲ್ಲ ಓದಿ ತಿಳಿದು ತನ್ನ 'ದರ್ಶನ'ವನ್ನು ತಾನೆ ನಿರ್ಣಯಿಸಿ ಕಟ್ಟಿಕೊಳ್ಳಬೇಕು.

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

೧. ವಿಶ್ವಮಾನವನಾಗಿ ಹುಟ್ಟುವ ಮಗು ಯಾವ ಯಾವ ಬಂಧನಗಳಿಗೆ ಒಳಪಡುತ್ತದೆ?
೨. ಸ್ವಾಮಿ ವಿವೇಕಾನಂದರ ಪ್ರಕಾರ ಈ ಜಗತ್ತಿನಲ್ಲಿ ಎಷ್ಟು ಧರ್ಮಗಳಿವೆ?
೩. ಕುವೆಂಪು ಅವರ ಪ್ರಕಾರ ವಿದ್ಯೆಯ ಕರ್ತವ್ಯವೇನು?
೪. ಧರ್ಮಗಳು ಹುಟ್ಟಿಕೊಂಡದ್ದು ಹೇಗೆ?
೫. ಧರ್ಮಗಳು ಉಂಟುಮಾಡಿರುವ ತೊಂದರೆಗಳೇನು?
೬. ವಿನೋಭಾಭಾವೆಯವರು ಮತಧರ್ಮದ ಬಗ್ಗೆ ಏನು ಹೇಳಿದ್ದಾರೆ?
೭. ಕುವೆಂಪು ಅವರ ಪಂಚ ಮಂತ್ರಗಳಾವುವು?
೮. ಕುವೆಂಪು ಅವರ ವಿಶ್ವಮಾನವ ಸಂದೇಶದ ಸಾರವೇನು?
೯. ವಿಶ್ವಮಾನವರಾಗಲು ನಾವು ಅನುಸರಿಸಬೇಕಾದ ಸಪ್ತ ಸೂತ್ರಗಳಾವುವು?

©KTBS Not to be republished

# ೨. ನೀರಿನ ಮಹತ್ವ ಮತ್ತು ಮಾಲಿನ್ಯ

ನೀರು ಪಂಚಭೂತಗಳಲ್ಲಿ ಒಂದು. ಪ್ರತಿ ಜೀವಿಯ ಜೀವನಾಧಾರ ನೀರು. ಎಲ್ಲ ನಾಗರೀಕತೆಗಳು ನದಿಯ ದಂಡೆಯಲ್ಲಿಯೇ ಪ್ರವರ್ಧಮಾನಕ್ಕೆ ಬಂದವು. ನೀರು ಇಲ್ಲದ ಜಗತ್ತನ್ನು ನಾವು ಊಹಿಸಲೂ ಸಾಧ್ಯವಿಲ್ಲ. ನೀರು ೭೯% ರಷ್ಟು ಇದ್ದು, ಭೂಮಿ ೨೧% ರಷ್ಟು ಇರುವುದರಿಂದಲೇ ನೀರಿನ ಮಹತ್ವ ತಿಳಿಯುತ್ತದೆ. ನೀರಿನ ಮೂಲಗಳು ಕೆರೆ, ಕುಂಟೆ, ಕಾಲುವೆ, ನದಿ, ಸಮುದ್ರ ಮತ್ತು ಕೊಳವೆ ಬಾವಿಗಳು. ಇವುಗಳಲ್ಲಿ ನೀರು ಹರಿಯಲು ಮಳೆ ಬರಬೇಕು. ಸಮುದ್ರದಲ್ಲಿ ಅಪಾರವಾದ ನೀರಿದ್ದರೂ ಅದು ಕುಡಿಯಲು, ಬೆಳೆ ಬೆಳೆಯಲು ಯೋಗ್ಯವಲ್ಲ, ಈಗ ಕೆರೆ, ಕುಂಟೆ, ಕಾಲುವೆಗಳ ಸ್ಥಾನವನ್ನು ಕೊಳವೆ ಬಾವಿಗಳು ಆಕ್ರಮಿಸಿವೆ.

ನೀರು ಬರೀ ನೀರಲ್ಲ. ಆಮ್ಲಜನಕ ಜಲಜನಕಗಳ ಮಿಶ್ರಣ ಮಾತ್ರವಲ್ಲ, ನೀರು ಜೀವ ಜಲ. ಇಂದು ಜೀವ ಜಲ ಹಲವಾರು ಕಾರಣಗಳಿಂದಾಗಿ ವಿಷಯುಕ್ತವಾಗಿದೆ. ಜೊತೆಗೆ ನೈಸರ್ಗಿಕ ನೀರಿನ ಮೂಲಗಳಾದ ಕೆರೆ, ಕಾಲುವೆ, ಬಾವಿಗಳು ಬತ್ತಿ ಹೋಗಿವೆ. ಕೆಲವು ಕೆರೆ ಕುಂಟೆಗಳು ಮಾಯವಾಗಿ ಕ್ರೀಡಾಂಗಣ, ಬಸ್ ನಿಲ್ದಾಣ ಬೃಹತ್ ಕಟ್ಟಡಗಳಾಗಿ ಮಾರ್ಪಾಟಾಗಿವೆ.

**ಜಲಮಾಲಿನ್ಯಕ್ಕೆ ಕಾರಣಗಳು :**

ಸಂಸ್ಕರಿಸದ ಹಾಗೂ ಶುದ್ಧೀಕರಿಸದ ಕಸವು ನೀರಿಗೆ ಸೇರುವುದು. ನಗರ ಪಟ್ಟಣಗಳಿಂದ ಹೊರಬರುವ ಚರಂಡಿ ಮತ್ತು ಶೌಚಾಲಯಗಳ ಹೊಲಸು ನೀರು ಸೇರುವುದು. ರಾಸಾಯನಿಕ, ಕಬ್ಬಿಣದ ಉಕ್ಕು ಕಾರ್ಖಾನೆ ಹಾಗೂ ಚರ್ಮ ಕೈಗಾರಿಕೆಗಳಿಂದ ಹೊರಬರುವ ವಿಷಯುಕ್ತ ಪದಾರ್ಥಗಳು ನೀರಿನ ಮೂಲಗಳನ್ನು ಸೇರುವುದು. ರಸಗೊಬ್ಬರಗಳ ಕಾರ್ಖಾನೆ ಹಾಗೂ ಅವುಗಳ ಬಳಕೆಯಿಂದಾಗಿ ನೈಟ್ರೇಟ್, ಪಾಸ್ಫೇಟ್‌ಗಳು ಭೂಮಿಗೆ ಬಿದ್ದು ಹರಿಯುವ ಮಳೆಯೊಂದಿಗೆ ಬೆರೆತು ನದಿ, ಕಾಲುವೆ, ಕೆರೆಗಳಿಗೆ ಸೇರುತ್ತವೆ. ಸಮುದ್ರದಲ್ಲಿ ಹಡಗು ಮತ್ತು ಅನಿಲ ದುರಂತಗಳಿಂದಾಗಿ ಪೆಟ್ರೋಲಿಯಂ ಉತ್ಪನ್ನಗಳು ನೀರನ್ನು ಸೇರಿ ಮಲಿನಗೊಳಿಸುತ್ತವೆ. ಪ್ರಸ್ತುತ ಅಂತರ್ಜಲದ ಮಟ್ಟ ತೀವ್ರ ಕುಸಿದಿದ್ದು ಇಂದು ೧೦೦೦ ದಿಂದ ೧೫೦೦ ಅಡಿ ಆಳದವರೆಗೆ ಇಳಿದಿದೆ. ಈ ಅಂತರಾಳದ ನೀರಿನಲ್ಲಿ ಹಲವಾರು ಲವಣಾಂಶಗಳು ಅಧಿಕ ಪ್ರಮಾಣದಲ್ಲಿವೆ. ಅವು ಯಾವುವೆಂದರೆ ಕ್ಯಾಲ್ಷಿಯಂ ೭೫ ಮಿ.ಗ್ರಾಂ ಇರಬೇಕು, ಆದರೆ ೨೯೦ ಮಿ.ಗ್ರಾಂ. ಇದೆ. ಸಲ್ಫೇಟ್ –೨೦೦ ಮಿ.ಗ್ರಾಂ ಇರಬೇಕು ಆದರೆ ೪೭೮ ಮಿ.ಗ್ರಾಂ ಇದೆ, ನೈಟ್ರೇಟ್ ೫೦ ಮಿ.ಗ್ರಾಂ ಇರಬೇಕು, ಆದರೆ ೨೦೧ ಮಿ.ಗ್ರಾಂ ಇದೆ. ಇವಲ್ಲದೆ ಆರ್ಸೆನಿಕ್, ಪ್ಲೋರೈಡ್, ಕಬ್ಬಿಣದ ಅಕ್ಸೈಡ್ ಕಬ್ಬಿಣದ ಸಲ್ಫೈಡ್‌ಗಳು ಮಿತಿಗಿಂತ ಜಾಸ್ತಿ ಇವೆ. ಇದರಿಂದ ಆರೋಗ್ಯಕ್ಕೆ ಹಾನಿ.

©KTBS Not to be republished

**ಜಲಮಾಲಿನ್ಯದ ದುಷ್ಪರಿಣಾಮಗಳು :**

ಮೂತ್ರಪಿಂಡದ ವೈಫಲ್ಯ, ಚರ್ಮ ಕಾಯಿಲೆ, ಮೂಳೆಗೆ ಸಂಬಂಧಿಸಿದ ರೋಗಗಳು. ರಾಸಾಯನಿಕ ಗೊಬ್ಬರದಂಶಗಳು ನೀರಿಗೆ ಸೇರಿದರೆ ನೀರಿನ ಮೇಲ್ಪದರದಲ್ಲಿ ಪಾಚಿ ಬೆಳೆದು ಸೂರ್ಯ ಕಿರಣಗಳು ನೀರಿನ ಮೇಲೆ ಬೀಳುವುದಿಲ್ಲ ಹಾಗೂ ಅವು ನೀರಿನಲ್ಲಿರುವ ಆಮ್ಲಜನಕದ ಪ್ರಮಾಣವನ್ನು ಕಡಿಮೆ ಮಾಡುತ್ತವೆ. ಇದರಿಂದ ಆಮ್ಲಜನಕದ ಕೊರತೆಯಿಂದಾಗಿ ಜಲಚರಗಳು ನಾಶವಾಗುತ್ತವೆ. ಕೊಳಚೆ ಪ್ರದೇಶದ ನೀರು ಬಳಸಿ ಬೆಳೆಯುವ ತರಕಾರಿ, ಹಣ್ಣು ವಿಷಯುಕ್ತವಾಗುತ್ತವೆ. ಕೈಗಾರಿಕಾ ಕಶ್ಮಲಗಳಲ್ಲಿರುವ ಸೀಸ, ಕ್ಯಾಡ್ಮಿಯಂ, ಡಿ.ಡಿ.ಟಿ. ಇವುಗಳು ಮೀನು ಹಾಗೂ ಇನ್ನಿತರ ಜಲಚರಗಳಲ್ಲಿ ಸೇರಿ ನಾಶವಾಗುತ್ತವೆ ಹಾಗೂ ಅವುಗಳನ್ನು ಬಳಸುವ ಮಾನವನಿಗೆ ತೊಂದರೆಯುಂಟಾಗುತ್ತದೆ.

**ಜಲಮಾಲಿನ್ಯ ತಡೆಗಟ್ಟುವುದು :**

ಇಷ್ಟು ತೀವ್ರತೊಂದರೆ ಉಂಟುಮಾಡುವ ಜಲಮಾಲಿನ್ಯವನ್ನು ತಡೆಯಲು ಈ ಕ್ರಮಗಳನ್ನು ಕೈಗೊಳ್ಳಬೇಕು. ಕಾರ್ಖಾನೆಗಳಿಂದ ಬರುವ ಕಲ್ಮಶಗಳನ್ನು ಶುದ್ಧೀಕರಿಸಿ ಬಿಡಬೇಕು. ನಗರ ಪಟ್ಟಣಗಳಿಂದ ಹೊರಬರುವ ಕೊಳಚೆ ನೀರನ್ನು ಶುದ್ಧೀಕರಣ ಮಾಡಿ ಮರು ಬಳಸಬೇಕು. ಮಳೆ ನೀರು ಸಂಗ್ರಹ ಮತ್ತು ಇಂಗುವಿಕೆಗೆ ಕ್ರಮ ಕೈಗೊಳ್ಳಬೇಕು. ನೀರನ್ನು ಮಿತವಾಗಿ ಬಳಸಬೇಕು. ನೀರಿನ ಮೂಲಗಳನ್ನು ಉಳಿಸಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಗಿಡ, ಮರ, ಬೆಳೆಸಬೇಕು. ಹೀಗೆ ನಾವು ನೀರನ್ನು ಸಂರಕ್ಷಿಸದಿದ್ದರೆ ಈಗ ಪೆಟ್ರೋಲ್, ಡೀಸಲ್ ಕೊಳ್ಳುವ ಹಾಗೆ ಬಂಕ್‌ಗಳಲ್ಲಿ ನೀರನ್ನು ಕೊಳ್ಳಬೇಕಾಗಬಹುದು. ಪ್ರತಿ ವರ್ಷ ಮಾರ್ಚ್ ೨೨ ರಂದು 'ವಿಶ್ವ ಜಲ ದಿನಾಚರಣೆ' ಆಚರಿಸಿ ನೀರಿನ ಮಹತ್ವ ಎಲ್ಲರಿಗೂ ತಿಳಿಯುವಂತೆ ಮಾಡಬೇಕು.

**"ನೀರು ಉಳಿಸಿ, ಜೀವವನ್ನು ರಕ್ಷಿಸಿ"**

* * * *

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

೧. ಜೀವಗಳ ಜೀವನಾಧಾರ ಯಾವುದು?

೨. ನಾಗರಿಕತೆಗಳು ಎಲ್ಲಿ ಪ್ರವರ್ಧಮಾನಕ್ಕೆ ಬಂದವು?

೩. ಭೂಮಿಯ ಮೇಲೆ ನೀರಿನ ಪ್ರಮಾಣವೆಷ್ಟು?

೪. ನೀರಿನ ಮೂಲಗಳನ್ನು ಪಟ್ಟಿಮಾಡಿ.

೫. ನೀರು ಹೇಗೆ ಮಲಿನವಾಗುತ್ತದೆ?

೬. ಮಲಿನ ನೀರನ್ನು ಬಳಸಿದಾಗ ಉಂಟಾಗುವ ದುಷ್ಪರಿಣಾಮಗಳನ್ನು ತಿಳಿಸಿ.

೭. ನಿಮ್ಮ ಗ್ರಾಮ / ಪ್ರದೇಶದಲ್ಲಿ ಆಗುತ್ತಿರುವ ಜಲಮಾಲಿನ್ಯ ಕುರಿತು ಬರೆಯಿರಿ.

೮. ಜಲ ಮಾಲಿನ್ಯ ತಡೆಗಟ್ಟಲು ಅನುಸರಿಸಬೇಕಾದ ಕ್ರಮಗಳೇನು?

೯. ನೀರನ್ನು ನೀವು ಹೇಗೆ ಉಳಿತಾಯ ಮಾಡುವಿರಿ?

©KTBS Not to be republished

# ೩. ಸರ್ ಎಂ. ವಿಶ್ವೇಶ್ವರಯ್ಯ

**ಜನನ :** ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ೧೮೬೦ ರ ಆಗಸ್ಟ್ ತಿಂಗಳ ೨೭ ರಂದು ಆಗಿನ ಮೈಸೂರು ಸಂಸ್ಥಾನದ ಕೋಲಾರ ಜಿಲ್ಲೆಯ, ಚಿಕ್ಕಬಳ್ಳಾಪುರ ತಾಲ್ಲೂಕಿನ ಮುದ್ದೇನಹಳ್ಳಿ ಎಂಬ ಗ್ರಾಮದಲ್ಲಿ ಜನಿಸಿದರು. ತಂದೆ ಶ್ರೀನಿವಾಸ ಶಾಸ್ತ್ರಿ, ತಾಯಿ ವೆಂಕಟಲಕ್ಷ್ಮಮ್ಮ. ಇದೇ ವರ್ಷದಲ್ಲಿ ಭಾರತದ ಮಹಾಪುರುಷರಾದ ಜವಾಹರಲಾಲರ ತಂದೆ ಮೋತಿಲಾಲ್ ನೆಹರೂ, ಬನಾರಸ್ ವಿಶ್ವವಿದ್ಯಾಲಯದ ಸ್ಥಾಪಕ ಪಂಡಿತ ಮದನಮೋಹನ ಮಾಲವೀಯ, ನೊಬೆಲ್ ಪ್ರಶಸ್ತಿ ವಿಜೇತ, ಕವಿ ಸಾರ್ವಭೌಮ ರವೀಂದ್ರನಾಥ ಠಾಕೂರರು ಜನ್ಮತಾಳಿದ್ದು ಗಮನಾರ್ಹ.

**ಗುರುಭಕ್ತಿ :** ವಿಶ್ವೇಶ್ವರನಿಗೆ ಗುರುಗಳಲ್ಲಿ ಭಯಭಕ್ತಿ, ಪೂಜ್ಯಭಾವನೆ ಇದ್ದವು. ಉಪಾಧ್ಯಾಯ-ರಿಗೂ ಬುದ್ಧಿವಂತ ಶಿಷ್ಯನಲ್ಲಿ ಪ್ರೀತಿ ಇತ್ತು. ಅವರು ತನ್ನ ಶಿಷ್ಯ ತುಂಬ ಬುದ್ಧಿವಂತ ಎಂದು ಎಲ್ಲರಲ್ಲೂ ಹೇಳಿಕೊಳ್ಳುತ್ತಿದ್ದರು, ಹೀಗೆ ಶಿಷ್ಯನಲ್ಲಿ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದ ಉಪಾಧ್ಯಾಯರಲ್ಲಿ ಕೃಷ್ಣಗಿರಿ ರಾಘವೇಂದ್ರರಾಯರೂ ಒಬ್ಬರು.

**ಕೀರ್ತಿ :** ವಿಶ್ವೇಶ್ವರಯ್ಯನವರಿಗೆ ಜೀವನ ಆಚಂದ್ರಾರ್ಕ ಕೀರ್ತಿ ಗಳಿಸಿಕೊಟ್ಟಿತು. ಅನಪೇಕ್ಷಿತವಾಗಿ ಅವರಿಗೆ ದೊರೆತ ಬಿರುದುಬಾವಲಿಗಳು ಪುರಸ್ಕಾರಗಳು ಇದಕ್ಕೆ ಸಾಕ್ಷಿ ಆಗಿವೆ. ವಿದ್ಯಾರ್ಥಿದೆಸೆಯಲ್ಲಿ ದೊರೆತ ಹಲವಾರು ಪದಕಗಳು. ಬ್ರಿಟಿಷ್ ಪ್ರಭುತ್ವದಿಂದ ಸಿ.ಪಿ.ಇ. ಮತ್ತು ಕೆ.ಸಿ.ಐ.ಇ. ಬಿರುದು. ಕಲ್ಕತ್ತ, ಪಾಟ್ನ, ಅಲಹಾಬಾದ್, ಜಾಧವಪುರ, ಬೊಂಬಾಯಿ, ವಾರಣಾಸಿ, ಆಂಧ್ರ, ಮೈಸೂರು ವಿಶ್ವವಿದ್ಯಾಲಯಗಳಿಂದ ಗೌರವ ಪದವಿಗಳು. ಹಲವಾರು ಸಂಘ ಸಂಸ್ಥೆಗಳಿಂದ ಸನ್ಮಾನ, ಗೌರವ ಪದಾಧಿಕಾರ. ಕಡೆಗೆ ಸ್ವತಂತ್ರ ಭಾರತ ಸಲ್ಲಿಸಬಹುದಾದ ಅತ್ಯುನ್ನತ ಪ್ರಶಸ್ತಿ 'ಭಾರತ ರತ್ನ', ತನ್ನ ಬಯಕೆಗಳೆಲ್ಲ ಪೂರ್ಣವಾದುವು ಎಂದು ಹೇಳಿಕೊಳ್ಳಲು ಆಧಾರ.

**ವ್ಯಕ್ತಿತ್ವ :** ವಿಶ್ವೇಶ್ವರಯ್ಯನವರು ಹುಟ್ಟಿನಿಂದ ಬಡವರು, ಮನೆತನದಿಂದ ಸಭ್ಯರು, ಬೆಳವಣಿಗೆಯಿಂದ ಸಂಯಮಿ, ಸ್ವಭಾವದಿಂದ ಸಜ್ಜನರು. ಅಜಾತಶತ್ರು, ಪರೋಪಕಾರಿ, ವೃತ್ತಿಯಿಂದ ಎಂಜಿನಿಯರ್, ಸಂದರ್ಭದಿಂದ ದಿವಾನ್, ಮನೋಧರ್ಮದಿಂದ ವಿಜ್ಞಾನಿ, ಶ್ರದ್ಧೆಯಿಂದ ಉದ್ಯಮಿ. ಅವರು ಕೈಗೊಂಡಿದ್ದುದು ಕಠೋರ ವ್ರತ. ಅದನ್ನು ತಪ್ಪದೆ ನಡೆಸುವ ಧೈರ್ಯ, ಸ್ಥೈರ್ಯ, ಸಾಮರ್ಥ್ಯ ಅವರಲ್ಲಿದ್ದುವು. ದುಡಿದರೆ ಉದ್ಧಾರ, ದುಡಿಯದಿದ್ದರೆ ವಿನಾಶ. ಈ ಸಂದೇಶ ಮುಟ್ಟಿಸುವ ಉದ್ದೇಶದಿಂದ ಸ್ವತಃ ದುಡಿದರು. ದುಡಿಮೆಯ ಹಿರಿಮೆ ತೋರಿಸಿಕೊಟ್ಟರು. ನಾಡಿನ ಏಳ್ಗೆಗೆ ದುಡಿಯಬೇಕೆಂದು ತಮ್ಮ ಆರೋಗ್ಯ ಕಾಪಾಡಿಕೊಂಡು ಬಂದರು, ದುಡಿದು ದೊಡ್ಡವರಾದರು. ಆರೋಗ್ಯವಂತರಾಗಿರಲು ಪ್ರತಿದಿನ ಮೂರು - ನಾಲ್ಕು ಮೈಲಿ ನಡೆಯುವ ಅಭ್ಯಾಸವನ್ನಿರಿಸಿಕೊಂಡಿದ್ದರು.

©KTBS Not to be republished

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :**

೧. ವಿಶ್ವೇಶ್ವರಯ್ಯನವರು ಯಾವಾಗ ಜನಿಸಿದರು?

೨. ವಿಶ್ವೇಶ್ವರಯ್ಯನವರ ಜನ್ಮಸ್ಥಳ ಯಾವುದು?

೩. ವಿಶ್ವೇಶ್ವರಯ್ಯನವರ ತಂದೆ-ತಾಯಿಯ ಹೆಸರೇನು?

೪. ವಿಶ್ವೇಶ್ವರಯ್ಯನವರ ಗುರುಭಕ್ತಿಯನ್ನು ಮೆಚ್ಚುತ್ತಿದ್ದ ಗುರುಗಳು ಯಾರು?

೫. ಭಾರತ ಸರ್ಕಾರ ವಿಶ್ವೇಶ್ವರಯ್ಯನವರಿಗೆ ಕೊಡಮಾಡಿದ ಅತ್ಯುನ್ನತ ಪ್ರಶಸ್ತಿ ಯಾವುದು?

೬. ವಿಶ್ವೇಶ್ವರಯ್ಯನವರ ವ್ಯಕ್ತಿತ್ವದ ವಿಶೇಷತೆಗಳೇನು?

೭. ೧೮೬೦ ರಲ್ಲಿ ಜನಿಸಿದ ಮಹಾಪುರುಷರನ್ನು ಪಟ್ಟಿಮಾಡಿ.

೮. ವಿಶ್ವೇಶ್ವರಯ್ಯನವರು ಜನತೆಗೆ ನೀಡಿದ ಸಂದೇಶವೇನು?

* * * *

**ಚಟುವಟಿಕೆಗಳು :**

ಇಲ್ಲಿ ನೀಡಿರುವ ಸುಳಿವುಗಳನ್ನು ಆಧರಿಸಿ ವಾಕ್ಯವೃಂದಗಳನ್ನು ರಚಿಸಿ ತಕ್ಕ ಶೀರ್ಷಿಕೆಯನ್ನು ನೀಡಿರಿ.

**೧. ವ್ಯಕ್ತಿ ವಿಚಾರ**

* ನಿಮ್ಮ ಪ್ರದೇಶದ / ಗ್ರಾಮದ ಪ್ರಸಿದ್ಧ ವ್ಯಕ್ತಿ
* ಜನನ – ಬಾಲ್ಯ
* ಶಿಕ್ಷಣ – ಪ್ರಾಥಮಿಕ, ಪ್ರೌಢ ಶಿಕ್ಷಣ, ಉನ್ನತ ಶಿಕ್ಷಣ
* ವೃತ್ತಿ ಸಾಧನೆ
* ಪ್ರಶಸ್ತಿಗಳು
* ವ್ಯಕ್ತಿತ್ವ

**೨. ವಿಷಯ ವಿಚಾರ – ಆರೋಗ್ಯ**

* ಆರೋಗ್ಯದ ಅರ್ಥ
* ಆರೋಗ್ಯದ ಅವಶ್ಯಕತೆ
* ದೈಹಿಕ ಮತ್ತು ಮಾನಸಿಕ ಆರೋಗ್ಯ
* ಉತ್ತಮ ಆರೋಗ್ಯಕ್ಕೆ – ಆರೋಗ್ಯಕರ ಅಭ್ಯಾಸಗಳು.



Not to be republished ©KTBS

**ಚಟುವಟಿಕೆ :**

**ಕೆಳಗೆ ನೀಡಿರುವ ಗದ್ಯಭಾಗವನ್ನು ಓದಿ ಬಳಸಲಾದ ಲೇಖನ ಚಿಹ್ನೆಗಳ ಅರ್ಥವನ್ನು ಗ್ರಹಿಸಿರಿ.**

"ತರಗೆಲೆಯನ್ನು ಕುಣಿಸುವ ಗಾಳಿ ಬಂಡೆಗಲ್ಲನ್ನು ಏನು ಮಾಡಬಲ್ಲುದು ಅಣ್ಣಾ? ನಾನು ನಿಮ್ಮಷ್ಟು ತಿಳಿದವಳಲ್ಲ ಆದರೂ ಕಷ್ಟ, ದುಃಖಗಳಿಂದ ನಾನು ಹೀಗಾದೆ ಎನ್ನುವವರು ತಮ್ಮ ದೌರ್ಭಾಗ್ಯದ ದೋಷವನ್ನು ಕಂಡವರ ನೆತ್ತಿಯ ಮೇಲೆ ಹೊರಿಸಲೆತ್ನಿಸುವವರು ಎಂದೇ ತೋರುತ್ತದೆ. ಅದು ಹೋಗಲಿ ಬಿಡಿ ಅಣ್ಣಾ, ನೀವಿಲ್ಲಿಗೆ ಬಂದುದು ಈ ಗೋಳು ಕತೆಯನ್ನು ಕೇಳುವ ಸಲುವಾಗಿಯಲ್ಲ, ಬಾಹುಬಲಿಸ್ವಾಮಿಯ ವಿಗ್ರಹವನ್ನು ನೋಡಲೆಂದು. ಭರತಣ್ಣ ಏನಾದರೂ ಹೇಳಲಿ ವಿಗ್ರಹವನ್ನು ನಾನು ನಿಮಗೆ ತೋರಿಸುತ್ತೇನೆ" ಎಂದಳು ವೃದ್ಧೆ.

**ಈ ಗದ್ಯಭಾಗದಲ್ಲಿ ಬಳಸಲಾದ ಲೇಖನ ಚಿಹ್ನೆಗಳು:**

" " ಉದ್ಧರಣ ಚಿಹ್ನೆ

. ಪೂರ್ಣವಿರಾಮ

, ಅಲ್ಪವಿರಾಮ

? ಪ್ರಶ್ನಾರ್ಥಕ ಚಿಹ್ನೆ

**ಈ ಕೆಳಗಿನ ವಿಷಯವನ್ನು ಓದಿಕೊಂಡು ಅಗತ್ಯ ಇರುವಲ್ಲಿ ಸೂಕ್ತ ಲೇಖನ ಚಿಹ್ನೆಗಳನ್ನು ನೀಡಿರಿ.**

ಒಂದು ಗಳಿಗೆ ಒಂದೇ ಒಂದು ಗಳಿಗೆಯ ಹಿಂದೆ ಭೀತಿಯಲ್ಲಿ ಅರಳಿಯ ಚಿಗುರೆಲೆಯಂತೆ ಕಂಪಿಸಿದ ಈ ಕನ್ಯೆ ಈಗ ಹೆಡೆ ತುಳಿಸಿಕೊಂಡ ಸರ್ಪಿಣಿಯಂತೆ ಕೆರಳಿ ನಿಂತಿದ್ದಾಳೆ ಈ ಕೋಮಲ ಕಾಯದಲ್ಲಿ ಲಾವಣ್ಯಲತೆಯಾದ ಹೆಣ್ಣಿನಲ್ಲಿ ನಾನೂ ಹೆದರುವಂತೆ ಮಾಡುವ ಕ್ರೋಧ ಎಲ್ಲಿ ಹುದುಗಿತ್ತು ಸ್ವಲ್ಪ ಹೊತ್ತಿನ ಹಿಂದೆ ಭೀತಿಯಲ್ಲಿ ಗಟ್ಟಿಯಾಗಿ ಉಸಿರು ಬಿಟ್ಟರೂ ಸಿಡಿದು ಹೋಗುವ ಒಂದು ತೆಳುವಾದ ಗಾಜಿನ ಗೊಂಬೆಯಂತಿದ್ದ ಈ ಬಾಲೆ ಈಗ ಅಪಮಾನ ಜನ್ಯವಾದ ರೋಷದಲ್ಲಿ ಮನಸ್ಸು ಮಾಡಿದರೆ ಈ ಗಳಿಗೆಯಲ್ಲಿ ಜಗತ್ತನ್ನೆಲ್ಲಾ ನುಂಗಬಲ್ಲೆ ಎನ್ನುವ ಕಾಳಿಯಂತೆ ಕಾಣುತ್ತಿದ್ದಾಳೆ ಒಂದು ಗಳಿಗೆಯಲ್ಲಿ ಎಂಥ ಅದ್ಭುತ ಪರಿವರ್ತನೆ.

©KTBS Not to be republished